IN ANY EMERGENCY
DIAL
100
TELANGANA POLICE
www.tspolice.gov.in
@ Telangana State Police



ರಾಷ್ಟ್ರ ವಿದ್ಯಾ, ಪರಿಶೋಧನೆ, ಶಿಕ್ಷಣ ಸಂಸ್ಥೆ
ತೆಲಂಗಾಣ, ಹೈದರಾಬಾದು.

ತೆಲಂಗಾಣ ಸರ್ಕಾರದ ಉಚಿತ ವಿತರಣೆ

# ಪರಿಸರ ವಿಜ್ಞಾನ

# ನಾವು–ನಮ್ಮ ಪರಿಸರಗಳು

## ಮೂರನೆಯ ತರಗತಿ

FREE



ತೆಲಂಗಾಣ ಸರ್ಕಾರ ಪ್ರಚುರಣೆ,ಹೈದರಾಬಾದು.

ತೆಲಂಗಾಣ ಸರ್ಕಾರದ ಉಚಿತ ವಿತರಣೆ

SCERT TELANGANA

# ಆಶಿಸಿದ ಅಭ್ಯಾಸದ ಫಲಿತಾಂಶಗಳು

## ಪರಿಸರ ವಿಜ್ಞಾನ
## 3ನೇ ತರಗತಿ

## ವಿದ್ಯಾರ್ಥಿಗಳು ಇವನ್ನೆಲ್ಲವನ್ನು ಕಲಿಯುತ್ತಾರೆ.....

- ಕುಟುಂಬ ಸದಸ್ಯರ ಜೊತೆಗೆ ತಮಗೆ ಇರುವ ಸಂಬಂಧವನ್ನು ಯಾರು – ಯಾರು, ಏನೇನು ಆಗುತ್ತಾರೆ ಎಂಬುದನ್ನು ಗುರುತಿಸುತ್ತಾರೆ.
- ಮನೆಯಲ್ಲಿ/ಶಾಲೆಯಲ್ಲಿ/ಸುತ್ತ–ಮುತ್ತಲಿರುವ ವಸ್ತುಗಳ ಗುರುತುಗಳು (ಪಾತ್ರೆಗಳು, ಸ್ಟೌ, ಸ್ಥಳಾಂತರ, ಸೂಚನೆಗಳ ಬೋರ್ಡ್‌ಗಳು ಮೊದಲಾದವುಗಳು) ಕೆಲಸವನ್ನು (ಜನರು ಮಾಡುವ ಕೆಲಸ, ಅಡುಗೆ ಮಾಡುವ ವಿಧಾನ ಮೊದಲಾದವುಗಳು) ಗುರುತಿಸುತ್ತಾರೆ.
- ಪರಿಸರದಲ್ಲಿ, ಮನೆಯಲ್ಲಿ ಕೆಲವು ಬೇರೆ ಬೇರೆ ವಯಸ್ಸಿನವರು, ಪ್ರಾಣಿಗಳು, ಪಕ್ಷಿಗಳು ಆಹಾರದ ಅವಶ್ಯಕತೆಗಳು, ಆಹಾರವು, ನೀರು ಸಿಗುವ ವಿಧಾನ, ಅದರ ಉಪಯೋಗದ ಬಗ್ಗೆ ವಿವರಿಸುತ್ತಾರೆ.
- ಜೊತೆಗೆ ಜೀವಿಸುವಂತಹ ಕುಟುಂಬ ಸದಸ್ಯರ ಪಾತ್ರ, ಕುಟುಂಬದ ಪ್ರಭಾವ (ಗುಣಗಳು,ಲಕ್ಷಣಗಳು,ಅಭ್ಯಾಸಗಳು) ಕೆಲಸವಾಗುವ ಬಗ್ಗೆ ವಿವಿಧ ರೀತಿಯಲ್ಲಿ ವಿವರಿಸುತ್ತಾರೆ.
- ನಿತ್ಯಜೀವನದಲ್ಲಿ ಉಪಯೋಗಿಸುವ ವಸ್ತುಗಳ ಪರಿಮಾಣ, ಲಕ್ಷಣಗಳನ್ನು (ಬೊಗಸೆ, ಚಮಚ, ಜಗ್ಗು ಮುಂತಾದವುಗಳು) ಊಹಿಸುತ್ತಾರೆ.
- ವಿವಿಧ ಪದ್ಧತಿಯಲ್ಲಿ ಜಂತುಗಳನ್ನು,ಪಕ್ಷಿಗಳನ್ನು ಅವುಗಳ ಲಕ್ಷಣಗಳ,ಅವುಗಳು ಮಾಡುವ ಕೆಲಸದ ದೃಷ್ಟಿಯಿಂದ ಒಂದೇ ರೀತಿಯಾಗಿ ಇರುವಂತಹ ಒಂದು ಗುಂಪಾಗಿ,ಬೇರೆ ಬೇರೆಯಿರುವುದನ್ನು ಮತ್ತೊಂದು ಗುಂಪಾಗಿ ವಿಭಜಿಸುತ್ತಾರೆ.
- ಆಗಿನ ಮತ್ತು ಈಗಿನ (ಪೂರ್ವದಲ್ಲಿ, ಪ್ರಸ್ತುತದಲ್ಲಿ) ಬಳಸಿದ ವಸ್ತುಗಳು, ಮಾಡಿದ ಕೆಲಸಗಳು, ಹಾಕಿದ ಬಟ್ಟೆಗಳು, ಆಡಿದ ಆಟಗಳು, ಮಾಡಿದ ಕೆಲಸದ ಬಗ್ಗೆ ಬೇರೆ ಮಾಡಿ ಹೇಳುತ್ತಾರೆಯೇ.
- ಕೊಟ್ಟಿರುವ ಚಿತ್ರದಲ್ಲಿ ದಿಕ್ಕುಗಳು, ವಸ್ತುಗಳ ಸ್ಥಾನ, ಸ್ಥಳ (ಮನೆ, ತರಗತಿಯ ಕೋಣೆ, ಇವುಗಳ ಗುರುತಿನ ಜೊತೆಗೆ/ಸೂಚನೆಯ ಜೊತೆಗೆ, ಪದಗಳ ಜೊತೆಗೆ ಮಾತ್ರ ಗುರುತಿಸುತ್ತಾರೆ.)
- ಸೃಜನಾತ್ಮಕತೆಯ ಜೊತೆಗೆ ಚಿತ್ರಗಳನ್ನು ಗೀಚುವುದು, ಡಿಜೈನ್ ಮಾಡುವುದು, ಸಾಮಾನು ತಯಾರು ಮಾಡುವುದು, ಸಂಗೀತ, ವಸ್ತುಗಳ ಮುಂದೆ–ಹಿಂದೆ, ಮೇಲಿನ ಭಾಗದಲ್ಲಿ ಸುತ್ತಮುತ್ತಲಿನ ಭಾಗದಲ್ಲಿ ನೋಡುವ ಚಿತ್ರಗಳು, ಚಿತ್ರ ಪಟಗಳು, (ತರಗತಿ ಕೋಣೆ, ಮನೆಯ ಭಾಗದಲ್ಲಿ ಶಾಲೆಯಲ್ಲಿ) ಘೋಷಣೆ ಬರೆಯುವುದು, ಹಾಡನ್ನು ಬರೆಯುವುದು ಮಾಡುತ್ತಾರೆ.
- ಆಟಗಳು (ಸ್ಥಳ, ಕೋಣೆಯ ಒಳಗೆ, ಹೊರಗಡೆ) ಆಡುವ ನಿಯಮಗಳು, ಗುಂಪು ಕೆಲಸ ನಿಯಮಗಳು, ಪರಿಶೀಲಿಸುತ್ತಾರೆ.
- ಮನೆಯಲ್ಲಿ, ಪಾಠಶಾಲೆಯಲ್ಲಿ ಒಳ್ಳೆಯ/ಅಸಭ್ಯ ವರ್ತನೆಯ ಬಗ್ಗೆ ವಿವಿಧ ರೀತಿಯ ಆಟಗಳು, ಆಹಾರಗಳು, ಗುಂಪು ಕೆಲಸದ ಬಗ್ಗೆ ಮತ್ತು ನೀರು ಆಹಾರವನ್ನು ವ್ಯರ್ಥಮಾಡುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.
- ಪರಿಸರದಲ್ಲಿರುವ ಗಿಡಗಳು, ಪ್ರಾಣಿಗಳು, ವೃದ್ಧರು, ಅಂಗವಿಕಲರು, ಬೇರೆಯಾದ ಕುಟುಂಬಗಳ ಅನುಕಂಪದಯೆ ಅವರ ಮೇಲೆ ಬರುತ್ತದೆ.
- ಗ್ರಾಮದಲ್ಲಿನ ಸಾಮಾಜಿಕ ಸಂಸ್ಥೆಗಳು ಅವು ಮಾಡುವ ಕೆಲಸಗಳನ್ನು ವಿವರಿಸಬಲ್ಲರು.
- ವಿವಿಧ ಬಗೆಯ ಮನೆಗಳ ಬಗ್ಗೆ ವಿವರಿಸಬಲ್ಲರು. ಮನೆಗಳ ಮೇಲ್ಛಾವಣಿಗಳಿರುವುದರಿಂದ ಆಗುವ ಉಪಯೋಗ ವನ್ನು ವಿವರಿಸಬಲ್ಲರು.



ವಿದ್ಯಾ ಮಾ ಹಕ್ಕು
ಸರ್ವ ಶಿಕ್ಷಾ ಅಭಿಯಾನ

ತೆಲಂಗಾಣ ವಿದ್ಯಾ ಶಾಖೆ
ತೆಲಂಗಾಣ ಸರಕಾರ

ಎನ್ ಸಿ ಇ ಆರ್ ಟಿ
NCERT

## ನಾನು ಕೋರಿಕೊಳ್ಳುವ ಬದಲಾವಣೆ ನನ್ನಿಂದಲೇ ಬರುತ್ತದೆ.

1. ಯಾವಾಗಲೂ ನಾನು ಒಂದು ಕೈಚೀಲವನ್ನು ತೆಗೆದುಕೊಂಡು ಹೋಗುತ್ತೇನೆ. ಅಂಗಡಿಗಳಲ್ಲಿ ಕೊಡುವ ಪಾಲಿಥೀನ್ ಕವರ್‌ಗಳನ್ನು ಬೇಡ ಎನ್ನುತ್ತೇನೆ..
2. ಬೋರಿಂಗ್ / ಕೊಳಾಯಿಗಳಿಂದ ನೀರನ್ನು ನೇರವಾಗಿ ಅವಶ್ಯಕತೆಗೆ ತಕ್ಕಂತೆ ಪಾತ್ರೆಗಳಲ್ಲಿ ಹಿಡಿದುಕೊಂಡು ಬಳಸುತ್ತೇನೆ. ನೀರು ವ್ಯರ್ಥವಾಗುವುದನ್ನು ನಿಯಂತ್ರಿಸುತ್ತೇನೆ.
3. ವಿದ್ಯುತ್ತನ್ನು ಕಡಿಮೆ ಬಳಸಿ, ಪ್ರತಿ ತಿಂಗಳು ಕರೆಂಟ್ ಬಿಲ್ಲಿನ ಖರ್ಚನ್ನು ಕಡಿಮೆಗೊಳಿಸುತ್ತೇನೆ. ಕಾಲುಷ್ಯವನ್ನು ನಿಯಂತ್ರಿಸುತ್ತೇನೆ.
4. ಕಟ್ಟಿಗೆಯ ವಸ್ತುಗಳನ್ನು ಬಳಸುವದರ ಜೊತೆಗೆ, ಗಿಡಗಳನ್ನು ನಾನು ಬೆಳೆಸುತ್ತೇನೆ. ಮನೆಯ ಒಳಗಡೆ ಸುತ್ತಲೂ ಮತ್ತು ಹೊರಗಡೆ ಸಸ್ಯಗಳನ್ನು ನಾನೇ ನಾಟುತ್ತೇನೆ. ನಾಟಿಸುತ್ತೇನೆ, ಅವುಗಳನ್ನು ಕಾಪಾಡುತ್ತೇನೆ.
5. ಹಸಿ, ಒಣಗಿದ ವ್ಯರ್ಥ ಪದಾರ್ಥಗಳನ್ನು (ಕಸ) ಎರಡಾಗಿ ಬೇರೆ ಮಾಡುತ್ತೇನೆ. ಕಸವನ್ನು ಶೇಖರಿಸಿ ವ್ಯಕ್ತಿಗೆ ನೇರವಾಗಿ ನಾನೇ ಕೊಡುತ್ತೇನೆ.
6. ಹಳೆಯ ವಸ್ತುಗಳನ್ನು ಶೇಖರಿಸಿ ಇಲ್ಲವೆ ಮನೆಯಲ್ಲಿನ ಹಳೆಯ ವಸ್ತುಗಳನ್ನು ಅವಶ್ಯ ವಿರುವವರಿಗೆ ಕೊಡುತ್ತೇನೆ.
7. ಅನವಶ್ಯಕವಾದ ಪ್ರಯಾಣವನ್ನು ಕಡಿಮೆ ಮಾಡುತ್ತೇನೆ. ಅವಕಾಶ ಇದ್ದಾಗ ಇತರರೊಂದಿಗೆ ಕೂಡಿ ಪ್ರಯಾಣ ಮಾಡುತ್ತೇನೆ. ಸಾರ್ವಜನಿಕ ಪ್ರಯಾಣ ಸೌಕರ್ಯಗಳನ್ನು ಸಾಧ್ಯವಾದಷ್ಟು ಹೆಚ್ಚಾಗಿ ಉಪಯೋಗಿಸುತ್ತೇನೆ.
8. ಸೌರಶಕ್ತಿ, ಸೂರ್ಯನ ಬೆಳಕನ್ನು ಹಗಲೆಲ್ಲಾ ಉಪಯೋಗಿಸಿ ರಾತ್ರಿವೇಳೆಯಲ್ಲಿ ಕರೆಂಟು ಬಳಸುವುದನ್ನು ಸಾಧ್ಯವಾದಷ್ಟು ಕಡಿಮೆಗೊಳಿಸುತ್ತೇನೆ.
9. ಕಂಪ್ಯೂಟರ್‌ಗಳಲ್ಲಿ ಟಿಕೆಟ್ ಬುಕಿಂಗ್, ಈ– ಸೇವೆಗಳಲ್ಲಿ ಬಿಲ್ಲುಗಳನ್ನು ಸಲ್ಲಿಸುವುದರ ಮೂಲಕ ರಸ್ತೆಯ ಮೇಲೆ ಜನಸಂದಣಿಯನ್ನು ಇಂದನ ವ್ಯಯವನ್ನು, ವಾಯು ಕಾಲುಷ್ಯವನ್ನು ನಿಯಂತ್ರಿಸುತ್ತೇನೆ.
10. ಸುಖಮಯ ಜೀವನ ಶೈಲಿಗೆ ಈ ಹತ್ತು ಸೂತ್ರಗಳನ್ನು––––––––––––––––––––– ಹತ್ತು ಮಂದಿಗೆ ಹೇಳಿ, ಕನಿಷ್ಟ ಮೂರು ವ್ಯಕ್ತಿಗಳಿಗೆ ನನ್ನ ಹಾಗೆ ಪಾಲಿಸುವಂತೆ ಕೃಷಿ ಮಾಡುತ್ತೇನೆ.



ಹಚ್ಚ ಹಸಿರು - ಪ್ರಗತಿಗೆ ಉಸಿರು
ಗಿಡಗಳನ್ನು ಬೆಳೆಸೋಣ - ಮರಗಳನ್ನು ಉಳಿಸೋಣ
ಮರಗಳನ್ನು ನಾವು ರಕ್ಷಿಸಿದರೆ - ಅವು ನಮ್ಮನ್ನು ಕಾಪಾಡುತ್ತವೆ.
ನೀರಿನ ವ್ಯರ್ಥವನ್ನು ತಡೆಯೋಣ - ನೀರನ್ನು ಮಿತವಾಗಿ ಬಳಸೋಣ
ತಿನ್ನುವ ಮುನ್ನ, ತಿಂದ ನಂತರ ಕೈ ಕಾಲುಗಳನ್ನು ತೊಳೆಯೋಣ.
ಪರಿಸರವನ್ನು ಪರಿಶುಭ್ರವಾಗಿ ಇಡೋಣ -
ಆರೋಗ್ಯವನ್ನು ಕಾಪಾಡಿಕೊಳ್ಳೋಣ.

### ತೆಲಂಗಾಣ ಸರಕಾರ
### ಮಹಿಳಾ ಅಭಿವೃದ್ಧಿ ಮತ್ತು ಶಿಶು ಕಲ್ಯಾಣ ಶಾಖೆ - ಚೈಲ್ಡ್‌ಲೈನ್ ಫೌಂಡೇಷನ್

ಶಾಲೆಯಲ್ಲಾಗಲಿ, ಶಾಲೆಯ ಹೊರಗಾಗಲಿ ವೇದನೆಗೆ ಗುರಿ ಆಗುತ್ತಿದ್ದರೆ

ಆಪತ್ತಿನಲ್ಲಿ, ಕಷ್ಟದಲ್ಲಿ ಇರುವ ಮಕ್ಕಳನ್ನು ರಕ್ಷಿಸಲು

CHILD LINE 1098 NIGHT & DAY
24 HOUR NATIONAL HELPLINE

ಮಕ್ಕಳಿಂದ ಕೆಲಸ ಮಾಡಿಸುತ್ತಿರುವ ಅವರನ್ನು ಶಾಲೆಗೆ ಕಳಿಸದೆ ಬೇರೆ ಕೆಲಸಗಳಲ್ಲಿ ಉಪಯೋಗಿಸುತ್ತಿದ್ದರೆ

ಕುಟುಂಬದ ಸದಸ್ಯರಾಗಲಿ ಬಂಧುಗಳಾಗಲಿ ಇಬ್ಬಂದಿಕರವಾಗಿ ಅಸಭ್ಯವಾಗಿ ವರ್ತಿಸುತ್ತಿದ್ದರೆ

1098 (ಹತ್ತು - ಒಂಬತ್ತು - ಎಂಟು) ಉಚಿತ ಟೆಲಿಫೋನ್ ಸೇವಾ ಸೌಕರ್ಯಕ್ಕಾಗಿ ಫೋನ್ ಮಾಡಿರಿ.

# ನಾವು – ನಮ್ಮ ಪರಿಸರಗಳು

## ಪರಿಸರ ವಿಜ್ಞಾನ ಮೂರನೆಯ ತರಗತಿ

Environmental Studies Class-III
(Kannada Medium)


### ಸಂಪಾದಕರು

**ಪ್ರೊಫೆಸರ್ ವಿ.ಸುಧಾಕರ್**
ಆಂಗ್ಲ, ವಿದೇಶಿ ಭಾಷೆಗಳ ವಿಶ್ವವಿದ್ಯಾಲಯ,(EFLU) ಹೈದರಾಬಾದ್.

**ಡಾ॥ ಎನ್. ಉಪೇಂದ್ರರೆಡ್ಡಿ**
ಪ್ರೊಫೆಸರ್, ವಿದ್ಯಾ ಪ್ರಣಾಳಿಕೆ, ಪಠ್ಯಪುಸ್ತಕ ವಿಭಾಗ,
ರಾಷ್ಟ್ರ ವಿದ್ಯಾ ಸಂಶೋಧನಾ ಶಿಕ್ಷಣ ಸಂಸ್ಥೆ, ಹೈದರಾಬಾದ್.

**ಶ್ರೀ ಬಿ.ಆರ್. ಜಗದೀಶ್ವರ್ ಗೌಡ್**
ಪ್ರಿನ್ಸಿಪಾಲ್, ಜಿಲ್ಲಾ ವಿದ್ಯಾ ಶಿಕ್ಷಣ ಸಂಸ್ಥೆ, ಅದಿಲಾಬಾದ್.

### ವಿಷಯ ನಿಪುಣರು

**ಶ್ರೀ ಸುವರ್ಣ ವಿನಾಯಕ್**
ಕೋ–ಆರ್ಡಿನೇಟರ್, ಎಸ್.ಸಿ.ಇ.ಆರ್.ಟಿ, ಹೈದರಾಬಾದ್.

### ವಿಷಯ ನಿಪುಣರು

**ಶ್ರೀ ಅಲೆಕ್ಸ್ ಎಂ.ಜಾರ್ಜ್**
ಏಕಲವ್ಯ, ಮಧ್ಯಪ್ರದೇಶ್

**ಶ್ರೀ ಕಮಲ್ ಮಹೇಂದ್ರೂ**
ವಿಧ್ಯಾಭವನ್ ಸೊಸೈಟಿ, ಉದಯಪುರ್

## ಪಠ್ಯ ಪುಸ್ತಕ ಅಭಿವೃದ್ಧಿ, ಪ್ರಚುರಣೆ ಸಮಿತಿ

**ಶ್ರೀಮತಿ ಬಿ.ಶೇಷುಕುಮಾರಿ**
ಸಂಚಾಲಕರು,
ರಾಷ್ಟ್ರ ವಿದ್ಯಾ ಪರಿಶೋಧನೆ ಶಿಕ್ಷಣ
ಸಂಸ್ಥೆ, ಹೈದರಾಬಾದ್

**ಡಾ॥ ಎನ್. ಉಪೇಂದ್ರರೆಡ್ಡಿ**
ಪ್ರೊಫೆಸರ್, ವಿದ್ಯಾ ಪ್ರಣಾಳಿಕೆ,
ಪಠ್ಯ ಪುಸ್ತಕ ವಿಭಾಗ,
ರಾಷ್ಟ್ರ ವಿದ್ಯಾ ಪರಿಶೋಧನೆ ಶಿಕ್ಷಣ
ಸಂಸ್ಥೆ, ಹೈದರಾಬಾದ್.

**ಶ್ರೀ ಬಿ.ಸುಧಾಕರ್**
ಸಂಚಾಲಕರು,
ಸರ್ಕಾರಿ ಪಠ್ಯಪುಸ್ತಕ
ಮುದ್ರಣಾಲಯ, ಹೈದರಾಬಾದ್



## ತೆಲಂಗಾಣ ಸರ್ಕಾರದ ಮುದ್ರಣ, ಹೈದರಾಬಾದ್


SCERT TELANGANA

© Government of Andhra Pradesh, Hyderabad

*New Edition*

*First Published 2012*
*New Impressions 2013, 2014, 2017, 2018, 2019, 2020.*

**All rights reserved**

No part of this publication may be reproduced, stored in a retrieval system, or transmitted, in any form or by any means without the prior permission in writing of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purchaser.

The copy right holder of this book is the Director of School Education, Hyderabad, Telangana.

This Book has been printed on 70 G.S.M. Maplitho
Title Page 220 G.S.M. White Art Card

**ತೆಲಂಗಾಣ ಸರ್ಕಾರದ ಉಚಿತ ವಿತರಣೆ 2020–21**

*Printed in India*
at M/s. Padmaja Printers Pvt. Ltd., Hyderabad.
for the Telangana Govt. Text Book Press,
Mint Compound, Hyderabad,
Telangana.

SCERT TELANGANA

# ಮೊದಲ ಮಾತು

ಮಾನವರೆಲ್ಲರೂ ಸಂಘಜೀವಿಗಳು. ಆಯಾ ಸಮಾಜಕ್ಕೆ ಸೇರಿದ ನಿಯಮಗಳಿಂದ, ಜೀವನ ವಿಧಾನಗಳಲ್ಲಿ ಮಿಳಿತವಾಗುವುದರ ಮೂಲಕ ಆ ಸಮಾಜದಲ್ಲಿ ಜೀವಿಸಲ್ಪಡುತ್ತಾರೆ. ಇದಕ್ಕಾಗಿ ಮಕ್ಕಳೆಲ್ಲರಿಗೆ ತಮ್ಮ ಸುತ್ತಲೂ ಇರುವ ಪರಿಸರಗಳ ಕುರಿತು, ಸಮಾಜಗಳ ಕುರಿತು ತಿಳುವಳಿಕೆ ಉಂಟಾಗಬೇಕು. ಪ್ರಾಥಮಿಕ ಸ್ಥಾಯಿಯಲ್ಲಿ ಪರಿಸರ ವಿಜ್ಞಾನದ ಹೆಸರಿನಿಂದ ಕಲಿತುಕೊಂಡರೆ, ಪ್ರಾಥಮಿಕೋನ್ನತ, ಉನ್ನತ ಸ್ಥಾಯಿಯಲ್ಲಿ ಸಮಾಜ ಶಾಸ್ತ್ರ, ವಿಜ್ಞಾನ ಶಾಸ್ತ್ರದ ಹೆಸರಿನಿಂದ ಮತ್ತಷ್ಟು ವಿಸ್ತೃತವಾಗಿ ಕಲಿತುಕೊಳ್ಳುತ್ತಾರೆ. ಪ್ರಾಥಮಿಕ ಸ್ಥಾಯಿಯಲ್ಲಿ ಮಕ್ಕಳು ತಮ್ಮ ಸುತ್ತಲೂ ಇರುವ ಪರಿಸರಗಳ ಕುರಿತು, ಪರಿಸರಗಳ ಮೂಲಕ, ಪರಿಸರಗಳಿಗೋಸ್ಕರ ಅಭ್ಯಸಿಸಬೇಕಾಗುತ್ತದೆ.

ರಾಷ್ಟ್ರೀಯ ವಿದ್ಯಾ ಪ್ರಣಾಳಿಕಾ ಕಾರ್ಯ್ದೆ 2005 (NCF) ಉಚಿತ ನಿರ್ಬಂದ ವಿದ್ಯಾಹಕ್ಕು ಕಾನೂನು 2009 ಮಾರ್ಗದರ್ಶಕಗಳ ಪ್ರಕಾರ ನಮ್ಮ ರಾಷ್ಟ್ರ ವಿದ್ಯಾಪ್ರಣಾಳಿಕಾ ವ್ಯಾಪ್ತಿ ಪತ್ರ 2011 (APSCF) ರೂಪೊಂದಿಸಿದ್ದಾರೆ. ಇವುಗಳ ಪ್ರಕಾರ ತರಗತಿ ವಾರು ಸಾಧಿಸಬೇಕಾದ ವಿದ್ಯಾ ಪ್ರಮಣಗಳನ್ನು ಕೂಡಾ ನಿರ್ಧರಿಸಿದ್ದಾರೆ. ಇವುಗಳನ್ನು ಸಾಧಿಸಲಿಕ್ಕಾಗಿ ರಾಷ್ಟ್ರೀಯ ವಿದ್ಯ, ಪರಿಶೋಧನೆ, ಶಿಕ್ಷಣ ಸಂಸ್ಥೆ (NCERT) ಇತಿವೃತ್ತಗಳು, ರಾಷ್ಟ್ರ ವಿದ್ಯಾ ಪ್ರಮಾಣಗಳನ್ನು, ಪಠ್ಯಕ್ರಮವನ್ನು ಪರಿಗಣನೆಗೆ ತೆಗೆದುಕೊಂಡು 3ನೇಯ ತರಗತಿಗಾಗಿ ಪರಿಸರ ವಿಜ್ಞಾನ ಪಠ್ಯಪುಸ್ತಕವನ್ನು "ನಾವು – ನಮ್ಮ ಪರಿಸರಗಳು" ಎಂಬ ಹೆಸರಿನಿಂದ ರೂಪಿಸಿದ್ದಾರೆ.

ಈ ಪಠ್ಯಪುಸ್ತಕದಲ್ಲಿ ಕುಟುಂಬ, ಸ್ನೇಹಿತರು ಅವರ ಮಧ್ಯ ಇರುವ ಸಂಬಂಧಗಳು, ಕೆಲಸ, ಆಟಗಳು, ಪ್ರಾಣಿಗಳು, ಗಿಡಗಳು, ಆಹಾರ, ನೀರು, ನಿವಾಸಗಳು, ಪ್ರಯಾಣ, ನಮ್ಮ ಗ್ರಾಮ, ತಯಾರುಮಾಡುವ ವಸ್ತುಗಳು ಎಂಬ 16 ಪಾಠಗಳು ರೂಪಿಸಿದ್ದಾರೆ. ಎಲ್ಲಾ ಮಕ್ಕಳಿಗೆ ಅರ್ಥವಾಗುವಂತೆ ಸರಳವಾದ ಭಾಷೆ, ಚಿತ್ರಗಳು, ವಾಸ್ತವಿಕ ಚಿತ್ರಗಳಿಂದ ಪಾಠಗಳು ಇವೆ. ಮಕ್ಕಳಿಗೆ ಇರುವ ಸಹಜವಾದ ಕುತೂಹಲ, ಜಿಜ್ಞಾಸೆ, ಪ್ರಶ್ನಿಸುವ ಮನಸ್ಥತ್ವ ಮುಂದುವರೆಯುವಂತೆ ಮಾಡಲು ಅಭ್ಯಾಸಗಳು, ಚಟುವಟಿಕೆಗಳು ಇವೆ. ಪ್ರತಿ ಪಾಠದಲ್ಲಿ ಮಕ್ಕಳು ಸ್ವಂತವಾಗಿ ಸಮಚಾರವನ್ನು ಶೇಕರಿಸಿ ಜ್ಞಾನ ನಿರ್ಮಾಣ ಮಾಡಿಕೊಳ್ಳಲಿಕ್ಕೆ ಅನುವಾಗಿ ಪರಿಶೀಲನೆಗೆ, ಸಮಾಚಾರ ನೈಪುಣ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳು, ಪ್ರಾಜೆಕ್ಟು ಕೆಲಸಗಳಂತಹ ಅಭ್ಯಾಸಗಳನ್ನು ಸೇರಿಸಿದ್ದಾರೆ. ನಿರಂತರ ಸಮಗ್ರ ಮೌಲ್ಯಮಾಪನವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಚಟುವಟಿಕೆಗಳು, ಅಭ್ಯಾಸಗಳು, ಪ್ರಶ್ನೆಗಳನ್ನು ಪ್ರತಿ ಪಾಠ್ಯಾಂಶದಲ್ಲಿ ಅಂತರ್ಭಾಗವಾಗಿ ಸೇರಿಸಿದ್ದಾರೆ. ಪಾಠದ ಅನಂತರ 'ಇವು ಮಾಡಿರಿ' ಶೀರ್ಷಿಕೆಯಲ್ಲಿ ಅಭ್ಯಾಸಗಳು ಇವೆ. ಇವುಗಳಲ್ಲಿ ವಿಷಯವಗಾಹನೆ, ಚಿತ್ರಗಳನ್ನು ಬಿಡಿಸುವುದು, ಬಣ್ಣ ಹಾಕುವುದು, ಸಮಾಚಾರ ನೈಪುಣ್ಯಗಳು ಪ್ರಾಜೆಕ್ಟು ಕೆಲಸ, ಪ್ರಶಂಸೆ ಪ್ರಶ್ನಿಸುವುದು ಎಂಬ ಸಾಮರ್ಥ್ಯಗಳನ್ನು ಸಾಧಿಸುವುದಕ್ಕೆ ಅನುವಾಗಿ ಅಭ್ಯಸನಗಳು ಲಾಂಛನಗಳಿಂದ ಕೂಡಿವೆ. ಹಾಗೆಯೇ ಪಾಠಕ್ಕೆ ಸಂಬಂಧಿಸಿದ ಮುಖ್ಯವಾದ ಭಾವನೆಗಳನ್ನು 'ಕಠಿಣ ಪದಗಳು' ರೂಪದಲ್ಲಿ ಸೇರಿಸಿದ್ದಾರೆ. ಪಾಟದಲ್ಲಿನ ಮುಖ್ಯಾಂಶಗಳನ್ನು ಪುನಶ್ಚರಣೆಗಾಗಿ 'ನಾವು ಕಲಿತಿರುವೆವು' ಎಂಬ ಶೀರ್ಷಿಕೆಯಿಂದ ಸೇರಿಸಿದ್ದಾರೆ. ಮಕ್ಕಳು ತಮ್ಮನ್ನು ತಾವು ಸ್ವಂತವಾಗಿ ಅಂದಾಜು ಹಾಕಿಕೊಳ್ಳಲು ಅನುಗುಣವಾಗಿ 'ನಾನು ಇವನ್ನು ಮಾಡಬಲ್ಲೆನಾ?' ಎಂಬ ಸ್ವಯಂ ಮೌಲ್ಯಮಾಪನ ಅಭ್ಯಾಸವನ್ನು ಸಹ ಸೇರಿಸಿದ್ದಾರೆ.

ಈ ಪಠ್ಯಪುಸ್ತಕ ಮಕ್ಕಳಿಗೆ ನೇರವಾಗಿ ಸಮಾಚಾರವನ್ನು ನೀಡದಂತೆ. ಸ್ವಂತವಾಗಿ ತಿಳಿದು ಕೊಳ್ಳಲು ಪ್ರಾಧಾನ್ಯತೆ ನೀಡಿದೆ. ಇದಕ್ಕಾಗಿ ತಮ್ಮ ಸ್ನೇಹಿತರೊಂದಿಗೆ, ಶಿಕ್ಷಕರೊಂದಿಗೆ, ತಂದೆ ತಾಯಗಳೊಂದಿಗೆ, ಸಮಾಜದ ಸದಸ್ಯರೊಂದಿಗೆ ಚರ್ಚಿಸುವಂತೆ ಸಂಪೂರ್ಣ ತರಗತಿ ಚಟುವಟಿಕೆಗಳು, ಗುಂಪು ಚಟುವಟಿಕೆಗಳು ಇವೆ. ಪರಿಸರಗಳ ಕುರಿತು ಮಕ್ಕಳು ಪರಿಸರಗಳಲ್ಲಿ ಹೋಗಿ ಅಧ್ಯಯನ ಮಾಡಿದಾಗ ಅವುಗಳಲ್ಲಿ ಇರುವ ವಿಭಿನ್ನತೆಯನ್ನು, ವೈ ವಿಧ್ಯತೆಯನ್ನು ಅರ್ಥಮಾಡಿಕೊಳ್ಳುತ್ತಾರೆ. ಸಮಾಜದಲ್ಲಿ, ಪರಿಸರಗಳಲ್ಲಿ ವಿಭಿನ್ನತೆಯನ್ನು ಒಂದು ಸಹಜವಾದ ಅಂಶವಾಗಿ ಗುರುತಿಸಿ ಅದನ್ನು ಪ್ರಶಂಸಿಸಲ್ಪಡುತ್ತಾರೆ. ತಮ್ಮನ್ನು ತಾವು ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾಯಿಸಿಕೊಂಡು ಹೊಂದಾಣಿಕೆ ಮಾಡಿಕೊಳ್ಳಲ್ಪಡುತ್ತಾರೆ.

ಇದಕ್ಕಾಗಿ ಶಿಕ್ಷಕರು ಯೋಗ್ಯವಾದ ಸಾಮಾಗ್ರಿಯನ್ನು, ಬೋಧನಾ ವ್ಯೂಹಗಳನ್ನು ರೂಪೊಂದಿಸಿಕೊಂಡು ಆಚರಣೆ ಮಾಡಬೇಕು. ಈ ಕೋನದಲ್ಲಿ ಪಠ್ಯಪುಸ್ತಕವನ್ನು ಒಂದು ಸಹಕಾರಿಯಾಗಿ ಮಾತ್ರವೇ ನೋಡಬೇಕು. ಮಕ್ಕಳ ಅನುಭವಗಳನ್ನು, ಸ್ಥಾನಿಕ ಪರಿಸರಗಳನ್ನು ಒಂದು ಬಲವಾದ ಸಂಪನ್ಮೂಲವಾಗಿ ಭಾವಿಸಿ ಪಠ್ಯಪುಸ್ತಕವನ್ನು ಸಮರ್ಥವಾಗಿ ಅಳವಡಿಸುತ್ತೀರೆಂದು ಆಶಿಸುತ್ತಿದ್ದೇವೆ. ಇದರಿಂದ ಮಕ್ಕಳಲ್ಲಿ ಪ್ರಕ್ರಿಯಾ ನೈಪುಣ್ಯಗಳು ವೃದ್ಧಿಹೊಂದಿ ಶಾಸ್ತ್ರಾಭ್ಯಾಸದ ಬಗೆಗೆ ಆಸಕ್ತಿ ಹೆಚ್ಚಾಗುತ್ತದೆಂದು ನಂಬುತ್ತಿದ್ದೇವೆ.

ಇದರ ರೂಪಕಲ್ಪನೆಯಲ್ಲಿ ಪಾಲ್ಗೊಂಡ ಶಿಕ್ಷಕರು, ಉಪನ್ಯಾಸಕರು, ಚಿತ್ರಕಾರರು, ವಿಷಯ ನಿಪುಣರು, ಡಿ.ಟಿ.ಪಿ, ಲೇ–ಔಟ್ ಮಾಡಿದವರಿಗೆ ಪಾಠ್ಯ ಪ್ರಣಾಳಿಕಾ ವಿಭಾಗದ ಸದಸ್ಯರಿಗೆ ಅಭಿನಂದನೆಗಳು ಪಠ್ಯಪುಸ್ತಕವನ್ನು ಅಂದವಾಗಿ, ಆಕರ್ಷಣೀಯವಾಗಿ ಮಕ್ಕಳಲ್ಲಿ ಪ್ರಕ್ರಿಯಾ ನೈಪುಣ್ಯಗಳು ವೃದ್ಧಿ ಹೊಂದುವಂತೆ ರೂಪೊಂದಿಸುವಲ್ಲಿ ದಿಶಾ ನಿರ್ದೇಶನ ಮಾಡಿದ ವಿಷಯ ನಿಪುಣರಿಗೆ ಪ್ರತ್ಯೇಕ ಕೃತಜ್ಞತೆಗಳು, ಸಂಪಾದಕ ವರ್ಗಕ್ಕೆ ಕೂಡಾ ಧನ್ಯವಾದಗಳು ಭಾಷೆಯ ಪರವಾದ ತಿದ್ದುಪಡೆಗಳುಮಾಡಿದ ಶ್ರೀ ಪೋರಂಕಿ ದಕ್ಷಿಣ ಮೂರ್ತಿ, ವಿಶ್ರಾಂತ ಉಪಸಂಚಾಲಕರು ತೆಲುಗು ಅಕಾಡಮಿ ಹೈದರಾಬಾದ್, ರವರಿಗೆ ಪ್ರತ್ಯೇಕ ದನ್ಯವಾದಗಳು. ಈ ಪಠ್ಯಪುಸ್ತಕ ಭವಿಷ್ಯತ್ ಕಲಿಕೆಗೆ ಅವಶ್ಯಕವಾದ ಪಾಠಗಳನ್ನು,ಸಾಮರ್ಥ್ಯಗಳನ್ನು ಬೆಳೆಸುವುದಕ್ಕೆ ಸಹಕಾರಿಯಾಗುತ್ತದೆ ಎಂದು ಆಶಿಸುತ್ತಿದ್ದೇವೆ.

**ಶ್ರೀಮತಿ ಬಿ. ಶೇಷುಕುಮಾರಿ**
**ಸಂಚಾಲಕರು**
**ರಾಷ್ಟ್ರ ವಿದ್ಯ, ಪರಿಶೋಧನೆ, ಶಿಕ್ಷಣ ಸಂಸ್ಥೆ, ಹೈದರಾಬಾದ್.**

**ದಿನಾಂಕ : 27.03.2012**
**ಸ್ಥಳ : ಹೈದರಾಬಾದ್**

SCERT TELANGANA

# ರಾಷ್ಟ್ರಗೀತೆ

–ರವೀಂದ್ರನಾಥ ಠಾಗೂರ್

ಜನಗಣ ಮನ ಅಧಿನಾಯಕ ಜಯ ಹೇ !
ಭಾರತ ಭಾಗ್ಯವಿಧಾತಾ !

ಪಂಜಾಬ ಸಿಂಧ್ ಗುಜರಾತ ಮರಾಠಾ,
ದ್ರಾವಿಡ ಉತ್ಕಲ ವಂಗಾ !

ವಿಂಧ್ಯ ಹಿಮಾಚಲ ಯಮುನಾ ಗಂಗಾ !
ಉಚ್ಛಲ ಜಲಧಿ ತರಂಗಾ !

ತವ ಶುಭ ನಾಮೇ ಜಾಗೇ !
ತವ ಶುಭ ಆಶಿಷ ಮಾಗೇ !
ಗಾಹೇ ತವ ಜಯಗಾಥಾ !

ಜನಗಣ ಮಂಗಳದಾಯಕ ಜಯ ಹೇ !
ಭಾರತ ಭಾಗ್ಯ ವಿಧಾತಾ !

ಜಯ ಹೇ! ಜಯ ಹೇ! ಜಯ ಹೇ !
ಜಯ ಜಯ ಜಯ ಜಯ ಹೇ !

# ಪ್ರತಿಜ್ಞೆ

**– ಪೈಡಿಮರ್ರಿ ವೆಂಕಟ ಸುಬ್ಬಾರಾವು.**

ಭಾರತ ದೇಶ ನನ್ನ ಮಾತೃಭೂಮಿ, ಭಾರತೀಯರೆಲ್ಲರೂ ನನ್ನ ಸಹೋದರರು. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಸುಸಂಪನ್ನವಾದ, ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಅತೀವ ಹೆಮ್ಮೆ ತಂದಿದೆ. ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ನನ್ನ ದೇಶವನ್ನೂ, ನನ್ನ ತಂದೆ ತಾಯಿಗಳನ್ನೂ, ಉಪಾಧ್ಯಾಯರನ್ನೂ ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ. ಪ್ರತಿಯೊಬ್ಬರೊಡನೆ ಮರ್ಯಾದೆಯಿಂದ ನಡೆದುಕೊಳ್ಳುತ್ತೇನೆ.

ನನ್ನ ದೇಶದ ಬಗ್ಗೆ, ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡಿತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ.

SCERT TELANGANA

# ರೂಪಕಲ್ಪನೆಯಲ್ಲಿ ಪಾಲ್ಗೊಂಡವರು

**ಶ್ರೀ ಸುವರ್ಣ ವಿನಾಯಕ್,** ಕೋ–ಆರ್ಡಿನೇಟರ್,
ವಿದ್ಯಾಪ್ರಣಾಳಿಕೆ, ಪಠ್ಯ ಪುಸ್ತಕ ವಿಭಾಗ,
ರಾಷ್ಟ್ರ ವಿದ್ಯ ಪರಿಶೋಧನೆ, ಶಿಕ್ಷಣ ಸಂಸ್ಥೆ, ಆಂಧ್ರಪ್ರದೇಶ್, ಹೈದರಾಬಾದ್

**ಶ್ರೀ ಕೆ.ಲಕ್ಷ್ಮಿನಾರಾಯಣ**
ಉಪನ್ಯಾಸಕರು, ಜಿಲ್ಲಾ ವಿದ್ಯಾ ಶಿಕ್ಷಣ ಸಂಸ್ಥೆ,
ಅಂಗಲೂರು, ಕೃಷ್ಣಾ ಜಿಲ್ಲೆ

**ಶ್ರೀ ಬಿ.ರಾಮಕೃಷ್ಣ,** ಎಸ್.ಎ.
GGHS ನಲ್ಲಗುಟ್ಟ(ನ್ಯೂ) ಸಿಕಿಂದ್ರಾಬಾದ್,ಹೈದರಾಬಾದ್

**ಶ್ರೀ ಇ.ಡಿ.ಮಧೂಸೂದನ್ ರೆಡ್ಡಿ** ಎಸ್.ಎ.
ZPHS. (Boys) , ಕೋಸ್ಗಿ, ಮಹಬೂಬ್‌ನಗರ್

**ಶ್ರೀ ಕೆ.ವಿ.ಸತ್ಯನಾರಾಯಣ,** ಎಂ.ಆರ್.ಪಿ..
ಗರಿಡೇಪಲ್ಲಿ ಮಂಡಲ, ನಲ್ಗೊಂಡ ಜಿಲ್ಲೆ

**ಶ್ರೀ ಷೇಕ್ ಬ್ರಹ್ಮಾಜಿ ಷಾ,** ಎಸ್.ಜಿ.ಟಿ..
PS ಚಿನ್ನತಾಳ್ಳಪಾಲೆಂ, ರಾಮಚಂದ್ರಪುರಂ ಮಂಡಲ
ತೂರ್ಪು ಗೋದಾವರಿ ಜಿಲ್ಲೆ

**ಶ್ರೀ ಮೇಡಾ ಹರಿಪ್ರಸಾದ್,** ಎಸ್.ಎ.
ZPHS. ಆಕುಮಳ್ಳ, ಸಂಜಾಮಲ ಮಂಡಲ,
ಕರ್ನೂಲ್ ಜಿಲ್ಲೆ

**ಶ್ರೀ ರಥಂಗಪಾಣಿ ರೆಡ್ಡಿ,** ಎಸ್.ಎ.
ZPHS. ಪೋಲ್ಕಂಪಲ್ಲಿ. ಅಡ್ಡಾಕಲ್ (ಮಂಡಲ),
ಮಹಬೂಬ್‌ನಗರ್ ಜಿಲ್ಲೆ

**ಶ್ರೀಮತಿ ವಂಗೀಪುರಂ ಸ್ವರ್ಣಲತ,** ಎಸ್.ಎ.
ZPHS. ಪಾತಪಟ್ಟಿಸಂ, ಪಶ್ಚಿಮ ಗೋದಾವರಿ ಜಿಲ್ಲೆ

**ಶ್ರೀ ಕೆ. ಉಪೇಂದರ್ ರಾವು,** ಎಸ್.ಜಿ.ಟಿ..
PS ಪೀರ್ಯಾತಾಂಡ, ತುರ್ಕಪಲ್ಲಿ ಮಂಡಲ,ನಲ್ಗೊಂಡ ಜಿಲ್ಲೆ

**ಕುಮಾರಿ ಶಾಲಿನಿ**
ವಿದ್ಯಾಭವನ್ ಸೊಸೈಟಿ ಉದಯ್‌ಪುರ್

**ಶ್ರೀ ಎ. ಮಹೇಂದರ್ ರೆಡ್ಡಿ**
LFL HM. ಪ್ರಾಥಮಿಕ ಪಾಠಶಾಲೆ, ಸೋಮನಗುರ್ತಿ,
ರಂಗಾರೆಡ್ಡಿ ಜಿಲ್ಲೆ

**ಡಾ॥ ಆರ್.ಸತೀಶ್‌ಬಾಬು**
P.S. ಬುರ್ಕಪಿಟ್ಟ ತಾಂಡ, ಸೂರ್ಯಾಪೇಟ(ಮಂಡಲ)
ನಲ್ಗೊಂಡ ಜಿಲ್ಲೆ

## ಸಮನ್ವಯಕಾರರು

**ಶ್ರೀಮತಿ ಡಿ.ವಿಜಯಲಕ್ಷ್ಮೀ**
ಉಪನ್ಯಾಸಕರು, ರಾಷ್ಟ್ರ
ರಾಷ್ಟ್ರ ವಿದ್ಯ ಪರಿಶೋಧನೆ, ಶಿಕ್ಷಣ ಸಂಸ್ಥೆ, ಹೈದರಾಬಾದ್

**ಶ್ರೀ ಪಿ.ರಥಂಗ ಪಾಣಿ ರೆಡ್ಡಿ**
ಸ್ಕೂಲ್ ಅಸಿಸ್ಟೆಂಟ್, ZPHS. ಪೋಲ್ಕಂಪಲ್ಲಿ. ಅಡ್ಡಾಕಲ್ (ಮಂಡಲ),
ಮಹಬೂಬ್‌ನಗರ್ ಜಿಲ್ಲೆ

## ಅನುವಾದಕಾರರು

**ಶ್ರೀ ಗಂಜಿ ತಿಪ್ಪೇಸ್ವಾಮಿ** M.R.P
ಡಿ.ಹಿರೇಹಾಳು (ಮಂಡಲ) ಅನಂತಪುರ (ಜಿಲ್ಲೆ)

**ಶ್ರೀ ಗಂಜಿ ವೀರೇಶ್** S.G.T
M.P.P. ಪಾಠಶಾಲೆ(ಕೋಟೆ), ಡಿ.ಹಿರೇಹಾಳು (ಮಂಡಲ) ಅನಂತಪುರ (ಜಿಲ್ಲೆ)

**ಶ್ರೀ ವಿ.ದೇವರಾಜ್ ನಾಯಕ್** PSHM
ಪಾಠಶಾಲೆ(ಮೇನ್),ಡಿ.ಹಿರೇಹಾಳು (ಮಂಡಲ) ಅನಂತಪುರ (ಜಿಲ್ಲೆ)

**ಶ್ರೀ ಜಿ.ಯಸ್. ಹನುಮಂತಪ್ಪ** S.G.T
M.P.P. ಪಾಠಶಾಲೆ,ಮಲಪನಗುಡಿ,ಡಿ.ಹಿರೇಹಾಳು(ಮಂಡಲ) ಅನಂತಪುರ (ಜಿಲ್ಲೆ)

**ಶ್ರೀ ನಾಗರಾಜ,** S.A. MPUPS, ಚೇಗುಂಟ, ಮಂ.
ಮಾಗನೂರು, ಜಿ. ಮಹಬೂಬನಗರ್

**ಶ್ರೀ ಓಂಕಾರ ರಘುರಾಮ,** ಸ.ಶಿ., ನೃಪತುಂಗ ಪ್ರೌಢಶಾಲೆ,
ಹೈದರಾಬಾದ.

**ಶ್ರೀ ನಾಗಭೂಷಣ,** S.A. ZPHS, ಕೃಷ್ಣ, ಮಹಬೂಬನಗರ್
ಜಿಲ್ಲೆ

## ಚಿತ್ರಕಾರರು

**ಶ್ರೀ ಕೂರೆಳ್ಳ ಶ್ರೀನಿವಾಸು,** ಸ್ಕೂಲ್ ಅಸಿಸ್ಟೆಂಟ್ ತೆಲುಗು, ಜಿ..ಪ..ಉ.ಪಾ,ಪೋಚಂಪಲ್ಲಿ,ನಲ್ಗೊಂಡ ಜಿಲ್ಲೆ

**ಶ್ರೀ ಬಿ.ಕಿಶೋರ್ ಕುಮಾರ್,** SGT ಯು..ಪಿ..ಎಸ್. ಅಲ್ವಾಲ ಅನಿಮಲ ಮಂಡಲ, ನಲ್ಗೊಂಡ ಜಿಲ್ಲೆ

**ಶ್ರೀ ಸಯ್ಯದ್ ಅಸ್ಮದುಲ್ಲಾ,** ಡ್ರಾಯಿಂಗ್ ಶೀಕ್ಷಕರು, ಸರ್ಕಾರಿ ಉನ್ನತ ಪಾಠಶಾಲೆ, ಖಾಜೀಪೇಟ, ವರಂಗಲ್ ಜಿಲ್ಲೆ

SCERT TELANGANA

# ಶಿಕ್ಷಕರಿಗೆ ಸೂಚನೆಗಳು

- ಮಕ್ಕಳು ತಮ್ಮ ಸುತ್ತಮುತ್ತ ಇರುವ ಪರಿಸರದ ಬಗ್ಗೆ ಅರ್ಥ ಮಾಡಿ ಕೊಳ್ಳಬೇಕು. ಆ ಪರಿಸರದೊಂದಿಗೆ ಹೊಂದಿ ಕೊಳ್ಳಬೇಕು. ಇದಕ್ಕಾಗಿ ತಮ್ಮ ಸುತ್ತಲೂ ಇರುವ ಪರಿಸರವನ್ನು ಪರಿಶೀಲಿಸುವದು, ಅನ್ವೇಷಿಸುವದರ ಮೂಲಕ ಪರಿಸರದ ಬಗ್ಗೆ ಅವಗಾಹನೆಯನ್ನು ಪಡೆಯಬೇಕು. ಅದಕ್ಕಾಗಿ ಪ್ರಾಥಮಿಕ ಸ್ಥಾಯಿಯಲ್ಲಿ ಪರಿಸರ ವಿಜ್ಞಾನ ಪಠ್ಯಪುಸ್ತಕಕ್ಕೆ **'ನಾವು – ನಮ್ಮ ಪರಿಸರಗಳು'** ಎಂದು ಹೆಸರು ಇಟ್ಟಿದ್ದಾರೆ.
- ರಾಷ್ಟ್ರೀಯ ಶಿಕ್ಷಣ, ಪರಿಶೋಧನೆ, ಶಿಕ್ಷಣ ಸಂಸ್ಥೆ (NCERT) ಪಠ್ಯ ಪುಸ್ತಕಗಳ ಹಿನ್ನೆಲೆಯನ್ನು ಪರಿಗಣನೆಗೆ ತೆಗೆದುಕೊಂಡು ನಮ್ಮ ರಾಷ್ಟ್ರ ಪರಿಸ್ಥಿತಿಗಳಿಗೆ ಅನುಗುಣವಾಗಿ ಪಾಠ್ಯಾಂಶಗಳನ್ನು ರೂಪಿಸಿದ್ದಾರೆ.
- ನಮ್ಮ ಕುಟುಂಬ, ಕುಟುಂಬ ಸದಸ್ಯರ ನಡುವಿನ ಸಂಬಂಧಗಳು ಕೆಲಸ, ಆಟಗಳು, ಪ್ರಾಣಿಗಳು, ಸಸ್ಯಗಳ ಆಹಾರ ವಸ್ತ್ರಗಳು, ನಿವಾಸಗಳು ಪ್ರಯಾಣ, ನೀರು, ತಯಾರು ಮಾಡುವ ವಸ್ತುಗಳು, ಗ್ರಾಮ ಎಂಬ ಹಿನ್ನೆಲೆಯ ಆಧಾರವಾಗಿ ಪಾಠ್ಯಾಂಶಗಳನ್ನು ರೂಪಿಸಿದ್ದಾರೆ.
- ಈ ಪಠ್ಯ ಪುಸ್ತಕದಲ್ಲಿ 16 ಪಾಠಗಳು ಇವೆ. ಇವನ್ನು ನಾಲ್ಕು ಅಧ್ಯಾಯಗಳಾಗಿ ವಿಭಜಿಸಿದ್ದಾರೆ. ಮೊದಲನೆ ಅಧ್ಯಾಯದಲ್ಲಿ 4 ಪಾಠಗಳು, 2ನೇ ಅಧ್ಯಾಯದಲ್ಲಿ 4 ಪಾಠಗಳು, 2ನೇ ಅಧ್ಯಾಯದಲ್ಲಿ 5 ಪಾಠಗಳು 3ನೇ ಅಧ್ಯಾಯದಲ್ಲಿ 5 ಪಾಠಗಳು, 3ನೇ ಅಧ್ಯಾಯದಲ್ಲಿ 5 ಪಾಠಗಳು, 4ನೇ ಅಧ್ಯಾಯದಲ್ಲಿ 3 ಪಾಠಗಳು ಇವೆ.
- ಪ್ರತಿ ಪಾಠದಲ್ಲಿ ಮಕ್ಕಳು ಸುಲಭವಾಗಿ ಅರ್ಥ ಮಾಡಿಕೊಳ್ಳುವದಕ್ಕಾಗಿ ಚಿತ್ರಗಳು ಇವೆ. ಪ್ರತಿ ಪಾಠವು ಸಹ ನಿತ್ಯ ಜೀವನದ ಸನ್ನಿವೇಶ ಸಂಘಟನೆಗಳು ಇಲ್ಲವೆ ಮಕ್ಕಳಿಗೆ ಪರಿಚಯವಿರುವ ಅನುಭವಗಳಿಂದ ಪ್ರಾರಂಭವಾಗುತ್ತದೆ.
- ಯಾವ ಪಾಠವನ್ನಾದರೂ ಬೋಧಿಸಿದರೂ ಆ ಪಾಠದ ಬಗ್ಗೆ ಮಕ್ಕಳಿಂದ ಮಾತನಾಡಿಸಬೇಕು. ಅವರ ಅನುಭವಗಳನ್ನು ಚರ್ಚಿಸಬೇಕು ಇದಕ್ಕೆ ಸಂಬಂಧಿಸಿದ ಮುಖ್ಯ ಪ್ರಶ್ನೆಗಳೊಂದಿಗೆ ಪಾಠ್ಯ ಬೋಧನೆ ಪ್ರಾರಂಭವಾಗಬೇಕು.
- ಮಕ್ಕಳು ಪರಿಶೀಲಿಸುವಂತೆ, ತಮ್ಮ ಸಹಪಾಠಿಗಳು / ಕುಟುಂಬ ಸದಸ್ಯರು / ಹಿರಿಯರು / ಸಮಾಜ ಸದಸ್ಯರಿಂದ ಸಮಾಚಾರವನ್ನು ಶೇಕರಿಸುವಂತೆ, ಶೇಕರಿಸಿದ ಸಮಾಚಾರವನ್ನು ಪಟ್ಟಿಯ ರೂಪದಲ್ಲಿ ತಯಾರು ಮಾಡುವಂತೆ, ಸಹಪಾಠಿಯರೊಂದಿಗೆ ಚರ್ಚಿಸುವಂತೆ, ಸಣ್ಣ ಸಣ್ಣ ಪ್ರಯೋಗಗಳು, ಅನ್ವೇಷಣೆಗಳು, ಪ್ರಾಜೆಕ್ಟ್ ಕೆಲಸಗಳಿಂದ ಕೂಡಿದ ಅಭ್ಯಾಸಗಳು ಇವೆ.
- ಈ ಪಾಠ್ಯಪುಸ್ತಕವು ಪ್ರಧಾನವಾಗಿ ಮಕ್ಕಳಲ್ಲಿ ಪ್ರಕ್ರಿಯೆ ಕೌಶಲ್ಯಗಳನ್ನು ಬೆಳೆಸುವದಕ್ಕಾಗಿ ಉದ್ದೇಶಿಸಿದೆ. ಆದಕಾರಣ ಪೂರ್ತಿ ತರಗತಿ ಕೋಣೆಯಲ್ಲಿ, ಗುಂಪಿನಲ್ಲಿ ವೈಯಕ್ತಿಕವಾಗಿ ಲಾಂಛನಗಳನ್ನು ಸಹ ಸೇರಿಸಿದ್ದಾರೆ. ಇವುಗಳಿಗೆ ಅವಶ್ಯವಾದ ಬೋಧನೋಪಕರಣಗಳನ್ನು ಉಪಯೋಗಿಸಿ ನಿರ್ವಹಿಸಬೇಕು.
- ಮಕ್ಕಳು, ಏನು ತಿಳಿದು ಕೊಂಡಿದ್ದಾರೆಂದು ತಿಳಿದುಕೊಳ್ಳುವದರ ಜೊತೆಗೆ ಮಕ್ಕಳ ಅನುಭವಗಳು ಆಲೋಚನೆಗಳು, ಸೃಜನಾತ್ಮಕತೆಯನ್ನು ವ್ಯಕ್ತ ಪಡಿಸುವ ಉದ್ದೇಶದಿಂದ ಪಾಠಗಳನ್ನು ರೂಪಿಸಿವೆ. ಅದಕ್ಕಾಗಿ ಮಕ್ಕಳೆಲ್ಲರೂ ಪಾಲ್ಗೊಳುವಂತೆ ಅವಕಾಶ ಕೊಡಬೇಕು.
- ಪ್ರತಿ ಪಾಠದ ಕೊನೆಗೆ **'ಇವು ಮಾಡಿರಿ'** ಎಂಬ ಹೆಸರುನಿಂದ ಶೈಕ್ಷಣಿಕ ಪ್ರಮಾಣಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅಭ್ಯಾಸಗಳನ್ನು ಸೇರಿಸಿದ್ದಾರೆ. ಇವನ್ನು ಮಕ್ಕಳು ಗುಂಪಾಗಿ ಇಲ್ಲವೆ ವ್ಯಕ್ತಿಗತವಾಗಿ ಮಾಡುವಂತೆ ನೋಡಬೇಕು.
- ಪ್ರತಿ ಪಾಠದ ಕೊನೆಗೆ **'ಮುಖ್ಯ ಪದಗಳು'** ಇವೆ, ಇವು ಆ ಪಾಠಕ್ಕೆ ಸಂಬಂಧಿಸಿದ ಮುಖ್ಯವಾದ ಭಾವನೆಗಳು ಪಾಠ ಪೂರ್ತಿ ಆದ ಮೇಲೆ ಮುಖ್ಯ ಪದಗಳ ಮೇಲೆ ಮಕ್ಕಳ ಅವಗಾಹನೆಯನ್ನು ಪರೀಕ್ಷಿಸಬೇಕು, ಹಾಗೆಯೇ **'ನಾವು ತಿಳಿದುಕೊಂಡಿರುವವು'** ಎಂಬ ಶೀರ್ಷಿಕೆಯಿಂದ ಪಾಠದಲ್ಲಿನ ಮುಖ್ಯಾಂಶಗಳು ಇವೆ. ಇವುಗಳನ್ನು ಮಕ್ಕಳಿಂದ ಓದಿಸಬೇಕು ಇವು ಪುನಸ್ಮರಣೆಗೆ ಉದ್ದೇಶಿಸಿದವು.
- ಪಾಠದ ಕೊನೆಗೆ **'ನಾನು ಇವನ್ನು ಮಾಡಬಲ್ಲೆನೇ?'** ಎಂಬ ಶೀರ್ಷಕೆಯಿಂದ ಅಭ್ಯಾಸ ಇದೆ. ಅದರಲ್ಲಿನ ಅಂಶಗಳನ್ನು ಮಕ್ಕಳೇ ಸ್ವತಃ ಗುರ್ತಿಸುವಂತೆ ನೋಡಬೇಕು. ಇವುಗಳಲ್ಲಿ ತರಗತಿಯಲ್ಲಿನ 80% ಮಂದಿ ಮಕ್ಕಳು ಮಾಡುವಂತಿದ್ದರೆ ನಂತರದ ಪಾಠವನ್ನು ಪ್ರಾರಂಭಿಸ ಬೇಕು.
- ನಿರಂತರ ಸಮಗ್ರ ಮೌಲ್ಯಾಂಕನವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಪ್ರತಿ ಪಾಠದಲ್ಲಿ ಪ್ರಶ್ನೆಗಳು, ಚಟುವಟಿಕೆಗಳು/ಅಭ್ಯಾಸಗಳನ್ನು ಅಂತರ್ಭಾಗವಾಗಿ ಸೇರಿಸಿದ್ದಾರೆ, ಹಾಗೆಯೇ ಸಂಬಂಧೀಸಿದ್ದು, ಪ್ರತಿ ಪಾಠ ಪೂರ್ತಿ ಆದ ಮೇಲೆ ಅಭ್ಯಾಸಗಳಲ್ಲಿ ತಿಳಿಸಿದಂತೆ ಸಾಮರ್ಥಗಳ ಅನುಸಾರವಾಗಿ ಮಕ್ಕಳು ಪ್ರಗತಿಯನ್ನು ನಮೂದಿಸಲು ಒಂದು ಪ್ರತ್ಯೇಕ ರಿಜಿಸ್ಟರ್ ಏರ್ಪಾಟು ಮಾಡಿಕೊಂಡು ಅದರಲ್ಲಿ ನಮೂದಿಸಬೇಕು .
- ಜುಲೈ, ಸೆಪ್ಟಂಬರ್, ಡಿಸೆಂಬರ್, ಫಿಬ್ರವರಿ ತಿಂಗಳುಗಳಲ್ಲಿ ಘಟಕ ಪರೀಕ್ಷೆಗಳ ಪ್ರಗತಿಯನ್ನು, ಹಾಗೆಯೇ! ಸೆಪ್ಟೆಂಬರ್, ಅಕ್ಟೋಬರ್, ಮಾರ್ಚ, ಏಪ್ರಿಲ್ ತಿಂಗಳಗಳಲ್ಲಿ ಟರ್ಮಿನಲ್ ಪರೀಕ್ಷೆಗಳ ಪ್ರಗತಿಯನ್ನು ನಮೂದಿಸಬೇಕು .

SCERT TELANGANA

# 3ನೇ ತರಗತಿ ಪರಿಸರ ವಿಜ್ಞಾನ – ಸಿಲಬಸ್‌ನಲ್ಲಿರುವ ಅಂಸಗಳು

| | |
|---|---|
| 1. ಕುಟುಂಬ ಕುಟುಂಬದ ಸದಸ್ಯರು, ಸ್ನೇಹಿತುರ ಅವರ ಮಧ್ಯ ಸಂಬಂಧಗಳು | ಕುಟುಂಬದಲ್ಲಿರುವ ಸದಸ್ಯರು, ಹೋಲಿಕೆಗಳು ಮುಖಗಳ ಆಕಾರಗಳು ಕುಟುಂಬದ ಚರಿತ್ರೆ, ವಿವಿಧ ಬಗೆಯ ಕುಟುಂಬಗಳು. |
| 2. ಕೆಲಸಗಳು, ಆಟಗಳು | ಕುಟುಂಬದಲ್ಲಿರುವ ಸದಸ್ಯರು ಮಾಡುವ ಕೆಲಸಗಳು ಒಬ್ಬರಿಗೊಬ್ಬರು ಸಹಕರಿಸಿಕೊಳ್ಳುವದು, ಗ್ರಾಮದಲ್ಲಿ ಕೆಲಸ ಮಾಡುವವರು, ಇತರ ವೃತ್ತಿಗಳದವರು ಅವರ ಅವಶ್ಯಕತೆಗಳು, ಕೆಲಸ ಮಾಡುವ ಮಕ್ಕಳು. |
| | ವಿವಿಧ ಬಗೆಯ ಆಟಗಳು, ಆಟಗಳ ಅವಶ್ಯಕತೆ, ವಸ್ತುಗಳಿಂದ ಆಡುವ ಆಟಗಳು, ವಸ್ತುಗಳು ಇಲ್ಲದೇ ಆಡುವ ಆಟಗಳು ವ್ಯಕ್ತಿಗತವಾಗಿ ಆಡುವ ಆಟಗಳು, ಗುಂಪುಗಳಲ್ಲಿ ಆಡುವ ಆಟಗಳು, ಆಟಗಳ ನಿಯಮಗಳು, ಕ್ರೀಡಾಸ್ಫೂರ್ತಿ. |
| 3. ಪ್ರಾಣಿಗಳು | ನಮ್ಮ ಸುತ್ತಲೂ ಇರುವ ಪ್ರಾಣಿಗಳು ಪಕ್ಷಿಗಳು, ಅವುಗಳ ನಿವಾಸಗಳು, ಸಾಕು ಪ್ರಾಣಿಗಳು, ವಲಸೆ ಪಕ್ಷಿಗಳು, ಯಾವುವು ಹೇಗೆ ಹೋಗುತ್ತವೆ ? ಪ್ರಾಣಿಗಳ ಮೇಲಿನ ದಯೆ ; ಕೀಟಗಳು ಅವುಗಳಿಂದ ನಷ್ಟಗಳು ಮತ್ತು ಲಾಭಗಳು. |
| 4. ಸಸ್ಯಗಳು | ವಿವಿಧ ಬಗೆಯ ಮರಗಳು, ಮನೆಗಳಲ್ಲಿ ಬೆಳೆಸಿಕೊಳ್ಳುವ ಸಸ್ಯಗಳು, ಅವುಗಳಿಂದ ಉಪಯೋಗಗಳು, ನಾವು ಏತಕ್ಕಾಗಿ ಮರಗಳನ್ನು ಬೆಳೆಸಬೇಕು ? ನಮ್ಮ ಸುತ್ತಲೂ ಬೆಳಯದೇ ಇರುವ ಮರಗಳು, ನೀರಿನ ಸಸ್ಯಗಳು, ಮರುಭೂಮಿಯ ಸಸ್ಯಗಳು. |
| | ಎಲೆಗಳಲ್ಲಿನ ವಿಧಗಳು (ಪರಿಮಾಣ, ತುದಿ, ಕೊನೆ, ಆಕಾರ ಬಣ್ಣ) ಎಲೆಗಳು ಉದುರುವುದು, ಆಹಾರವಾಗಿ ಎಲೆಗಳು, ಎಲೆಗಳಿಂದ ಅಲಂಕಾರ, ಎಲೆಗಳಿಂದ ಆಕಾರಗಳು ತಯಾರಿ, ಎಲೆಗಳಿಂದ ಆಟಗಳು, ಕಂಪೋಸ್ಟ್ ಕುಣಿ. |
| 5. ಆಹಾರ | ನಾವು ಆಹಾರವನ್ನು ಏಕೆ ತಿನ್ನಬೇಕು ? ಆಹಾರವು ಎಲ್ಲಿಂದ ಲಭಿಸುತ್ತದೆ ? ಬೇಯಿಸಿ ತಿನ್ನುವ ಆಹಾರ, ಬೇಯಿಸದೇ ತಿನ್ನುವ ಆಹಾರಗಳು, ಬೇಯಿಸುವ ವಿಧಾನಗಳಲ್ಲಿ ವೈವಿಧ್ಯ, ವಿವಿಧ ಅಡಿಗೆ ಪಾತ್ರೆಗಳು ಅವುಗಳ ಉಪಯೋಗ: |
| | ವಿವಿಧ ಪ್ರಾಂತ್ಯಗಳ ಆಹಾರದ ಅಭ್ಯಾಸಗಳು ಪ್ರಾಣಿಗಳ, ಪ್ರಕ್ಷಿಗಳ ಆಹಾರದ ಅಭ್ಯಾಸಗಳು, ಕೂಡಿ ಊಟಮಾಡುವುದು, ಮಾಡುವದರಿಂದ ಆಗುವ ಪ್ರಯೋಜನ, ವಯಸ್ಸಿಗೆ ತಕ್ಕಂತೆ ಆಹಾರದ ಅಭ್ಯಾಸಗಳು. |
| 6. ನಮ್ಮ ಗ್ರಾಮ ನಕ್ಷೆಯ ನೈಪುಣ್ಯಗಳು | ಗ್ರಾಮಗಳು, ಗ್ರಾಮಗಳಲ್ಲಿರುವ ಸಂಸ್ಥೆಗಳು – ಉಪಯೋಗಗಳು, ಗ್ರಾಮಕ್ಕೆ ಪ್ರಯಾಣ ಸೌಕರ್ಯಗಳು, ಗ್ರಾಮದಲ್ಲಿರುವವರು ಮಾಡುವ ಕೆಲಸಗಳು. |
| | ನಕ್ಷೆಯ ಅವಗಾಹನೆ, ನಕ್ಷೆಯಲ್ಲಿ ಗುರ್ತುಗಳ ಅವಶ್ಯಕತೆ, ನಕ್ಷೆಯನ್ನು ಬಿಡಿಸುವ ವಿಧಾನ, ನಕ್ಷೆಯ ಮೂಲಕ ಸಮಾಚಾರವನ್ನು ಗ್ರಹಿಸುವದು ತರಗತಿಯ ಕೋಣೆ, ಶಾಲೆ, ಬೀದಿ ಗ್ರಾಮ ನಕ್ಷೆಯನ್ನು ಬಿಡಿಸುವುದು. |
| 7. ನಿವಾಸಗಳು | ಮನೆಯ ಅವಶ್ಯಕತೆ, ಮನೆಗಳ ವಿಧಗಳು ತಾತ್ಕಾಲಿಕ ನಿವಾಸಗಳು ವಿವಿಧ ಪ್ರಾಂತಗಳಲ್ಲಿನ ಮನೆಗಳು, ಅಪಾರ್ಟ್ ಮೆಂಟ್‌ಗಳು, ಮನೆಯ ಮೇಲ್ಛಾವಣೆಗಳು. |
| | ಮನೆಯನ್ನು ಅಲಂಕರಿಸಿಕೊಳ್ಳುವ ವಿಧಾನ ಶುಭ್ರವಾದ ಮನೆ ಮನೆಗಳಲ್ಲಿ ಹೂವಿನ ಸಸ್ಯಗಳನ್ನು ಬೆಳೆಸುವದು ಮನೆಯನ್ನು ಅಂದವಾಗಿ ಇಡುವದರಲ್ಲಿ ಸಹಕರಿಸಿಕೊಳ್ಳುವದು ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳುವುದು, ಅಶುಭ್ರವಾದ ಮನೆ, ವ್ಯರ್ಥ ಪದಾರ್ಥಗಳನ್ನು ಕಸದ ತೊಟ್ಟಿಯಲ್ಲಿ ಹಾಕುವದು. |
| 8. ನಾವು ತಯಾರು ಮಾಡುವ ವಸ್ತುಗಳು, ವಸ್ತ್ರಗಳು | ವಿಧ ವಿಧದ ಮಣ್ಣಿನ ಗೊಂಬೆಗಳು, ಮಣ್ಣಿನಿಂದ ಮಾಡಿದ ಪಾತ್ರೆಗಳು ಅವುಗಳ ಉಪಯೋಗಗಳು ಮಣ್ಣಿನಿಂದ ವಿಗ್ರಹಗಳು, ಮಡಿಕೆಗಳ ತಯಾರಿ, ಮಣ್ಣಿನ ಪಾತ್ರೆಗಳ ಬಳಕೆ ಕಡಿಮೆ ಯಾಗುವಿಕೆ, ಮಣ್ಣಿನಿಂದ ವಿವಿಧ ಗೊಂಬೆಗಳ ತಯಾರಿ. |
| | ಬಟ್ಟೆಗಳ ಅವಶ್ಯಕತೆ, ಬಟ್ಟೆಗಳ ವಿಧಗಳು, ಮಕ್ಕಳು ಧರಿಸುವವು, ಹಿರಿಯರು ಧರಿಸುವವು; ಸ್ತ್ರೀ ಪುರುಷರು ಧರಿಸುವವು, ಕಾಲಕ್ಕೆ ಅನುಗುಣವಾಗಿ ಧರಿಸುವ ಬಟ್ಟೆಗಳು, ವಸ್ತ್ರಗಳು, ಸಂಪ್ರದಾಯಸ್ಥರು ಹೊಲಿಸಿಕೊಂಡಿರುವ, ರೆಡಿಮೇಡ್ ವಸ್ತುಗಳು, ವೃತ್ತಿಗಳಿಗೆ ಅನುಸಾರವಾಗಿ ಧರಿಸುವ ಬಟ್ಟೆಗಳು, ಒಗೆದ ಬಟ್ಟೆಗಳನ್ನು ಹಾಕಿಕೊಳ್ಳುವದು, ಬಟ್ಟೆಗಳ ಮೇಲೆ ಡಿಜೈನ್‌ಗಳು. |
| 9. ನೀರು | ನೀರಿನ ಅವಶ್ಯಕತೆ, ನೀರಿನ ಸಂಪತ್ತುಗಳು, ನೀರಿನ ಸಂಗ್ರಹ, ಮನುಷ್ಯರಿಗೂ, ಪ್ರಾಣಿಗಳಿಗೂ, ಸಸ್ಯಗಳಿಗೂ ನೀರು ಅವಸರ ಪರಿಶುಭ್ರವಾದ ನೀರು, ಅಪರಿಶುಭ್ರವಾದ ನೀರು, ಒಳ್ಳೆಯ ಅಭ್ಯಾಸಗಳು, ನೀರಿನ ಕೊರತೆ, ನೀರಿನ ಉಳಿತಾಯ. |
| 10. ಪ್ರಯಾಣ | ಪ್ರಯಾಣ, ಪ್ರಯಾಣಕ್ಕೆ ವಾಹನಗಳ ಅವಶ್ಯಕತೆ, ದೂರವನ್ನು ಇಡಿದು ಪ್ರಯಾಣ ಸಾಧನೆಗಳು, ಪ್ರಯಾಣ ಸಾಧನೆಗಳ ವರ್ಗೀಕರಣ, ಪ್ರಯಾಣದಲ್ಲಿ ಅಪಾಯಗಳು (ಪ್ರಮಾದಗಳು). |

SCERT TELANGANA

# ಈ ಪಠ್ಯ ಪುಸ್ತಕದಿಂದ ಮಕ್ಕಳು ಸಾಧಿಸಬೇಕಾದ ಸಾಮಾರ್ಥ್ಯಗಳು

3ನೇ ತರಗತಿ **"ನಾವು – ನಮ್ಮ ಪರಿಸರಗಳು"** ಎಂಬ ಪಠ್ಯ ಪುಸ್ತಕದಿಂದ ಸಾಧಿಸಬೇಕಾದ ಶೈಕ್ಷಣಿಕ ಪ್ರಮಾಣಗಳನ್ನು ಕೆಳಗೆ ಹೇಳಿದ್ದಾರೆ. ಇವುಗಳನ್ನು ಶೈಕ್ಷಣಿಕ ವರ್ಷದಲ್ಲಿ ಸಾಧಿಸಬೇಕು. ಇದಕ್ಕಾಗಿ ಪಠ್ಯಪುಸ್ತಕದಲ್ಲಿರುವ ಪಾಠಗಳಿಗೆ ಇವುಗಳನ್ನು ಅನ್ವಯಿಸಿ ಬೋಧನಾಭ್ಯಸ ಪ್ರಕ್ರಿಯೆಗಳನ್ನು ನಿರ್ವಹಿಸಬೇಕು.

(1) **ಪ್ರಕ್ರಿಯೆ ನೈಪುಣ್ಯಗಳು :** ಪರಿಶೀಲಿಸುವದು, ಹೋಲಿಕೆ, ವ್ಯತ್ಯಾಸಗಳು ಹೇಳುವದು, ವರ್ಗೀಕರಿಸುವದು, ಸಮಾಚಾರ ಪಟ್ಟಿಯನ್ನು ತಯಾರು ಮಾಡುವದು, ವಿಶ್ಲೇಷಿಸುವದು, ಕಾರಣಗಳನ್ನು ಹೇಳುವದು ಪ್ರಯೋಗಗಳನ್ನು ಮಾಡುವದು, ನಿರ್ಧಾರಕ್ಕೆ ಬರುವಂತಹ ಕೌಶಲ್ಯಗಳನ್ನು ಮಕ್ಕಳೆಲ್ಲರೂ ಪಡೆಯಬೇಕು.

(2) **ವಿಷಯಾವಗಾಹನೆ :** ಈ ಪಠ್ಯಪುಸ್ತಕದಲ್ಲಿ 16 ಪಾಠಗಳಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಮಕ್ಕಳು ಅವಗಾಹನೆ ಮಾಡಿಕೊಳ್ಳಬೇಕು. ಇವುಗಳನ್ನು ನಿತ್ಯ ಜೀವನದಲ್ಲಿ ಅನ್ವಯಿಸಿಕೊಳ್ಳಬೇಕು. ಅವಗಾಹನೆ ಮಾಡಿಕೊಳ್ಳಬೇಕು. ಉದಾಹರಣೆಗಳನ್ನು ಕೊಡುವದು, ಹೋಲಿಕೆಗಳು ವ್ಯತ್ಯಾಸಗಳು ಹೇಳುವದು, ವರ್ಗೀಕರಿಸುವುದು, ವಿವರಿಸುವುದು, ಕಾರಣಗಳನ್ನು ಹೇಳುವಂತೆ ಅವುಗಳನ್ನು ಮಾಡುವಂತಾಗಬೇಕು.

(3) **ಚಿತ್ರಗಳನ್ನು ಬಿಡಿಸುವದು, ಬಣ್ಣವನ್ನು ಹಾಕುವುದು :** ಮಕ್ಕಳು ಚಿತ್ರಗಳನ್ನು ಬಿಡಿಸುವದರ ಮೂಲಕ ವಿಷಯವನ್ನು ವಿವರಿಸಬೇಕು. ಇದಕ್ಕಾಗಿ ಪಾಠ್ಯಾಂಶಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸುವದು, ಬಣ್ಣಗಳನ್ನು ಹಾಕುವಂತಹವುಗಳನ್ನು ಮಾಡಬೇಕು.

(4) **ಮಾಡಿ ನೋಡುವುದು, ಹೇಳುವುದು :** ಮಕ್ಕಳು ಸಣ್ಣ ಸಣ್ಣ ಪ್ರಯೋಗಗಳನ್ನು ಮಾಡುವದರ ಮೂಲಕ ವಿಷಯವನ್ನು ಗ್ರಹಿಸಿ ವಿವರಿಸಬೇಕು, ತಾವು ಪ್ರಯೋಗಗಳನ್ನು ಹೇಗೆ ಮಾಡಿದರು, ಏನೇನು ಉಪಯೋಗಿಸಿದ್ದಾರೆಂದು ಕ್ರಮ ಪದ್ಧತಿಯಲ್ಲಿ ಹೇಳಬೇಕು.

(5) **ಸಮಾಚಾರ ನೈಪುಣ್ಯಗಳು ಪ್ರಾಜೆಕ್ಟ್ ಕೆಲಸಗಳು :** ಮಕ್ಕಳು ಇತರರನ್ನು ಕೇಳುವುದರ ಮೂಲಕ ನೋಡುವುದರ ಮೂಲಕ ಓದುವದರ ಮೂಲಕ ಸಮಾಚಾರವನ್ನು ಗ್ರಹಿಸಬೇಕು. ಹೀಗೆ ಗ್ರಹಿಸಿದ ಸಮಾಚಾರವನ್ನು ಪಟ್ಟಿಯಲ್ಲಿ ನಮೋದು ಮಾಡಬೇಕು. ಸಮಾಚಾರ ಪಟ್ಟಿಗಳನ್ನು ನೋಡಿ ವಿಶ್ಲೇಷಿಸಬೇಕು. ನಿರ್ಧಾರಣೆ ಸಾಧಾರಣೀಕರಣಗಳನ್ನು ಮಾಡಲ್ಪಡಬೇಕು. ಪಾಠಗಳಲ್ಲಿ ಕೊಟ್ಟಿರುವ ಪ್ರಾಜೆಕ್ಟ್ ಕೆಲಸಗಳಲ್ಲಿ ಪಾಲ್ಗೊಳ್ಳಬೇಕು. ಅವುಗಳನ್ನು ತರಗತಿ ಕೋಣೆಗಳಲ್ಲಿ ಪ್ರದರ್ಶಿಸಿ ವಿವರಿಸಬೇಕು.

(6) **ಪ್ರಶ್ನಿಸುವದು :** ಮಕ್ಕಳು ತಾವು ನೋಡಿದ ಕೇಳಿದವುಗಳ ಬಗ್ಗೆ ಸನ್ನಿವೇಶಗಳು ಸಂಘಟನೆಗಳು ಪರಿಸರಗಳ ಬಗ್ಗೆ ಪ್ರಶ್ನಿಸಬೇಕು.

(7) **ಪ್ರಶಂಸೆ :** ಮಕ್ಕಳಲ್ಲಿ ಒಳ್ಳೆಯ ಮನೋಭಾವನೆಗಳನ್ನು ಬೆಳೆಸಬೇಕು ಪ್ರಾಣಿಗಳು ಪಕ್ಷಿಗಳು ಸಸ್ಯಗಳು ತಮ್ಮ ಸುತ್ತಲೂ ಇರುವ ಸಮಾಜದಲ್ಲಿರುವ ವ್ಯಕ್ತಿಗಳಲ್ಲಿ ಇರುವ ಹಿರಿಮೆಯನ್ನು ಗುರುತಿಸುವಂತಾಗಬೇಕು. ಪ್ರಶಂಸಿಸಬೇಕು, ದಯೆ ಸಹಕಾರ ಸಾನುಭೂತಿ, ಕೂಡಿ ಕೆಲಸ ಮಾಡುವಂತಹ ಲಕ್ಷಣಗಳನ್ನು ಮಕ್ಕಳಲ್ಲಿ ಬೆಳೆಸಬೇಕು. ಸಹಪಾಠಿಗಳನ್ನು ಪ್ರಶಂಸಿಸಬೇಕು ಸಮಾಜದಲ್ಲಿ ಪರಿಸರದಲ್ಲಿರುವ ವೈವಿಧ್ಯಗಳನ್ನು ಗುರುತಿಸಿ ಪ್ರಶಂಸಿಸಬೇಕು ಸಮಾಜದಲ್ಲಿ ಪರಿಸರದಲ್ಲಿರುವ ವೈವಿದ್ಯಗಳನ್ನು ಗುರುತಿಸಿ ಪ್ರಶಂಸಿಸಬೇಕು ವಿಭಿನ್ನವಾದ ಆಹಾರದ ಅಭ್ಯಾಸಗಳನ್ನು ಜೀವನ ವಿಧಾನಗಳನ್ನು ಸಂಸ್ಕೃತಿಯಲ್ಲಿರುವ ಹಿರಿಮೆಯನ್ನು ಪ್ರಶಂಸಿಸಬೇಕು ವ್ಯಕ್ತಿಗತ ಪರಿಶುಭ್ರತೆ, ಆರೋಗ್ಯದ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬೇಕು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದು ಕುಟುಂಬದಲ್ಲಿರುವ ವೃದ್ಧರಿಗೆ ಪ್ರತ್ಯೇಕ ಅವಶ್ಯಕತೆವಿರುವವರಿಗೆ ಸಹಕಾರವನ್ನು ನೀಡಬೇಕು.

(8) **ಪಟ ಕೌಶಲ್ಯ :** ಮೂರನೆ ತರಗತಿಯ ಮಕ್ಕಳೂ ತಮ್ಮ ತರಗತಿಯ ಕೋಣೆ, ಪಾಠಶಾಲೆ, ಬೀದಿ, ಗ್ರಾಮ ಮೊದಲಾದವುಗಳ ಚಿತ್ರವನ್ನು ಬಿಡಿಸಬೇಕು, ಚಿತ್ರಪಟದಲ್ಲಿ ಇರುವ ಗುರ್ತುಗಳ ಆದಾರವಾಗಿ ಸಮಾಚಾರವನ್ನು ಗ್ರಹಿಸಬೇಕು.



# ವಿಷಯ ಸೂಚಿಕೆ




| | | | |
|---|---|---|---|
| 1 | ಕುಟುಂಬ | ಜೂನ್ | 1 |
| 2 | ಯಾರು ಯಾವ ಕೆಲಸ ಮಾಡುತ್ತಾರೆ | ಜೂನ್ | 12 |
| 3 | ಆಡಿಕೊಳ್ಳೋಣ! | ಜುಲೈ | 20 |
| 4 | ಪ್ರಾಣಿಗಳು –ಅವುಗಳ ನಿವಾಸಗಳು | ಜುಲೈ | 27 |







| | | | |
|---|---|---|---|
| 5 | ನಮ್ಮ ಸುತ್ತಲೂ ಇರುವ ಗಿಡಗಳು | ಆಗಸ್ಟ | 39 |
| 6 | ಎಲೆಗಳಿಂದ ಅನುಬಂಧ | ಆಗಸ್ಟ | 48 |
| 7 | ನಾವು ಏನೇನು ತಿನ್ನುತ್ತೇವೆ ! | ಸೆಪ್ಟಂಬರ | 59 |
| 8 | ಆಹಾರದ ಅಭ್ಯಾಸಗಳು | ಸೆಪ್ಟೆಂಬರ್ | 70 |



| | | | |
|---|---|---|---|
| 09. | ನಮ್ಮ ಗ್ರಾಮ | ಅಕ್ಟೋಬರ್ | 78 |
| 10. | ವಿವಿಧ ಮಾದರಿಯ ಮನೆಗಳು | ನವಂಬರ್ | 86 |
| 11. | ಶುಭ್ರವಾದ ಮನೆಯೇ ಸುಂದರವಾದ ಮನೆ | ನವಂಬರ್ | 94 |
| 12. | ಮಣ್ಣಿನಿಂದ ಮಾಡಿದ ಮಾಣಿಕ್ಯಗಳು | ಡಿಸೆಂಬರ್ | 101 |
| 13. | ಬಣ್ಣ ಬಣ್ಣದ ಬಟ್ಟೆಗಳು | ಡಿಸೆಂಬರ್ | 108 |








| | | | |
|---|---|---|---|
| 14. | ಯಾವುವು ಎಲ್ಲೆಲ್ಲಿ ? | ಜನೆವರಿ | 115 |
| 15. | ನೀರು – ನಮ್ಮ ಅವಶ್ಯಕತೆಗಳು | ಫೆಬ್ರವರಿ | 123 |
| 16. | ಊರಿಗೆ ಹೋಗೋಣ | ಫೆಬ್ರವರಿ | 134 |


SCERT TELANGANA

# 1. ಕುಟುಂಬ






ರಮ : ಅಜ್ಜ! ಈ ಫೋಟೋದಲ್ಲಿ ಎತ್ತರವಾಗಿ ಇರುವವರು ಯಾರು?

ಅಜ್ಜ : ನಿಮ್ಮ ತಂದೆ ಶ್ರೀನಿವಾಸ್.

ರಮ : ಲಂಗಾ, ದಾವಣಿ ಹಾಕಿಕೊಂಡಿರುವವರು ಯಾರು?

ಅಜ್ಜ : ಗುರ್ತುಸಿಕ್ಕಲಿಲ್ಲವೇ? ನಿಮ್ಮ ಅತ್ತೆ. ಸುಜಾತ

ರಮ : ಇಲ್ಲಿ ಇರುವವರು ಚಿಕ್ಕಪ್ಪ ವೆಂಕಟ್ ಅಲ್ಲವೇ?


ಅಜ್ಜ : ಹೌದು ಚೆನ್ನಾಗಿ ಗುರ್ತುಹಿಡಿದಿದ್ದೀಯೇ ?

ರಮ : ಚಿಕ್ಕಪ್ಪ ಈಗ ಎಲ್ಲಿದ್ದಾರೆ?

ಅಜ್ಜ : ™ಹೈದರಾಬಾದಿನಲ್ಲಿ ಇದ್ದಾನೆ.

ರಮ : ™ಹೈದರಾಬಾದಿನಲ್ಲಿ ಏಕೆ ಇರುತ್ತಿದ್ದಾನೆ ಅಜ್ಜ?

ಅಜ್ಜ : ಉದ್ಯೋಗ ಮಾಡುತ್ತಿದ್ದಾನೆ.



ನಿಮ್ಮ ಕುಟುಂಬದಲ್ಲಿ ಯಾರ್ಯಾರು ಇದ್ದಾರೆ.

....................................

....................................

....................................

....................................

....................................

....................................

....................................

....................................

SCERT TELANGANA


ಸಾಧಾರಣವಾಗಿ ಕುಟುಂಬದಲ್ಲಿ ತಾಯಿ, ತಂದೆ, ಅಜ್ಜ, ಅಜ್ಜಿ, ಮಕ್ಕಳು ಇರುತ್ತಾರೆ. ಎಲ್ಲಾ ಕುಟುಂಬಗಳು ಒಂದೇ ವಿಧವಾಗಿ ಇರುವುದಿಲ್ಲ. ಕೆಲವು ಕುಟುಂಬಗಳಲ್ಲಿ ತಾಯಿ, ತಂದೆ, ಮಕ್ಕಳು ಮಾತ್ರವೇ ಇರುತ್ತಾರೆ. ಇನ್ನೂ ಕೆಲವು ಕುಟುಂಬಗಳಲ್ಲಿ ಅವರ ಜೊತೆಗೆ ಅಜ್ಜ ಅಜ್ಜಿಯಂತಹ ವೃದ್ಧರು ಸಹ ಇರುತ್ತಾರೆ.


ಉದ್ಯೋಗ, ವಿದ್ಯೆ ಇಲ್ಲವೇ ಇತರ ಕಾರಣಗಳಿಂದ ಕುಟುಂಬ ಸದಸ್ಯರಲ್ಲಿ ಕೆಲವರು ಬೇರೆ ಊರಿನಲ್ಲಿ ಇರುತ್ತಾರೆ.

ಹಾಗಾದರೆ ರಮ'ಳ ಕುಟುಂಬದಲ್ಲಿ ಯಾರ್ಯಾರು ಇರುವರೋ ತಿಳಿದುಕೊಳ್ಳೋಣವೇ! ರಮಾಳ ಅಜ್ಜನ ಹೆಸರು ರಂಗಯ್ಯ, ಅಜ್ಜಿಯ ಹೆಸರು ಗಂಗಮ್ಮ. ರಮಾಳ ಅಜ್ಜನಿಗೆ ಇಬ್ಬರು ಮಕ್ಕಳು, ಒಬ್ಬ ಮಗಳು ಇದ್ದಾರೆ.

**ಕೆಳಗಿನ ಚಿತ್ರವನ್ನು ನೋಡಿರಿ.**










**ಯಾರ್ಯಾರಿಗೆ ಯಾರು ಏನಾಗುತ್ತಾರೋ ಬರೆಯಿರಿ.**

1. ಗಂಗಮ್ಮನಿಗೆ ಶ್ರೀನಿವಾಸ್ ............... 2. ರಂಗಯ್ಯನಿಗೆ ಅನೂರಾಧ.............

3. ಸುನಿಲನಿಗೆ ಶ್ರೀನಿವಾಸ್ ............... 4. ರಂಗಯ್ಯನಿಗೆ ಅಖಿಲ್ .............

5 ಲತಾಳಿಗೆ ಸುಜಾತ ............. 6. ರಮಾಗೆ ಶ್ರೀನಿವಾಸ್ .............


7 ರಮಾಗೆ ಲತ ............. 8. ಅಖಿಲಳಿಗೆ ಪ್ರಸಾದ್.............

9 ರಂಗಯ್ಯನಿಗೆ ಸುನಿಲ್ ............ 10. ಸುಜಾತಳಿಗೆ ರಮಣ.............

SCERT TELANGANA



**ರಮಾಳ ತಾಯಿ, ಅಜ್ಜಿ, ಅಜ್ಜನ ಹೆಸರುಗಳು ತಿಳಿದುಕೊಂಡಿದ್ದಿರಲ್ಲವೇ? ಮತ್ತೆ ನೀವು ನಿಮ್ಮ ಅಜ್ಜ, ಅಜ್ಜಿ, ತಂದೆ, ತಾಯಿಯವರ ಹೆಸರುಗಳು, ಉಳಿದವರ ಹೆಸರುಗಳನ್ನು ಬರೆಯಿರಿ.**




ಮೇಲೆ ತಿಳಿಸಿದ ವಿಧವಾಗಿ ಕುಟುಂಬದ ಸದಸ್ಯರು, ಅವರ ಪೂರ್ವಿಕರ ವಿವರಗಳಿಂದ ಬರೆದ ಪಟ್ಟಿಯನ್ನು **“ವಂಶವೃಕ್ಷ”** ಎನ್ನುವರು.



ರಮಾಳ ಚಿಕ್ಕಮ್ಮನಿಗೆ ಮಗು ಹುಟ್ಟಿದೆ. ಮಗುವನ್ನು ನೋಡಲು ಬಂಧುಗಳು ಬಂದಿದ್ದಾರೆ.

SCERT TELANGANA





ಸಾಧಾರಣವಾಗಿ ಕುಟುಂಬದಲ್ಲಿ ಮಕ್ಕಳು ಅಮ್ಮ, ಅಪ್ಪ, ಅಜ್ಜಿ, ಅಜ್ಜ, ಸೋದರತ್ತೆ, ಸೋದರಮಾವ ಚಿಕ್ಕಪ್ಪ, ಚಿಕ್ಕಮ್ಮ ನವರ ಹೋಲಿಕೆಗಳು ಇರುತ್ತವೆ. ಕೆಲವರಿಗೆ ಯಾರ ಹೋಲಿಕೆಗಳು ಇಲ್ಲದಿರಬಹುದು. ಆದುದರಿಂದ ನಮ್ಮ ದೇಹವನ್ನು ಇದ್ದಂತೆಯೆ ಇರಲು ಬಿಟ್ಟು ಸಂರಕ್ಷಿಸಿಕೊಳ್ಳಬೇಕು.



**ಸರಿಯಾದ ಉತ್ತರವನ್ನು (✓) ಇಂದ ಗುರುತಿಸಿರಿ.**

1. ಯಾರಾದರು ಅಪರಿಚಿತರು ನಿನಗೆ ಸಿಹಿ ತಿಂಡಿ ಕೊಟ್ಟರೆ ತೆಗೆದುಕೊಳ್ಳುತ್ತಿಯಾ. (ಹೌದು/ಇಲ್ಲ)
2. ಅಪರಿಚಿತ ವ್ಯಕ್ತಿಯೊಂದಿಗೆ ನೀವು ಹೋಗುತ್ತೀರಿ. (ಹೌದು/ಇಲ್ಲ)
3. ನಿನಗೆ ಯಾರಾದರೂ ಕಷ್ಟಕೊಟ್ಟರೆ ನೀನು ನಿನ್ನ ಹಿರಿಯರಿಗೆ ಹೇಳುತ್ತಿಯಾ. (ಹೌದು/ಇಲ್ಲ)

ಕುಟುಂಬದಲ್ಲಿಯ ವ್ಯಕ್ತಿಗಳು ವಿವಿಧ ಗುಣಗಳನ್ನು ಹೊಂದಿರುತ್ತಾರೆ. ಕೆಲವುಸಲ ನಮಗೆ ಕೋಪ ಬಂದಾಗ ಇತರರಿಗೆ ನೋವುಕೊಡುವ ಪದಗಳನ್ನು ಬಳಸುತ್ತೇವೆ. ಆದರೆ ಇದು ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಇದಕ್ಕೆ ಬದಲಾಗಿ ನಾವು ಆ ವ್ಯಕ್ತಿಯೊಂದಿಗೆ ನಮ್ಮ ಕೋಪದ ಕಾರಣವನ್ನು ಹೇಳುತ್ತೇವೆ. ನಮಗೆ ನಚ್ಚಿದ ವರ್ತನೆ ಇಲ್ಲವೇ ಸಂದರ್ಭ ಕುರಿತು ತಿಳಿಸೋಣಾ. ನಮ್ಮಿಬ್ಬರಿಗೆ ನೋವು ಕೊಡದ ಪರಿಹಾರವನ್ನು ಸೂಚಿಸೋಣ.



**ನಿಮ್ಮ ಕುಟುಂಬ ಸದಸ್ಯರಲ್ಲಿ ನಿಮಗೆ ಮೆಚ್ಚಿಕೆಯಾದ ಒಂದು ಗುಣ ಬರೆಯಿರಿ.**

| ಸಂಬಂಧ | ಗುಣ |
|---|---|
| ಅಮ್ಮ | ಸಾಹಸದಿಂದಿರುವುದು |
| ಅಪ್ಪ | ಕಾಪಾಡುವುದು |
| ----- | ----- |
| ----- | ----- |
| ----- | ----- |

SCERT TELANGANA

## ಕುಟುಂಬ ಚರಿತ್ರೆ

ಪಾಠಶಾಲೆಗೆ ರಮಾಳನ್ನು ಸೇರಿಸಲು ಅವರ ತಂದೆ ಪಾಠಶಾಲೆಗೆ ಕರೆದುಕೊಂಡು ಬಂದರು. ರಮ ಹೆಸರನ್ನುಅವರ ತಂದೆ 'ಚಿಲಕೂರಿ ರಮ' ಎಂದು ಬರೆಸಿದರು. ಚಿಲಕೂರಿ ಎಂಬ ಮನೆ ಹೆಸರು ಹೇಗೆ ಬಂದಿದೆ? ಎಂದು ಪ್ರಧಾನೋಪಾಧ್ಯಾಯರು ಕೇಳಿದರು. ನಮ್ಮ ಪೂರ್ವಿಕರು ಚಿಲುಕೂರಿನಿಂದ ಬಂದಿರುವುದರಿಂದ ಆ ಹೆಸರು ಬಂದಿದೆ ಎಂದು ರಮಳ ತಂದೆ ಹೇಳಿದರು.



ರಮಾಳ ಅಜ್ಜನವರು ಗ್ರಾಮದಲ್ಲಿನ ಪ್ರಜೆಗಳೆಲ್ಲರಿಗೆ ಯಾವ ಕಷ್ಟ ಬಂದರೂ ಸಹಾಯಮಾಡಿ ನೆರವಾಗುತ್ತಿದ್ದರು. ಆದ್ದರಿಂದ ಅತನನ್ನು ಎಲ್ಲರೂ ಗೌರವಿಸುತ್ತಿದ್ದರು, ಆತನಿಂದ ಅವರ ಕುಟುಂಬಕ್ಕೆಲ್ಲಾ ಒಳ್ಳೆಯ ಹೆಸರು ಬಂದಿದೆ. ರಮಾಳ ತಂದೆ ಬಟ್ಟೆಯ ವ್ಯಾಪಾರ ಮಾಡುತ್ತಾರೆ. ಆತನಿಗೂ ಸಹ ಸುತ್ತಮುತ್ತಲಿನ ಗ್ರಾಮದಲ್ಲಿ, ಒಳ್ಳೆಯ ಬಟ್ಟೆಗಳು ಮಾರುತ್ತಾರೆ ಎಂಬ ಬಹಳ ಒಳ್ಳೆಯ ಹೆಸರಿದೆ. ರಮಾಳ ಮನೆಯ ಹೆಸರು ಅವಳ ಅಜ್ಜ, ಅಪ್ಪನಿಗೆ ಸಂಬಂಧಿಸಿದ ಕುಟುಂಬ ಚರಿತ್ರೆಯ ಕುರಿತು ತಿಳಿದುಕೊಂಡಿದ್ದೀರಲ್ಲವೇ?

> ನಿಮ್ಮ ಕುಟುಂಬ ಚರಿತ್ರೆಯನ್ನು ಕುರಿತು ದೊಡ್ಡವರನ್ನು ಕೇಳಿ.
> ತಿಳಿದುಕೊಳ್ಳಿ. ನಿಮ್ಮ ತರಗತಿಯಲ್ಲಿನ ವಿದ್ಯಾರ್ಥಿಗಳ ಮನೆಯ ಹೆಸರುಗಳು ಹೇಗೆ ಬಂದಿದೆಯೋ
> ತಿಳಿದುಕೊಂಡು ಚರ್ಚಿಸಿರಿ.



## ವಿವಿಧ ರೀತಿಯ ಕುಟುಂಬಗಳು





ನನ್ನ ಹೆಸರು ಶಿವ, ನಮ್ಮ ಮನೆಯಲ್ಲಿ ಅಮ್ಮ, ಅಪ್ಪ, ಅಜ್ಜ, ಅಜ್ಜಿ, ದೊಡ್ಡಮ್ಮ ದೊಡ್ಡಪ್ಪ, ಚಿಕ್ಕಪ್ಪ, ಅಕ್ಕಂದಿರು, ಅಣ್ಣ ಕೂಡಿ ಇರುತ್ತೇವೆ.

ಚಿತ್ರಗಳನ್ನು ನೋಡಿದ್ದೀರಲ್ಲವೇ!

- ಯಾರ ಮನೆಯಲ್ಲಿ ಹೆಚ್ಚುಜನ ಇದ್ದಾರೆ? ಯಾರ ಮನೆಯಲ್ಲಿ ಕಡಿಮೆ ಜನ ಇದ್ದಾರೆ?
- ಯಾರ ಯಾರ ಮನೆಯಲ್ಲಿ ಮುದುಕರು ಇದ್ದಾರೆ?
- ಡೇವಿಡ್, ಹಸೀನಾ, ಶಿವ ಇವರಲ್ಲಿ ಯಾರದು ಯಾವ ವಿಧವಾದ ಕುಟುಂಬ?
- ನಿಮ್ಮದು ಯಾವ ವಿಧವಾದ ಕುಟುಂಬ?
- ನಿಮಗೆ ತಿಳಿದ ಕುಟುಂಬಗಳ ಪ್ರಕಾರಗಳು ಯಾವುವು ?
- ನಿಮ್ಮ ಕುಟುಂಬ ಸದಸ್ಯರಲ್ಲಿ ಯಾರಿಗೆ ಏನೆಂದು ಕರೆಯುತ್ತೀರೋ ಹೇಳಿ ಬರೆಯಿರಿ.

SCERT TELANGANA



ಆಡಿಕೊಳ್ಳೋಣವೇ!



- ನೀವೆಲ್ಲರೂ ವೃತ್ತಾಕಾರದಲ್ಲಿ ನಿಂತುಕೊಳ್ಳಿ
- ಒಬ್ಬರ ಕಣ್ಣಿಗೆ ಕರವಸ್ತ್ರದಿಂದ ಕಣ್ಣನ್ನು ಕಟ್ಟಬೇಕು
- ಕಣ್ಣಿಗೆ ಕರವಸ್ತ್ರ ಕಟ್ಟಿಕೊಂಡ ವಿದ್ಯಾರ್ಥಿ ಉಳಿದವರನ್ನು ಹಿಡಿದುಕೊಂಡು ಅವರು ಯಾರೆಂದು ಹೇಳಬೇಕು.
- ಸರಿಯಾಗಿ ಹೇಳಿದರೆ ಕಣ್ಣಿಗೆ ಕಟ್ಟಿದ ಕರವಸ್ತ್ರ ಬಿಚ್ಚಬೇಕು.
- ಈ ವಿಧವಾಗಿ ಒಬ್ಬರ ನಂತರ ಮತ್ತೊಬ್ಬರ ಕಣ್ಣಿಗೆ ಕರವಸ್ತ್ರ ಕಟ್ಟಿ ಆಟವನ್ನು ಮುಂದುವರೆಸಬೇಕು.
- ಕಣ್ಣಿಗೆ ಕರವಸ್ತ್ರವನ್ನು ಕಟ್ಟಿಕೊಂಡಿರುವಾಗ ಎಲ್ಲರನ್ನೂ ಗುರ್ತಿಸಿದ್ದಾರೆಯೇ? ಏಕೆ?

**ನಿಮಗೆ ಗೊತ್ತೇ ?**



ಕಣ್ಣಿಲ್ಲದವರಿಗೆ ಓದುವುದಕ್ಕೋಸ್ಕರ ಬ್ರೆಯಿಲೀ ಎಂಬ ಲಿಪಿಯನ್ನು ಬಳಸುತ್ತಾರೆ. ಈ ಲಿಪಿಯನ್ನು ಕಂಡು ಹಿಡಿದವನು ಲೂಯಿಸ್ ಬ್ರೆಯಿಲೀ.

## ವೃದ್ಧರು, ಪ್ರತ್ಯೇಕ ಅವಶ್ಯಕತೆಗಳು ಇರುವ ಮಕ್ಕಳು

ಕಣ್ಣಿದ್ದು ಕೂಡಾ ಕಣ್ಣಿಗೆ ಕರವಸ್ತ್ರ ಕಟ್ಟಿಕೊಳ್ಳುವುದರಿಂದ ಎಲ್ಲರನ್ನೂ ಗುರ್ತುಹಿಡಿಯದೇ ಹೋದಿರಲ್ಲವೆ? ಮತ್ತೆ ಶಾಶ್ವತವಾಗಿ ಕಣ್ಣಿಲ್ಲದವರು ಕೆಲಸಗಳನ್ನು ಮಾಡಿಕೊಳ್ಳಲು ಎಷ್ಟು ಕಷ್ಟ ಪಡುತ್ತಾರೋ ಆಲೋಚಿಸಿರಿ. ಅದೇ ವಿಧವಾಗಿ ಕೆಲವರಿಗೆ ಕಿವಿಗಳು ಸರಿಯಾಗಿ ಕೇಳಿಸುವುದಿಲ್ಲ. ಕೆಲವು ಮಕ್ಕಳಿಗೆ ಸರಿಯಾಗಿ ಮಾತನಾಡದೆ ಇರುವರು, ಕೆಲವರು

SCERT TELANGANA





ನಡೆಯಲಾರರು. ಅಂತಹವರಿಗೆ ಯಾವ ಯಾವ ತೊಂದರೆಗಳು ಬರುತ್ತವೆಯೋ ಅವರಿಗೆ ನಾವು ಯಾವ ವಿಧವಾಗಿ ಸಹಾಯ ಮಾಡಬೇಕೋ ಆಲೋಚಿಸಿರಿ. ಹೇಳಿರಿ.

**ಕೆಳಗಿನ ಚಿತ್ರವನ್ನು ನೋಡಿರಿ.**



ಪ್ರತಿ ವರ್ಷ ಡಿಸೆಂಬರ್ 3 ರಂದು ಪ್ರಪಂಚ ದಿವ್ಯಾಂಗುಲ ದಿನೋತ್ಸವ"ವನ್ನು

- ಚಿತ್ರದಲ್ಲಿ ಯಾರು ಯಾರು ಇದ್ದಾರೆ?
- ಇವರು ಯಾವ ಯಾವ ಕೆಲಸಗಳನ್ನು ಮಾಡಿಕೊಳ್ಳಲು ಕಷ್ಟ ಪಡುತ್ತಾರೆ?
- ಇವರಿಗೆ ಎಂತಹ ಸಹಾಯ ಮಾಡಬೇಕು?
- ನೀವು ಇಂತಹವರಿಗೆ ಯಾವಾಗಲಾದರೂ ಸಹಾಯಮಾಡಿದ್ದಿರಾ? ಎಂತಹ ಸಹಾಯಮಾಡಿದ್ದೀರಿ?

ಕಣ್ಣಿಲ್ಲದವರಿಗೆ, ಶಾರೀರಿಕ ಅಂಗವಿಕಲರಿಗೆ, ಮೂಕರಿಗೆ, ಕಿವುಡರಿಗೆ ಅವಶ್ಯಕವಾದ ಸಹಾಯವನ್ನು ಮಾಡಬೇಕು. ಮಾತನಾಡಲುಕಷ್ಟ ಪಡುವವರು ಸಂಜ್ಞೆಗಳ ಮೂಲಕ ಮಾತನಾಡಿಕೊಳ್ಳುವರು. ಶ್ರವಣ ಸಮಸ್ಯೆ ಇರುವವರು ಕಿವಿಯಲ್ಲಿ ಶ್ರವಣಪರಿಕರ ಇಟ್ಟುಕೊಂಡು, ದೃಷ್ಟಿಲೋಪ ಇರುವವರು ಕಟ್ಟಿಗೆಯಿಂದ, ಸ್ಪರ್ಶದ ಮೂಲಕ ವಿಷಯಗಳನ್ನು ಗ್ರಹಿಸುವರು. ಅದೇ ವಿಧವಾಗಿ ಕೆಲವು ಮಂದಿ ಮಕ್ಕಳು,ವೃದ್ಧರು ಅನಾರೋಗ್ಯದಿಂದ ಇಲ್ಲವೇ ಪ್ರಮಾದಗಳಿಂದ ತಮ್ಮ ಕೆಲಸಗಳನ್ನು ತಾವು ಮಾಡಿಕೊಳ್ಳಲಾರರು. ನಾವು ಅವರಿಗೆ ಅವಶ್ಯಕವಾದ ಸೂಕ್ತ ಸಹಾಯವನ್ನು ಮಾಡಬೇಕು. ಅದೇ ವಿಧವಾಗಿ ವೃದ್ಧರು ಕೂಡ ಹೆಚ್ಚು ಕೆಲಸಗಳನ್ನು ಸ್ವತಃ ಮಾಡಿಕೊಳ್ಳಲಾರರು. ಅವರ ಅವಶ್ಯಕತೆಗಳನ್ನು ತಿಳಿದುಕೊಂಡು ಬೇಕಾದ ಸಹಾಯವನ್ನು ಮಾಡಬೇಕು.

**ನಿಮಗೆ ಗೊತ್ತೇ ?**



ಪ್ರತಿ ವರ್ಷ ಅಕ್ಟೋಬರ್ 1ನೇ ತಾರೀಖಿನಂದು ಪ್ರಪಂಚ ವೃಧ್ದಿಯಾಗಿ "ವೃದ್ಧರ ದಿನೋತ್ಸವ"ವನ್ನು

SCERT TELANGANA



## ಮುಖ್ಯ ಪದಗಳು

| | | | | | |
|---|---|---|---|---|---|
| 1. | ಕುಟುಂಬ | 2. | ಕುಟುಂಬದ ಸದಸ್ಯರು | 3. | ಹೋಲಿಕೆಗಳು |
| 4 | ವಂಶವೃಕ್ಷ | 5 | ಬ್ರೆಯಿಲಿ ಲಿಪಿ | 6 | ಕುಟುಂಬದ ಚರಿತ್ರೆ |
| 7 | ಮನೆಯ ಹೆಸರು | 8 | ವೃದ್ಧರ ದಿನೋತ್ಸವ | 9 | ವೃದ್ಧರು |
| 10. | ಪೂರ್ವಿಕರು | 11. | ಬಂಧುಗಳು | 12. | ಪ್ರತ್ಯೇಕ ಬೇಡಿಕೆಗಳ ಮಕ್ಕಳು |

## ನಾವು ಕಲಿತುಕೊಂಡವವು

- ಸಾಧಾರಣವಾಗಿ ಕುಟುಂಬದಲ್ಲಿ ಅಮ್ಮ, ಅಪ್ಪ, ಅಜ್ಜ, ಅಜ್ಜಿ, ಮಕ್ಕಳು ಇರುತ್ತಾರೆ.
- ಹೀಗೆ ಒಂದೇ ಕುಟುಂಬವಾಗಿ ಒಟ್ಟಾಗಿ ಸೇರಿ ಇರುವವರನ್ನು ಕುಟುಂಬ ಸದಸ್ಯರು ಎನ್ನುವರು
- ಅಮ್ಮ, ಅಪ್ಪ, ಅಜ್ಜಿ, ಅಜ್ಜ, ಇವರ ಪೂರ್ವಿಕರ ವಿವರಗಳನ್ನು ತಿಳಿಸುವುದೇ 'ವಂಶವೃಕ್ಷ'.
- ನಮಗಿರುವ ಕೌಶಲ್ಯಗಳು, ಸ್ವಭಾವಗಳಿಂದ ಪ್ರತ್ಯೇಕವಾಗಿ ಗುರುತಿಸಲ್ಪಡುತ್ತೇವೆ.
- ಕುಟುಂಬದಲ್ಲಿನ ಮಕ್ಕಳಿಗೆ ಕುಟುಂಬ ಸದಸ್ಯರ, ಬಂಧುಗಳ ಹೋಲಿಕೆಗಳು ಬರುತ್ತವೆ.
- ಎಲ್ಲರ ಮುಖಗಳು ಒಂದೇ ವಿಧವಾಗಿ ಇರುವುದಿಲ್ಲ.
- ಪ್ರತಿ ಕುಟುಂಬಕ್ಕೆ ಒಂದು ಚರಿತ್ರೆ ಇರುತ್ತದೆ. ಇದನ್ನೆ 'ಕುಟುಂಬ ಚರಿತ್ರೆ' ಎನ್ನುವರು.
- ಕುಟುಂಬದಲ್ಲಿನ ಸದಸ್ಯರ ಸಂಖ್ಯೆಗಳಿಗೆ ಅನುಗುಣವಾಗಿ ಕುಟುಂಬಗಳು ವಿಧ ವಿಧವಾಗಿ ಇರುತ್ತವೆ.
- ವೃದ್ಧರಿಗೆ, ಪ್ರತ್ಯೇಕ ಬೇಡಿಕೆ ಇರುವ ಮಕ್ಕಳಿಗೆ ಬೇಕಾದ ಸಹಾಯವನ್ನು ಮಾಡಬೇಕು.

## ಕಲಿಕೆಯನ್ನು ಉತ್ತಮ ಪಡಿಸಿಕೊಳ್ಳಿರಿ



### ವಿಷಯಾವಗಾಹನೆ

1. ಕುಟುಂಬ ಎಂದರೇನು? ನಿಮ್ಮ ಕುಟುಂಬದಲ್ಲಿ ಯಾರ್‍ಯಾರು ಇರುವರು?
2. ಚಂದು ಅನ್ನವರಂನಲ್ಲಿ ಇರುತ್ತಾನೆ. ಈಗ ಮೂರನೇ ತರಗತಿ ಓದುತ್ತಿದ್ದಾನೆ. ಅವರಮ್ಮ ಕಮಲ ಮನೆಯಲ್ಲಿಯೇ ಇದ್ದು, ಮನೆಕೆಲಸಗಳನ್ನು ನೋಡಿಕೊಳ್ಳುತ್ತಾಳೆ. ಚಂದು ತಮ್ಮ ಆದಿತ್ಯ ಇಬ್ಬರೂ ಸೇರಿ ರಜೆಯಲ್ಲಿ ಅವರ ಮಾಮ ರಾಘವನ ಮನೆಗೆ ಹೋದರು. ಅಲ್ಲಿ ಅತ್ತೆ ಉಷಾ, ಅಜ್ಜ ಗೋಪಾಲ್, ಅಜ್ಜಿ ಲಕ್ಷ್ಮೀದೇವಿ ಇದ್ದಾರೆ. ಚಂದು ಅವರ ಅತ್ತಿಗೆ ಹೇಮಾಳ ಜೊತೆಗೆ, ಮಾವ ರವಿಯ ಜೊತೆಗೆ ಎಷ್ಟೋ ಆಟಗಳನ್ನು ಆಡಿಕೊಂಡನು.

| ಹೆಸರು | ಚಂದು ಜೊತೆಗೆ ಇರುವ ಸಂಬಂಧ |
|---|---|
| ಆದಿತ್ಯ | ತಮ್ಮ |
| ಕಮಲ | .................. |
| ಲಕ್ಷ್ಮೀದೇವಿ | .................. |
| ರಾಘವ | .................. |
| ಉಷ | ....................... |
| ರವಿ | ....................... |



SCERT TELANGANA





3. ನಿಮ್ಮ ಮನೆಯ ಹೆಸರೇನು? ಹೆಸರು ಹೇಗೆ ಬಂದಿದೆಯೋ ತಿಳಿದುಕೊಂಡು ಹೇಳಿರಿ.

4. ಪ್ರತ್ಯೇಕ ಬೇಡಿಕೆಗಳು ಇರುವ ಮಕ್ಕಳಿಗೆ ನಾವು ಮಾಡಬೇಕಾದ ಸಹಾಯ ಏನು?

ಎ) ಕಣ್ಣು ಕಾಣಿಸದವರಿಗೆ ಮಾಡಬೇಕಾದ ಸಹಾಯ:

ಬಿ) ಮಾತುಗಳು ಕೇಳಿಸದವರಿಗೆ ಮಾಡಬೇಕಾದ ಸಹಾಯ:

ಸಿ) ಮಾತನಾಡದವರಿಗೆ ಮಾಡಬೇಕಾದ ಸಹಾಯ:

ಡಿ) ನಡೆಯಲಾರದವನಿಗೆ ಮಾಡಬೇಕಾದ ಸಹಾಯ:



## ಸಮಾಚಾರ ನೈಪುಣ್ಯಗಳು – ಪ್ರಾಜೆಕ್ಟ್ ಕೆಲಸ

1. ನಿಮ್ಮ ಮಿತ್ರರ ಮನೆಯಲ್ಲಿ ಯಾರ್ಯಾರು ಇರುವವರು ಕೇಳಿ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಮಿತ್ರನ ಹೆಸರು | ಕುಟುಂಬದ ಸದಸ್ಯರು | ಕುಟುಂಬದ ಸದಸ್ಯರ ಸಂಖ್ಯೆ |
|---|---|---|
| 1. ಉದಾ: ಮುರಳಿ | ಅಮ್ಮ, ಅಪ್ಪ, ಅಜ್ಜ, ತಂಗಿ, ಅಕ್ಕ, ಮುರಳಿ | 6 |
| 2. | | |
| 3. | | |
| 4. | | |
| 5. | | |
| 6. | | |
| 7. | | |
| 8. | | |
| 9. | | |

ಮೇಲಿನ ಪಟ್ಟಿಯ ಆಧಾರವಾಗಿ ಉತ್ತರಗಳನ್ನು ಹೇಳಿರಿ.

- ಯಾರ ಮನೆಯಲ್ಲಿ ಹೆಚ್ಚು ಜನ ಇದ್ದಾರೆ?
- ಯಾರ ಮನೆಯಲ್ಲಿ ಕಡಿಮೆ ಜನ ಇದ್ದಾರೆ?
- ಯಾರ ಯಾರ ಮನೆಯಲ್ಲಿ ವೃದ್ಧರು ಇದ್ದಾರೆ?

2. ನಿಮ್ಮ ವಂಶವೃಕ್ಷದಲ್ಲಿನ ವ್ಯಕ್ತಿಗಳ ಛಾಯಾ ಚಿತ್ರಗಳನ್ನು ಶೇಖರಿಸಿ ಆಲ್ಬಮ್ ತಯಾರಿಸಿರಿ. ನಿಮ್ಮ ತರಗತಿಯಲ್ಲಿ ಅದನ್ನು ಪ್ರದರ್ಶಿಸಿ ಪ್ರತಿಯೊಬ್ಬರನ್ನು ಕರಿತು ಹೇಳಿರಿ.

SCERT TELANGANA





## ಚಿತ್ರಗಳನ್ನು ಬಿಡಿಸುವದು, ಮಾದರಿಗಳ ತಯಾರಿ, ಪಟ ಕೌಶಲ್ಯ.

1. ವಿವಿಧ ಭಾವನೆಗಳನ್ನು ತೋರಿಸುವ ಮುಖದ ಚಿತ್ರಗಳನ್ನು ಬಿಡಿಸಿರಿ.



2. ನಿಮ್ಮ ತಂದೆತಾಯಿಯರ ಚಿತ್ರ ಬಿಡಿಸಿ ಹೆಸರು ಬರೆಯಿರಿ.





## ಪ್ರಶಂಸೆ, ಮೌಲ್ಯಗಳು, ನಿತ್ಯಜೀವನದಲ್ಲಿ ಉಪಯೋಗಿಸುವುದು, ಜೀವವೈವಿಧ್ಯತೆ.

1. ಒಂದು ದಿವಸ ಕಣ್ಣಿಗೆ ಬಟ್ಟೆಕಟ್ಟಿಕೊಂಡು ಊಹಿಸಿರಿ. ಪಾಠಶಾಲೆಗೆ ಹೇಗೆ ಹೋಗುತ್ತೀರಿ? ಸ್ನೇಹಿತರೊಂದಿಗೆ ಹೇಗೆ ಆಡಿಕೊಳ್ಳುತ್ತೀರೋ, ಕಲಿತುಕೊಳ್ಳುತ್ತೀರೋ ಸಂಕ್ಷಿಪ್ತವಾಗಿ ಬರೆಯಿರಿ.
2. ನಿಮ್ಮ ಕುಟುಂಬದ ಚರಿತ್ರೆ, ನಿಮ್ಮ ಕುಟುಂಬದ ವಿಶೇಷತೆ ಏನು? ತಿಳಿದುಕೊಂಡು ಹೇಳಿರಿ.



## ಪ್ರಶ್ನಿಸುವುದು, ಪರಿಕಲ್ಪಿಸುವುದು.

1. ರಮ ಅಜ್ಜನ ಹತ್ತಿರಕ್ಕೆ ಹೋದಳು. ಅವರ ವಂಶವೃಕ್ಷ ಕುರಿತು ತಿಳಿದುಕೊಳ್ಳಬೇಕೆಂದುಕೊಂಡಳು. ಇದಕ್ಕಾಗಿ ಅಜ್ಜನಿಗೆ ವಿವಿಧ ಪ್ರಶ್ನೆಗಳನ್ನು ಕೇಳಿದಳು. ರಮ ವಂಶವೃಕ್ಷ ಕುರಿತು ಯಾವ ಪ್ರಶ್ನೆಗಳನ್ನು ಕೇಳಿರಬಹುದು? ಮನೆಯ ಹೆಸರನ್ನು ಕುರಿತು ತಿಳಿದುಕೊಳ್ಳಬೇಕಾದರೆ ನೀವು ಯಾವ ಯಾವ ಪ್ರಶ್ನೆಗಳು ಕೇಳುತ್ತೀರಿ?



## ನಾನು ಇವನ್ನು ಮಾಡಬಲ್ಲೆನೇ?



1. ಕುಟುಂಬ ಎಂದರೆ ಏನೆಂದು ವಿವರಿಸಬಲ್ಲೆನು — ಹೌದು/ಇಲ್ಲ
2. ಕುಟುಂಬದ ಸದಸ್ಯರ ನಡುವಿನ ಸಂಬಂಧಗಳನ್ನು ಹೇಳಬಲ್ಲೆನು — ಹೌದು/ಇಲ್ಲ
3. ಕುಟುಂಬದ ವಂಶವೃಕ್ಷವನ್ನು ಬಿಡಿಸಬಲ್ಲೆನು. ಕುಟುಂಬದ ಚರಿತ್ರೆಯನ್ನು ಹೇಳಬಲ್ಲೆನು — ಹೌದು/ಇಲ್ಲ
4. ಕುಟುಂಬದ ಸದಸ್ಯರ ಕುರಿತು ಸಮಾಚಾರವನ್ನು ಪಟ್ಟಿಕೆಯಲ್ಲಿ ಬರೆಯಬಲ್ಲನು. — ಹೌದು/ಇಲ್ಲ
5. ವೃದ್ಧರು, ಪ್ರತ್ಯೇಕ ಅವಶ್ಯಕತೆಗಳು ಇರುವ ಮಕ್ಕಳಿಗೆ ಬೇಕಾದ ಸಹಾಯ ಮಾಡಬಲ್ಲೆನು — ಹೌದು/ಇಲ್ಲ
6. ಕುಟುಂಬದ ಚರಿತ್ರೆಯನ್ನು ವಂಶವೃಕ್ಷವನ್ನು ಕುರಿತು ಪ್ರಶ್ನಿಸಬಲ್ಲೆನು — ಹೌದು/ಇಲ್ಲ

SCERT TELANGANA





# 2. ಯಾರು ಯಾವ ಕೆಲಸ ಮಾಡುತ್ತಾರೆ?



ಇದು ಕಮಲಳ ಮನೆ. ಕಮಲಳ ಮನೆಯಲ್ಲಿ ಅವರ ಅಮ್ಮ, ಅಪ್ಪ, ಅಜ್ಜ, ಅಜ್ಜಿ ಇರುತ್ತಾರೆ. ಅವರು ಏನು ಮಾಡುತ್ತಿರುವರೋ ಪರಿಶೀಲಿಸಿರಿ.



ಕಮಲಾಳ ಅಪ್ಪ ಮನೆ ಕೆಲಸದಲ್ಲಿ ಅಮ್ಮನಿಗೆ ಸಹಾಯ ಮಾಡುತ್ತಾನೆ. ಅವಳ ತಂದೆ ಮಾಡುವ ಕೆಲಸದಲ್ಲಿ ಕಮಲ, ಅವಳ ತಮ್ಮ ಸೇರಿ ಸಹಾಯ ಮಾಡುತ್ತಾರೆ. ಕಮಲಳ ಅಜ್ಜ, ಅಜ್ಜಿ, ಸಹ ಮನೆಕೆಲಸದಲ್ಲಿ ಸಹಾಯ ಮಾಡುತ್ತಾರೆ. ಹೀಗೆ ಮನೆಕೆಲಸದಲ್ಲಿ ಎಲ್ಲರೂ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳುತ್ತಾರೆ.



ಕುಟುಂಬಗಳಲ್ಲಿ ದೊಡ್ಡವರು ಮನೆ ಕೆಲಸದ ಜೊತೆಗೆ ಹೊರಗಿನ ಕೆಲಸಗಳನ್ನು ಸಹ ಮಾಡುತ್ತಾರೆ. ಹೊಲಗಳಲ್ಲಿ, ಕಾರ್ಖಾನೆಗಳಲ್ಲಿ, ಮನೆ ನಿರ್ಮಾಣದಲ್ಲಿ, ರಸ್ತೆ ಹಾಕುವಲ್ಲಿ, ಕಾರ್ಯಾಲಯಗಳಲ್ಲಿ ವಿವಿಧ ಕೆಲಸಗಳು ಮಾಡುತ್ತಾರೆ. ದೊಡ್ಡವರು ಮಾಡುವ ವಿವಿಧ ರೀತಿ ಕೆಲಸದಿಂದ ಕುಟುಂಬಕ್ಕೆ ಆದಾಯ ಬರುತ್ತದೆ.



ನಿಮ್ಮ ಮನೆಯವರು ಯಾವ ಯಾವ ಕೆಲಸಗಳು ಮಾಡುತ್ತಾರೋ ಹೇಳಿರಿ. ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಕುಟುಂಬ ಸದಸ್ಯರ ಹೆಸರು | ಮನೆಯಲ್ಲಿ ಮಾಡುವ ಕೆಲಸಗಳು | ಆದಾಯಕ್ಕಾಗಿ ಹೊರಗಡೆ ಮಾಡುವ ಕೆಲಸಗಳು |
|---|---|---|
| | | |




### ಪರಸ್ಪರ ಸಹಕಾರ

ಕುಟುಂಬದವರು ವಿವಿಧ ರೀತಿಯ ಕೆಲಸಗಳನ್ನು ಮಾಡುತ್ತಾರೆ. ಕುಟುಂಬದಲ್ಲಿನ ದೊಡ್ಡವರು ಪ್ರತಿಯೊಬ್ಬರು ಒಂದೊಂದು ರೀತಿಯ ಕೆಲಸ ಮಾಡುತ್ತಾರೆ. ಕೆಲವು ಕೆಲಸಗಳನ್ನು ಮನೆಯವರೆಲರ್ಲ್ಲೂ ಸೇರಿ ಮಾಡುತ್ತಾರೆ.

**ಕೆಳಗಿನ ಚಿತ್ರ ನೋಡಿರಿ. ಯಾರು ಯಾವ ಕೆಲಸ ಮಾಡುತ್ತಿದ್ದಾರೋ ತಿಳಿಸಿರಿ.**





- ತಂದೆ ತಾಯಿಯರು ವಿವಿಧ ಪ್ರಕಾರದ ಕೆಲಸಗಳನ್ನು ಮಾಡುವುದನ್ನು ಚಿತ್ರದಲ್ಲಿ ಗಮನಿಸಿದ್ದೀರಿ ಅಲ್ಲವೇ! ಆದರೆ ತಾಯಿ ಅಡಿಗೆ ಮಾಡುವುದು ಸರಿಯಾದುದೆಂದು ನೀವು ಅಂದಕೊಳ್ಳುತ್ತೀರಾ? ಯಾವ ವಿಧವಾಗಿ?
- ನಿಮ್ಮ ಕುಟುಂಬದವರೂ ಸಹ ಹೀಗೆ ಒಬ್ಬರಿಗೊಬ್ಬರು ಕೆಲಸದಲ್ಲಿ ಸಹಾಯ ಮಾಡುತ್ತಾರೆಯೇ?
- ನೀವು ಯಾವ ಯಾವ ಕೆಲಸಗಳು ಮಾಡುತ್ತೀರಿ?ಯಾರಿಗೆ ಸಹಕರಿಸುತ್ತೀರಿ?
- ನಿಮ್ಮ ಮನೆಯಲ್ಲಿ ಎಲ್ಲರೂ ಸೇರಿ ಮಾಡುವ ಕೆಲಸಗಳು ಯಾವುವು?

SCERT TELANGANA







## ಚರ್ಚಿಸಿ. ವಿವರಗಳು ಪಟ್ಟಿಯಲ್ಲಿ ಬರೆಯಿರಿ.

ನಿಮ್ಮ ತರಗತಿಯಲ್ಲಿನ ಆರು ಜನ ವಿದ್ಯಾರ್ಥಿಗಳನ್ನು ಕೇಳಿರಿ. ಅವರ ತಾಯಿ ತಂದೆಯರು ಯಾವ ಯಾವ ಕೆಲಸಗಳು ಮಾಡುತ್ತಾರೆ? ಮನೆಯವರೆಲ್ಲರೂ ಕೂಡಿ ಮಾಡುವ ಕೆಲಸಗಳು ಯಾವುವು? ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಸ್ನೇಹಿತನ ಹೆಸರು | ತಾಯಿ ಮಾಡುವ ಕೆಲಸ | ತಂದೆ ಮಾಡುವ ಕೆಲಸ | ಮನೆಯಲ್ಲಿ ಎಲ್ಲರೂ ಸೇರಿ ಮಾಡುವ ಕೆಲಸಗಳು |
|---|---|---|---|
| 1 | | | |
| 2 | | | |
| 3 | | | |
| 4 | | | |
| 5. | | | |
| 6. | | | |

- ಹೆಚ್ಚು ಜನ ತಾಯಂದಿರು ಮಾಡುವ ಕೆಲಸಗಳು ಯಾವುವು?

..............................................................................................................

..............................................................................................................

- ಹೆಚ್ಚು ಜನ ತಂದೆಯರು ಮಾಡುವ ಕೆಲಸಗಳು ಯಾವುವು?

..............................................................................................................

..............................................................................................................

- ಕುಟುಂಬದಲ್ಲಿ ಎಲ್ಲರೂ ಕೂಡಿ ಮಾಡುವ ಕೆಲಸಗಳು ಯಾವುವು?

..............................................................................................................

..............................................................................................................

ಕುಟುಂಬದಲ್ಲಿನ ವ್ಯಕ್ತಿಗಳೆಲ್ಲರೂ ಜೊತೆಗೂಡಿ ಕೆಲಸಗಳು ಮಾಡಿಕೊಳ್ಳಬೇಕು ಹೀಗೆ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳುವುದರಿಂದ ಒಬ್ಬರಮೇಲೆ ಮತ್ತೊಬ್ಬರಿಗೆ ಪ್ರೇಮ ಅಭಿಮಾನ ಉಂಟಾಗುತ್ತದೆ.



### ವೃತ್ತಿಗಳು:

ಕುಟುಂಬದಲ್ಲಿ ತಾಯಿ, ತಂದೆ, ಎಲ್ಲರೂ ವಿಧವಿಧವಾದ ಕೆಲಸಗಳು ಮಾಡುವುದರಿಂದ ನಮ್ಮ ಅವಶ್ಯಕತೆಗಳು ಪೂರೈಕೆಯಾಗುತ್ತವೆ. ನಮ್ಮ ಕುಟುಂಬದಂತೆಯೇ ಊರಿನಲ್ಲಿ ಸಹ ವಿವಿಧ ಕೆಲಸಗಳನ್ನು ಮಾಡುವವರು ಇರುತ್ತಾರೆ. ಅವರ ಬಗ್ಗೆ ನಿಮಗೆ ಗೊತ್ತೇ?

SCERT TELANGANA



ಗ್ರಾಮದಲ್ಲಿ ಹಲವು ವಿಧದ ಕೆಲಸಗಳು ಮಾಡುವವರ ಚಿತ್ರಗಳು ಕೆಲವು ಕೆಳಗೆ ಕೊಟ್ಟಿವೆ. ಅವರಿಂದ ಎಂತಹ ಉಪಯೋಗವಿರುತದೆಯೋ ಹೇಳಿರಿ.



ಇವಳು ಸಮ್ಮಕ್ಕ ಬುಟ್ಟಿ ಹೆಣೆಯುತ್ತಿದ್ದಾಳೆ.



ಈತ ವೆಂಕಣ್ಣ ಚಪ್ಪಲಿ ಹೊಲಿಯುತ್ತಾನೆ.



ಈತ ಕೊಮರಯ್ಯ ಕ್ಷೌರ ಮಾಡುತ್ತಾನೆ.



ಈತ ಶಂಕರಯ್ಯ, ಬಡಗಿ ಕೆಲಸ ಮಾಡುತ್ತಾನೆ.

* ನಿಮ್ಮ ಗ್ರಾಮದಲ್ಲಿಯೂ ಸಹ ಕೆಲಸಗಳು ಮಾಡುವವರು ಇದ್ದಾರೆಯೇ?
* ನಿಮ್ಮ ಗ್ರಾಮದಲ್ಲಿ ಇನ್ನೂ ಯಾವ ಯಾವ ಕೆಲಸಗಳು ಮಾಡುವವರು ಇದ್ದಾರೆ?






**ಚರ್ಚಿಸಿರಿ :** ನಿಮ್ಮ ಗ್ರಾಮದಲ್ಲಿ ವಿವಿಧ ಕೆಲಸಗಳು ಮಾಡುವವರು ಇದ್ದಾರಲ್ಲವೇ! ರಾಜಯ್ಯ ರಸ್ತೆ ಶುಭ್ರಗೊಳಿಸುವುದು, ಚರಂಡಿ ಶುಭ್ರ ಮಾಡುವಂತಹ ಕೆಲಸಗಳು ಮಾಡುತ್ತಾನೆ. ರಾಜಯ್ಯನ ಹಾಗೆ ಊರಿನಲ್ಲಿ ಹಲವು ರೀತಿಯ ಕೆಲಸ ಮಾಡುವವುರು ಇನ್ನೂ ಯಾರ್ಯಾರು ಇದ್ದಾರೆ? ಅವರು ಆ ಕೆಲಸಗಳು ಮಾಡದಿದ್ದರೆ ಏನಾಗುತ್ತದೆ?

SCERT TELANGANA





ಗ್ರಾಮದಲ್ಲಿ ಹಲವು ವಿಧದ ಕೆಲಸಗಳು ಮಾಡುವವರು ಇರುತ್ತಾರೆ. ಎಲ್ಲಾ ಕೆಲಸಗಳೂ ಮುಖ್ಯವಾದವುಗಳೇ. ಆದಾಯಕ್ಕಾಗಿ ಕೌಶಲ್ಯತೆಯಿಂದ ಮಾಡುವ ಕೆಲಸಗಳನ್ನು 'ವೃತ್ತಿಗಳು' ಎನ್ನುವರು. ಎಲ್ಲಾ ವೃತ್ತಿಭಾಂದವರೂ ಗ್ರಾಮದ ಅಭಿವೃದ್ಧಿಗೆ ಅವಶ್ಯಕ. ಅದಕ್ಕಾಗಿ ಎಲ್ಲಾ ವೃತ್ತಿಗಳವರನ್ನು ಗೌರವಿಸಬೇಕು.



## ಕೆಲಸ ಮಾಡುವ ಮಕ್ಕಳು



ಈಕೆ ಕಮಲ. ಕಮಲಳಿಗೆ ಶಾಲೆಗೆ ಹೋಗಲು ಬಹಳ ಇಷ್ಟ. ಆದರೆ ಈಗ ಶಾಲೆಗೆ ಹೋಗುತ್ತಿಲ್ಲ. ಮನೆ ಹತ್ತಿರ ತಂಗಿಯನ್ನು ಎತ್ತಿಕೊಂಡು ಆಡಿಸುತ್ತಾಳೆ. ಕಮಲಳ ತಂದೆ ಹೊಲಕ್ಕೆ, ತಾಯಿ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಕಮಲ ಮನೆಕೆಲಸ ಮಾಡುತ್ತಾ ದಿನವಿಡೀ ಮನೆಯ ಹತ್ತಿರವೇ ಇರುತ್ತಾಳೆ. ಎಂದಾದರೂ ಬಿಡುವಿನ ಸಮಯ ಸಿಕ್ಕರೆ ತನ್ನ ಪುಸ್ತಕಗಳನ್ನು ತೆರೆದು ಓದಿಕೊಳ್ಳುತ್ತಾಳೆ. ಶಾಲೆಗೆ ಹೋಗುವ ಮಕ್ಕಳನ್ನು ನೋಡಿದಾಗಲೆಲ್ಲಾ ಕಮಲಳಿಗೆ ಶಾಲೆಗೆ ಹೋಗಬೇಕೆನಿಸುತ್ತದೆ.

> ಮಕ್ಕಳು ಶಾಲೆಗೆ ಹೋಗದೆ ಕೆಲಸಕ್ಕೆ ಹೋಗುವುದರಿಂದ ಆಗುವ ನಷ್ಟ ಏನು?
>
> ಶಾಲೆಗೆ ಹೋಗದ ಮಕ್ಕಳು ಕಾಣಿಸಿದರೆ ನಾವು ಏನು ಮಾಡಬೇಕು?

ತಂದೆ ತಾಯಿಗಳು ಮಕ್ಕಳನ್ನು ಶಾಲೆಯಲ್ಲಿ ಸೇರಿಸಬೇಕು. ಓದಿಕೊಳ್ಳುವುದು ಮಕ್ಕಳ ಹಕ್ಕು. ಆದ್ದರಿಂದ ಮಕ್ಕಳೆಲ್ಲರೂ ಪ್ರತಿದಿನ ಶಾಲೆಗೆ ಹೋಗಬೇಕು.

### ಕಠಿಣ ಪದಗಳು

| | | |
|---|---|---|
| 1. ಮನೆಯಲ್ಲಿನ ಕೆಲಸಗಳು | 2. ಹೊರಗಿನ ಕೆಲಸಗಳು | 3. ಆದಾಯ |
| 4. ಸಹಕಾರ | 5. ವೃತ್ತಿಗಳು | 6. ಸೇರಿ ಮಾಡುವ ಕೆಲಸಗಳು |
| 7. ಕೆಲಸಮಾಡುವ ಮಕ್ಕಳು | 8. ಮಕ್ಕಳೆಲ್ಲರೂ ಶಾಲೆಗೆ ಹೋಗಬೇಕು | |

### ನಾವು ಕಲಿತಿರುವವು

- ಮನೆಯಲ್ಲಿರುವವರೆಲ್ಲ ಮನೆಯೊಳಗೆ, ಹೊರಗೆ ಹಲವು ವಿಧದ ಕೆಲಸಗಳು ಮಾಡುತ್ತಾರೆ.
- ಕುಟುಂಬದಲ್ಲಿನ ವ್ಯಕ್ತಿಗಳೆಲ್ಲರೂ ಜೊತೆಗೂಡಿ ಕೆಲಸಗಳು ಮಾಡಿಕೊಳ್ಳಬೇಕು.
- ದೊಡ್ಡವರು ಹಲವು ವಿಧದ ಕೆಲಸಗಳು ಮಾಡುತ್ತಾರೆ. ಆದ್ದರಿಂದ ಕುಟುಂಬಕ್ಕೆ ಆದಾಯ ಬರುತ್ತದೆ.
- ಮನೆಕೆಲಸದಲ್ಲಿ ಮಕ್ಕಳು ದೊಡ್ಡವರಿಗೆ ಸಹಾಯ ಮಾಡಬೇಕು.
- ಎಲ್ಲಾ ವೃತ್ತಿಯವರನ್ನೂ ಗೌರವಿಸಬೇಕು.
- ಗ್ರಾಮದಲ್ಲಿ ಹಲವು ವಿಧದ ವೃತ್ತಿಯವರು ಇರುತ್ತಾರೆ.
- ಶಾಲಾ ವಯಸ್ಸಿನ ಮಕ್ಕಳೆಲ್ಲರೂ ಶಾಲೆಗೆ ಹೋಗಿ ಓದಿಕೊಳ್ಳಬೇಕು.

SCERT TELANGANA



## ಇವು ಮಾಡಿರಿ




### ವಿಷಯಾವಗಾಹನೆ

1. ಕುಟುಂಬದಲ್ಲಿನ ದೊಡ್ಡವರು ಏಕೆ ಕೆಲಸಗಳನ್ನು ಮಾಡುತ್ತಾರೆ?
2. ಕುಟುಂಬದಲ್ಲಿನವರು ಕೂಡಿ ಮಾಡುವ ಕೆಲಸಗಳಿಗೆ ಎರಡು ಉದಾಹರಣೆ ಬರೆಯಿರಿ.
3. ಕೆಳಗೆ ಕೆಲಸಗಳಲ್ಲಿ ಆದಾಯವನ್ನು ಕೊಡುವುದಕ್ಕೆ "⬭" ಸುತ್ತಿರಿ.

| | | |
|---|---|---|
| ಅಡಿಗೆ ಮಾಡುವುದು | ಬುಟ್ಟಿ ಹೆಣೆಯುವುದು | ಮನೆಕಸ ಬಳೆಯುವುದು |
| ಗಡಿಗೆ ಮಾಡುವುದು | ಬಟ್ಟೆಗಳು ಒಗೆಯುವುದು | ಪಾಠ ಹೇಳುವುದು |
| ಪಾತ್ರೆ ತೊಳೆಯುವುದು | ಹಣ್ಣು ಮಾರುವುದು | ಹೊಲದ ಕೆಲಸ ಮಾಡುವುದು |
| ಸ್ನಾನ ಮಾಡುವುದು | ಊಟ ಮಾಡುವುದು | ಹಾಲು ಮಾರುವುದು |
| ಆಟಗಳನ್ನು ಆಡುವುದು | ಓದಿಕೊಳ್ಳುವುದು | ಬಟ್ಟೆಗಳನ್ನು ಹೊಲಿಯುವುದು |

4. ನಿಮ್ಮ ಗ್ರಾಮದಲ್ಲಿ ಯಾವ ಯಾವ ಕೆಲಸಗಳನ್ನು ಮಾಡುವರು ಇದ್ದಾರೆ ?
5. ಕೆಳಗಿನ ಚಿತ್ರಗಳು ನೋಡಿರಿ. ಇವರು ಯಾವ ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ? ಇವರು ಇಲ್ಲದಿದ್ದರೆ ಏನಾಗುತ್ತದೆ?








### ಚಿತ್ರಗಳನ್ನು ಬಿಡಿಸಿ, ಬಣ್ಣಗಳನ್ನು ಹಾಕಿರಿ.


1. ಕೆಳಗಿನ ಚಿತ್ರಗಳನ್ನು ಬಿಡಿಸಿರಿ. ಬಣ್ಣಗಳನ್ನು ಹಾಕಿರಿ. ಅವುಗಳನ್ನು ಕುರಿತು ಮಾತನಾಡಿರಿ.




SCERT TELANGANA











## ಸಾಮಾಚಾರ ಕೌಶಲ್ಯ – ಪ್ರಾಜೆಕ್ಟ್ ಕೆಲಸ


1. ವಿವಿಧ ಕೆಲಸಗಳನ್ನು ಮಾಡುವವರ ವಿವರಗಳು ಶೇಕರಿಸಿರಿ. ಅವರನ್ನು ಕುರಿತು ಮಾತನಾಡಿರಿ. ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್ ತಯಾರು ಮಾಡಿರಿ. ತರಗತಿಯಲ್ಲಿ ಪ್ರದರ್ಶಿಸಿರಿ.

2. ನಿಮ್ಮ ಪ್ರದೇಶದಲ್ಲಿ ಶಾಲೆಗೆ ಹೋಗದ ಮಕ್ಕಳ ಹೆಸರು ತಿಳಿಸಿರಿ. ಅವರು ಶಾಲೆಗೆ ಏಕೆ ಹೋಗುತ್ತಿಲ್ಲವೋ ತಿಳಿಸಿರಿ.

3. ನಿಮ್ಮ ಮಿತ್ರರನ್ನು ಕೇಳಿ ಅವರ ಅಮ್ಮ, ಅಪ್ಪ ಯಾವ ಯಾವ ವೃತ್ತಿಗಳು ಮಾಡುತ್ತಿರುವರೋ ವಿವರಗಳನ್ನು ಸಂಗ್ರಹಿಸಿರಿ. ಪಟ್ಟಿಯಲ್ಲಿ ಬರೆಯಿರಿ.

| ಕ್ರ.ಸಂ | ಮಿತ್ರರ ಹೆಸರು | ತಾಯಿ ವೃತ್ತಿ ಹೆಸರು | ತಂದೆಯ ವೃತ್ತಿ ಹೆಸರು | ಮಾಡುವ ಕೆಲಸ |
|---|---|---|---|---|
| 1. | | | | |
| 2. | | | | |
| 3. | | | | |
| 4. | | | | |
| 5. | | | | |
| 6. | | | | |
| 7. | | | | |

SCERT TELANGANA



4. ನಿಮ್ಮ ಮನೆಯಲ್ಲಿ ಈ ಕೆಳಗಿನ ಕೆಲಸಗಳು ಯಾರಾರು ಸೇರಿ ಮಾಡುತ್ತಾರೋ ✓ ಮಾಡಿರಿ.

| ಕೆಲಸದ ಹೆಸರು | ತಾಯಿ | ತಂದೆ | ನಾನು | ಅಣ್ಣ/ತಮ್ಮ | ಅಕ್ಕ/ತಂಗಿ | ಅಜ್ಜ | ಅಜ್ಜಿ |
|---|---|---|---|---|---|---|---|
| ಮನೆ ಶುಭ್ರಗೊಳಿಸುವುದು | | | | | | | |
| ಅಡುಗೆ ಮಾಡುವುದು | | | | | | | |
| ನೀರು ತರುವುದು | | | | | | | |
| ಬಟ್ಟೆಗಳು ಒಗೆಯುವುದು | | | | | | | |
| ಹೊಲದ ಕೆಲಸ | | | | | | | |
| ತರಕಾರಿ ತರುವುದು | | | | | | | |
| ಅಂಗಡಿಯಿಂದ ವಸ್ತುಗಳನ್ನು ತರುವುದು | | | | | | | |



**ಪ್ರಶಂಸೆ**

1. ನಿಮ್ಮ ಗ್ರಾಮದಲ್ಲಿ ವಿವಿಧ ವೃತ್ತಿಗಳು ಮಾಡುವವರು ಇರುತ್ತಾರೆ. ಅವರನ್ನು ಗೌರವಿಸಬೇಕು. ಅವರು ಆ ವೃತ್ತಿಗಳನ್ನು ಮಾಡದಿದ್ದರೆ ಏನಾಗುತ್ತದೆ ಹೇಳಿ ಬರೆಯಿರಿ.



**ಪ್ರಶ್ನಿಸುವುದು**

1. ಶಿವಯ್ಯ ತಮ್ಮ ಊರಿನಲ್ಲಿನ ಬಡಗಿ ಶಂಕರಯ್ಯನ ಹತ್ತಿರಕ್ಕೆ, ಕುಂಬಾರ ಲಿಂಗಯ್ಯನ ಹತ್ತಿರಕ್ಕೂ ಹೋದನು. ಅವರು ಮಾಡುವ ಕೆಲಸಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಿದನು. ಶಿವಯ್ಯ ಶಂಕರಯ್ಯನನ್ನು, ಲಿಂಗಯ್ಯನನ್ನು ಯಾವ ಯಾವ ಪ್ರಶ್ನೆಗಳು ಕೇಳಿರುತ್ತಾನೋ ಊಹಿಸಿ ಬರೆಯಿರಿ.



**ನಾನು ಇವನ್ನು ಮಾಡಬಲ್ಲೆನೇ?**



1. ಕುಟುಂಬದಲ್ಲಿನ ವ್ಯಕ್ತಿಗಳು ಮಾಡುವ ಕೆಲಸಗಳ ಅವಶ್ಯಕತೆಯನ್ನು ವಿವರಿಸಬಲ್ಲೆನು. ಹೌದು/ಇಲ್ಲ
2. ಕುಟುಂಬದಲ್ಲಿ ಸೇರಿ ಮಾಡುವ ಕೆಲಸಗಳು ಯಾವುವು, ವೈಯಕ್ತಿಕವಾಗಿ ಮಾಡುವ ಕೆಲಸಗಳು ಯಾವುವು ಪಟ್ಟಿಯ ಆಧಾರವಾಗಿ ವಿವರಿಸಬಲ್ಲೆನು ಹೌದು/ಇಲ್ಲ
3. ನಮ್ಮ ಮಿತ್ರರ ತಂದೆ ತಾಯಿಗಳು ಯಾವ ಯಾವ ವೃತ್ತಿಗಳು ಮಾಡುತ್ತಾರೋ ಪಟ್ಟಿಯಲ್ಲಿ ಬರೆಯಬಲ್ಲೆನು. ಹೌದು/ಇಲ್ಲ
4. ಮಕ್ಕಳೆಲ್ಲರೂ ಕೆಲಸಕ್ಕೆ ಹೋಗದಂತೆ ಶಾಲೆಗೆ ಹೋಗಬೇಕೆಂದು ತಿಳಿದುಕೊಂಡೆನು ಕೆಲಸ ಮಾಡುವ ಮಕ್ಕಳು ಕಾಣಿಸಿದರೆ ಶಾಲೆಗೆ ಸೇರಿಸಿರಿ ಎಂದು ಹೇಳುತ್ತೇನೆ. ಹೌದು/ಇಲ್ಲ
5. ಕೆಲವು ಕೆಲಸದ ಉಪಕರಣಗಳ/ವಸ್ತುಗಳ ಚಿತ್ರಗಳನ್ನು ಚಿತ್ರಿಸಬಲ್ಲೆನು. ಹೌದು/ಇಲ್ಲ
6. ವಿವಿಧ ವೃತ್ತಿಗಳು ಮಾಡುವವರನ್ನು ಭೇಟಿಯಾಗಿ ಅವರ ಕೆಲಸಗಳನ್ನು ಕುರಿತು ಪ್ರಶ್ನಿಸಬಲ್ಲೆನು. ಹೌದು/ಇಲ್ಲ

SCERT TELANGANA





# 3. ಆಡಿಕೊಳ್ಳೋಣಾ!



ಮಸ್ತಾನ್, ರಹೀಂ, ಲತ, ಕಮಲ, ಜಾನಿ, ಗಿರಿ ಆಟವಾಡಲು ಮೈದಾನಕ್ಕೆ ಹೋದರು. ಅಲ್ಲಿ ಇನ್ನೂ ಹೆಚ್ಚು ಮಂದಿ ಮಕ್ಕಳು ಇದ್ದಾರೆ ಅವರೆಲ್ಲ ವಿವಿಧ ಆಟಗಳು ಆಡುತ್ತಿದ್ದಾರೆ. ಅವರು ಯಾವ ಯಾವ ಆಟಗಳು ಆಡುತ್ತಿದ್ದಾರೋ ನೋಡೋಣವೇ!



SCERT TELANGANA

- ಮೇಲಿನ ಚಿತ್ರದಲ್ಲಿ ಮಕ್ಕಳು ಯಾವ ಯಾವ ಆಟಗಳು ಆಡುತ್ತಿದ್ದಾರೆ?
- ನೀವು ಈ ಆಟಗಳನ್ನೇ ಆಡುತ್ತೀರಾ? ನೀವು ಯಾವ ಯಾವ ಆಟಗಳು ಆಡುತ್ತೀರಿ?
- ಆಟಗಳೆಂದರೆ ಯಾರಿಗಾದರೂ ಬಹಳ ಇಷ್ಟವಲ್ಲವೇ!ಹಾಗದರೇ ಆಟಗಳು ಏತಕ್ಕಾಗಿ ಆಡಬೇಕು?





## ಆಟಗಳು – ವಿಧಗಳು

ಭಾನುವಾರದಂದು ಗಿರಿ ಮನೆಯಲ್ಲಿಯೇ ಅವರ ಅಕ್ಕನೊಂದಿಗೆ, ತಂಗಿಯೊಂದಿಗೆ ವಿವಿಧ ಆಟಗಳು ಆಡಿದರು. ಮಸ್ತಾನ್ ತನ್ನ ಸ್ನೇಹಿತರೊಂದಿಗೆ ಸೇರಿ ಮೈದಾನದಲ್ಲಿ ವಿವಿಧ ಆಟಗಳನ್ನು ಆಡಿದರು.

ಗಿರಿ ಯಾವ ಯಾವ ಆಟಗಳನ್ನು ಮನೆಯಲ್ಲಿ ಆಡಿರಹುದು? ಮಸ್ತಾನ್ ಯಾವ ಯಾವ ಆಟಗಳನ್ನು ಮೈದಾನದಲ್ಲಿ ಆಡಿರಬಹುದು? ಗುಂಪುಗಳಲ್ಲಿ ಚರ್ಚಿಸಿ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಮನೆಯಲ್ಲಿ ಆಡುವ ಆಟಗಳು | ಮೈದಾನ/ಹೊರಗಡೆ ಆಡುವ ಆಟಗಳು |
|---|---|
| | |

SCERT TELANGANA



ಮನೆಯಲ್ಲಿ ಆಡುವ ಆಟಗಳು, ಹೊರಗಡೆ ಆಡುವ ಆಟಗಳು ಪಟ್ಟಿ ತಯಾರು ಮಾಡಿದ್ದೀರಲ್ಲವೇ! ಮತ್ತೆ ನಿಮ್ಮ ತಾಯಿ, ತಂದೆ, ಅಜ್ಜಂದಿರು ತಮ್ಮ ಚಿಕ್ಕ ವಯಸ್ಸಿನಲ್ಲಿ ಇವೇ ಆಟಗಳು ಆಡುತ್ತಿದ್ದರೇ? ಅವರು ಆಡಿದ ಆಟಗಳು ಯಾವುವು? ತಿಳಿದುಕೊಂಡು ಬರೆಯಿರಿ.


| ನೀವು ಪ್ರಸ್ತುತವಾಗಿ ಆಟಗಳು | ಅಜ್ಜ, ಅಜ್ಜಿಯರು ಚಿಕ್ಕಂದಿನಲ್ಲಿ ಆಡಿದ ಆಟಗಳು |
|---|---|
| | |

* ನಿಮ್ಮ ಅಜ್ಜ, ತಾಯಿ, ತಂದೆಯರು ಅವರ ಚಿಕ್ಕಂದಿನಲ್ಲಿ ಆಡಿದ ಆಟಗಳಲ್ಲಿ ಈಗ ನೀವು ಸಹಾ ಆಡುತ್ತಿರುವ ಆಟಗಳು ಯಾವುವು? ನೀವು ಆಡದ ಆಟಗಳು ಯಾವುವು?





ಕೆಳಗಿನ ಚಿತ್ರಗಳನ್ನು ನೋಡಿರಿ, ಇವನ್ನು ಆಡುವುದಕ್ಕೆ ಯಾವ ಯಾವ ಆಟದ ಸಾಮಾಗ್ರಿಗಳು ಅವಶ್ಯಕವಾಗುತ್ತವೆಯೋ ಬರೆಯಿರಿ. ಅದೇ ವಿಧವಾಗಿ ಅವನ್ನು ಎಲ್ಲಿ ಆಡುತ್ತಾರೆ? ಮನೆಯಲ್ಲಿಯೇ? ಹೊರಗೇ?ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಆಟಗಳು | ಆಟದ ಸಾಮಾಗ್ರಿಗಳು | ಎಲ್ಲಿ ಆಡುತ್ತಾರೆ |
|---|---|---|
|  | | |
|  | | |
|  | | |
|  | | |
|  | | |
|  | | |
|  | | |

SCERT TELANGANA






## ವಿವಿಧ ಬಗೆಯ ಆಟಗಳು

ನೀವು ವಿವಿಧ ಆಟಗಳನ್ನು ಆಡುತ್ತಾ ಇರುತ್ತೀರಲ್ಲವೇ! ಅವುಗಳಲ್ಲಿ ಕೆಲವನ್ನು ಒಬ್ಬರೇ ಆಡುತ್ತಿರುತ್ತೀರಿ. ಮತ್ತೆ ಕೆಲವು ಆಟಗಳನ್ನು ಸಹಪಾಠಿಗಳ ಜೊತೆ ಸೇರಿ ಆಡುತ್ತೀರಿ. ಇನ್ನೂ ಕೆಲವು ಆಟಗಳನ್ನು ಹೆಚ್ಚು ಜನ ಸೇರಿ ಆಡುತ್ತೀರಿ ಇಂತಹ ಆಟಗಳ ವಿವರಗಳನ್ನು ಗುಂಪಿನಲ್ಲಿ ಚರ್ಚಿಸಿ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಒಬ್ಬರೇ ಆಡುವ ಆಟಗಳು | ಇಬ್ಬರು ಸೇರಿ ಆಡುವ ಆಟಗಳು | ಹೆಚ್ಚು ಮಂದಿ ಸೇರಿ ಆಡುವ ಆಟಗಳು |
|---|---|---|
| | | |

## ಆಟದ ಸಾಮಾಗ್ರಿಗಳು



ಶ್ವೇತ, ಸಲ್ಮಾ, ಮೆರಿ, ಸಂಕಲ್ಪ, ನಿಖಿಲ್, ಅಜಿತ್ ಸಾಯಂಕಾಲ ಕ್ರಿಕೆಟ್ ಆಡಿಕೊಳ್ಳಲು ಹೋದರು. ಇದಕ್ಕಾಗಿ ಬ್ಯಾಟು, ಚೆಂಡು, ವಿಕೆಟ್ ಗಳನ್ನು ತಮ್ಮ ಜೊತೆಗೆ ತೆಗೆದುಕೊಂಡು ಹೋದರು, ಹೀಗೆ ನೀವು ಆಡಿಕೊಳ್ಳುವ ಕೆಲವು ಆಟಗಳಿಗೆ ಆಟದ ಸಾಮಾಗ್ರಿಗಳು ಬೇಕಾಗುತ್ತವೆಯಲ್ಲವೇ? ಹಾಗೆಯೇ ಕೆಲವು ಆಟಗಳು ಆಡುವುದಕ್ಕೆ ಆಟದ ಸಾಮಾಗ್ರಿಗಳ ಅವಶ್ಯಕತೆ ಇರುವುದಿಲ್ಲ, ಕಣ್ಣಾ ಮುಚ್ಚಾಲೆ ಆಟ ಆಡಲು ಯಾವ ವಿಧವಾದ ಆಟದ ಸಾಮಾಗ್ರಿಗಳು ಅವಸರವಿಲ್ಲ.

ಹೀಗೆ ಆಟದ ಸಾಮಾಗ್ರಿಗಳು ಅವಸರವಿಲ್ಲದ ಆಟಗಳು ಯಾವುವು? ಆಟದ ಸಾಮಾಗ್ರಿಗಳು ಬೇಕಾಗಿರುವ ಆಟಗಳು ಯಾವುವು? ಪಟ್ಟಿಯಲ್ಲಿ ಬರೆಯಿರಿ.

| ಆಟದ ಸಾಮಾಗ್ರಿಗಳು ಅವಶ್ಯಕವಿಲ್ಲದ ಆಟಗಳು | ಆಟದ ಸಾಮಾಗ್ರಿಗಳು ಅವಶ್ಯಕವಾದ ಆಟಗಳು |
|---|---|
| | |

SCERT TELANGANA







## ಆಟಗಳು – ನಿಯಮಗಳು

ರಾಮು, ಜಾನಿ, ಗೋಪಿ, ಶ್ರೀನು, ಮುರಳಿ, ಶ್ರದ್ಧ, ಪೀಟರ್, ಜಬ್ಬರ, ಮಸ್ತಾನ್ ಕಬಡ್ಡಿ ಆಡುತ್ತಿದ್ದಾರೆ. ಆಟದ ಮಧ್ಯದಲ್ಲಿ ಎಲ್ಲರೂ ಜಗಳವಾಡಿದರು ಆಟದಲ್ಲಿ ಮಾಡಿದ ತಪ್ಪುಗಳ ಮೇಲೆ ಜಗಳ ನಡೆಯಿತು. ಆಟ ನಿಂತು ಹೋಯಿತು, ಮುರಳಿ, ಜಾನ್, ಮಸ್ತಾನ್, ಆಟವಾಡುವುದಿಲ್ಲ ಎಂದು ಮನೆಗೆ ಹೋಗಿಬಿಟ್ಟರು.

### ಆಲೋಚಿಸಿ ಹೇಳಿರಿ

* ಮಕ್ಕಳು ಆಟವನ್ನು ಮಧ್ಯದಲ್ಲಿ ಏತಕ್ಕಾಗಿ ನಿಲ್ಲಿಸಿದರು?
* ಆಟಗಳಲ್ಲಿ ಜಗಳವಾಗದಂತೆ ಇರಲು ಏನು ಮಾಡಬೇಕು?

### ನಿಮಗೆ ಗೊತ್ತೇ ?




ಕೆಲವು ಆಟಗಳನ್ನು ಪ್ರಾಣಿಗಳ ಸಹಾಯದಿಂದ ಆಡುತ್ತಾರೆ. ಪೋಲೋ ಆಟದಲ್ಲಿ ಆಟಗಾರರು ಕುದುರೆಗಳ ಮೇಲೆ ಸವಾರಿ ಮಾಡುತ್ತಾ ಚೆಂಡನ್ನು ಬ್ಯಾಟಿನಿಂದ ಹೊಡೆಯುತ್ತಾ ಆಡುತ್ತಾರೆ.

ಯಾವ ಆಟಕ್ಕಾದರು ನಿಯಮಗಳು ಇರುತ್ತವೆ, ನಿಯಮಗಳ ಪ್ರಕಾರ ಆಟಗಳು ಆಡಬೇಕು. ಆಟಗಳು ಆಡುವಾಗ ನಿಯಮಗಳನ್ನು ಮೀರಬಾರದು. ಗೆಲುವು – ಸೋಲಿನ ಬಗೆಗೆ ಆಸಕ್ತಿ ವಹಿಸದೇ ಆಟಗಳು ಆಡುವುದು ಮುಖ್ಯ. ನಾವು ಪ್ರತಿದಿನ ತಪ್ಪದೇ ಆಟಗಳನ್ನು ಆಡಬೇಕು. ಆಟಗಳಾಡಿದರೆ ಆರೋಗ್ಯವಾಗಿ ಇರುತ್ತೇವೆ. ಸ್ನೇಹಿತರ ಬಳಗ ಬೆಳೆಯುತ್ತದೆ. ಆಟಗಳಲ್ಲಿಯ ನಿಯಮಗಳ ಮಾದರಿಯಂತೆ ವಯಕ್ತಿಕ ಶರೀರ ಭದ್ರತೆಗೆ ಕೂಡ ಕೆಲವು ನಿಯಮಗಳು ಇವೆ. ಇವುಗಳನ್ನು ವಯಕ್ತಿಕ ಶರೀರ ಭದ್ರತ ನಿಯಮಗಳೆಂದು ಕರೆಯುತ್ತಾರೆ.

ಆ ದಿನ ನವಂಬರ್ 14, ಮಕ್ಕಳ ದಿನಾಚರಣೆಯ ಸಂದರ್ಭವಾಗಿ ಮಕ್ಕಳೆಲ್ಲರಿಗೆ ಆಟೋಟಗಳ ಸ್ಪರ್ಧೆಯನ್ನು ಏರ್ಪಡಿಸಿದ್ದರು, ಓಟದ ಸ್ಪರ್ಧೆಯಲ್ಲಿ ಗೋಪಿ ಎಲ್ಲರಿಗಿಂತಲೂ ವೇಗವಾಗಿ ಓಡಿ ಪ್ರಥಮ ಬಹುಮಾನ ಪಡೆದನು. ಪಾಠಶಾಲೆಯಲ್ಲಿನ ಮಕ್ಕಳು, ಶಿಕ್ಷಕರು ಗೋಪಿಯನ್ನು ಅಭಿನಂದಿಸಿದರು.



* ನಿಮ್ಮ ಪಾಠಶಾಲೆಯಲ್ಲಿ ಚೆನ್ನಾಗಿ ಆಟಗಳು ಆಡುವವರನ್ನು ಯಾವಾಗ ಅಭಿನಂದಿಸಿದ್ದೀರಿ?
* ಆಟಗಳಲ್ಲಿ ಗೆದ್ದ ತಂಡವನ್ನು ಏನೆಂದು ಅಭಿನಂದಿಸುತ್ತಾರೆ?

### ಕೀಲಕ ಪದಗಳು

| | | |
|---|---|---|
| 1. ವಿವಿಧ ಬಗೆಯ ಆಟಗಳು | 2. ಮನೆಯಲ್ಲಿ ಆಡಿಕೊಳ್ಳುವ ಆಟಗಳು | 3. ಹೊರಗಡೆ ಆಡಿಕೊಳ್ಳುವ ಆಟಗಳು |
| 4. ಆಟದ ಸಾಮಾಗ್ರಿಗಳು | 5. ನಿಯಮಗಳು | 6. ಗುಂಪುಗಳಲ್ಲಿ ಆಡುವ ಆಟಗಳು |
| 7. ತಪ್ಪು ಆಡಬಾರದು | 8. ಆಟಗಾರರ ಲಕ್ಷಣಗಳು | 9. ಇಬ್ಬರು ಸೇರಿ ಆಡುವ ಆಟಗಳು |
| 10. ಗೆಲವು – ಸೋಲುಗಳು | 11. ಕ್ರೀಡಾ ಸ್ಪರ್ಧೆಗಳು | 12. ಅಭಿನಂದಿಸುತ್ತಾರೆ |

SCERT TELANGANA

## ನಾವು ಕಲಿತುರುವುದು

* ಆಟಗಳು ಆಡುವುದರಿಂದ ಆರೋಗ್ಯವಾಗಿ ಇರುತ್ತೇವೆ. ಸಂತೋಷ ಉಂಟಾಗುತ್ತದೆ. ಸ್ನೇಹ ಬೆಳೆಯುತ್ತದೆ.
* ಆಟಗಳು ಎಷ್ಟೋ ವಿಧಗಳು – ಒಬ್ಬರೇ ಆಡುವವು, ಗುಂಪಾಗಿ ಆಡುವವು; ಮನೆಯಲ್ಲೇ ಆಡುವವು, ಹೊರಗಡೆ ಆಡುವವು
* ಅಂದಿಗೂ, ಇಂದಿಗೂ ಆಟಗಳಲ್ಲಿ ಎಷ್ಟೋ ಬದಲಾವಣೆಗಳು ಬಂದಿವೆ, ಇಂದು ಅನೇಕ ಹೊಸ ಆಟಗಳು ಬಂದಿವೆ.
* ಕೆಲವು ಆಟಗಳು ಆಡಲು ಆಟ ಸಾಮಾಗ್ರಿಗಳು ಅವಶ್ಯಕ. ಕೆಲವಕ್ಕೆ ಅವಶ್ಯಕವಿಲ್ಲ.
* ಆಟಗಳಲ್ಲಿ ಗೆಲವು – ಸೋಲುಗಳನ್ನು ಸಮಾನವಾಗಿ ತೆಗೆದುಕೊಳ್ಳಬೇಕು.
* ಆಟಗಳನ್ನು ನಿಯಮಗಳ ಪ್ರಕಾರ ಆಡಬೇಕು. ಹಾಗೆಯೆ ವಯುಕ್ತಿಕ ಶರೀರ ಭದ್ರತೆ ನಿಯಮಗಳನ್ನು ಕೂಡಾ ಪಾಲಿಸಬೇಕು.

## ಇವು ಮಾಡಿರಿ





### ವಿಷಯಾವಗಾಹನೆ

1. ಆಟಗಳು ಏಕೆ ಆಡಬೇಕು?
2. ಚೆಂಡಿನಿಂದ ಆಡುವ ಕೆಲವು ಆಟಗಳ ಹೆಸರುಗಳನ್ನು ಬರೆಯಿರಿ.
3. ಖೋಖೋ ಆಟಕ್ಕೆ, ಕ್ರಿಕೆಟ್ ಆಟಕ್ಕೆ ನಡುವೆ ಇರುವ ವ್ಯತ್ಯಾಸಗಳನ್ನು ಹೇಳಿರಿ. ಬರೆಯಿರಿ. .
4. ನೀವು ಮನೆಯಲ್ಲಿ ಆಡುವ ಆಟಗಳು ಯಾವುವು? ಇವನ್ನು ಯಾವಾಗ ಆಡುತ್ತಾರೆ?
5. ನೀವು ಆಟದ ಮೈದನದಲ್ಲಿ ಆಡಿಕೊಳ್ಳುವ ಆಟಗಳು ಯಾವುವು? ಇವನ್ನು ಯಾವ ಸಮಯದಲ್ಲಿ ಆಡುತ್ತಾರೆ.
6. ಕ್ರಿಕೆಟ್, ಖೋಖೋ ದಂತಹ ಆಟಗಳನ್ನು ಹೊರಗಡೆ ಆಡುತ್ತೇವೆ. ಏಕೆ?
7. ವ್ಯಕ್ತಿಗತ ಶರೀರ ಭದ್ರತಾ ನಿಯಮಗಳೆಂದು ಯಾವವನ್ನು ಕರೆಯುತ್ತೇವೆ ?



### ಸಮಾಚಾರ ಕೌಶಲ್ಯಗಳು – ಪ್ರಾಜೆಕ್ಟ್ ಕೆಲಸ

1. ನಿಮ್ಮ ತರಗತಿಯಲ್ಲಿನ ಮಿತ್ರರಿಗೆ ಯಾವ ಯಾವ ಆಟಗಳು ಇಷ್ಟವೋ ಕೇಳಿರಿ ಅವುಗಳ ವಿವರಗಳನ್ನು ಪಟ್ಟಿಯಲ್ಲಿ ಬರೆಯಿರಿ.

| | ಹೆಸರು | ಇಷ್ಟವಾದ ಆಟಗಳು |
|---|---|---|
| 1. | | |
| 2. | | |
| 3. | | |
| 4. | | |

ಹೆಚ್ಚು ಮಂದಿ ಇಷ್ಟ ಪಡುವ ಆಟಗಳು ಯಾವು?

2. ಬೇರೆಬೇರೆ ರೀತಿಯ ಆಟಗಳಿಗೆ ಸಂಬಂಧಿಸಿದ ಚಿತ್ರಗಳನ್ನು ದಿನಪತ್ರಿಕೆಗಳಿಂದ ಸಂಗ್ರಹಿಸಿರಿ. ಸ್ಕ್ರಾಪ್ ಪುಸ್ತಕದಲ್ಲಿ ಅಂಟಿಸಿರಿ. ಅವುಗಳ ಹೆಸರುಗಳು ಬರೆಯಿರಿ. ಅವು ಆಡಲು ಯಾವ ಯಾವ ಆಟದ ಸಾಮಾಗ್ರಿಗಳು ಬೇಕೋ ಹೆಸರುಗಳು ಬರೆಯಿರಿ.

SCERT TELANGANA








## ಚಿತ್ರಬಿಡಿಸುವುದು, ನಮೂನೆಗಳ ತಯಾರಿ, ಪಟ ಕೌಶಲ್ಯ.

1. ಕೆಳಗಿನ ಚಿತ್ರಗಳನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬಿಡಿಸಿ. ಬಣ್ಣಗಳನ್ನು ಹಾಕಿರಿ.







## ಪ್ರಶಂಸೆ

1. ನಿಮ್ಮ ಶಾಲೆಯಲ್ಲಿ ಚೆನ್ನಾಗಿ ಆಟಗಳು ಆಡುವವರು ಯಾರು? ಅವರು ಎಂದಾದರೂ ಗೆದ್ದಾಗ ನೀವು ಏನೆಂದು ಅಭಿನಂದಿಸುತ್ತೀರಿ?

2 ಆಟಗಳಲ್ಲಿ ಗೆದ್ದವರನ್ನು ನೋಡಿ ನಾವು ಏನನ್ನು ಕಲಿತುಕೊಳ್ಳಬೇಕು? ಹಾಗೆಯೇ ಸೋತವರನ್ನು ನೋಡಿ ಸಹ ನಾವು ಏನನ್ನು ಕಲಿತುಕೊಳ್ಳಬಹುದು ?



## ಪ್ರಶ್ನಿಸುವುದು, ಪರಿಕಲ್ಪಿಸುವುದು.

1. ಮಕ್ಕಳು ಆಟದ ಮೈದಾನದಲ್ಲಿ ಕಬಡ್ಡಿ ಆಡುತ್ತಿದ್ದಾರೆ. ಅಷ್ಟರಲ್ಲಿ ಅವರ ನಡುವೆ ಜಗಳ ಪ್ರಾರಂಭವಾಯಿತು. ಅಷ್ಟರಲ್ಲಿ ಅಲ್ಲಿಗೆ ಶಿಕ್ಷಕರು ಬಂದರು. ಆತನು ಅವರನ್ನು ಏನು ಕೇಳಿರಬಹುದು ? ಮಕ್ಕಳು ಏನು ಉತ್ತರ ನೀಡಿರುತ್ತಾರೆ. ನೀವಾಗಿದ್ದರೆ ಯಾವ ಪ್ರಶ್ನೆಗಳು ಕೇಳುತ್ತಿದ್ದಿರಿ ?



### ನಾನು ಇವುಗಳನ್ನು ಮಾಡಬಲ್ಲೆನಾ ?




| | | |
|---|---|---|
| 1. | ವಿವಿಧ ರೀತಿಯ ಆಟಗಳನ್ನು ಕುರಿತು ವಿವರಿಸಬಲ್ಲೆನು. | ಹೌದು / ಇಲ್ಲ |
| 2. | ಮನೆಯಲ್ಲಿ ಆಡುವ ಆಟಗಳು, ಹೊರಗಡೆ ಆಡಿಕೊಳ್ಳುವ ಆಟಗಳುಯಾವುವೋ ಹೇಳಬಲ್ಲೆನು | ಹೌದು / ಇಲ್ಲ |
| 3 | ಯಾರಿಗೆ ಯಾವ ಯಾವ ಆಟಗಳು ಇಷ್ಟವೋ ವಿವರಗಳನ್ನು ಶೇಖರಿಸಬಲ್ಲೆನು. ಪಟ್ಟಿಯಲ್ಲಿ ಬರೆಯಬಲ್ಲೆನು. | ಹೌದು / ಇಲ್ಲ |
| 4 | ಅಟದ ವಸ್ತುಗಳ ಚಿತ್ರಗಳನ್ನು ಎಳೆಯಬಲ್ಲೆನು. | ಹೌದು / ಇಲ್ಲ |
| 5. | ಆಟಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಬಲ್ಲೆನು | ಹೌದು / ಇಲ್ಲ |

SCERT TELANGANA

# 4. ಪ್ರಾಣಿಗಳು ಅವುಗಳ ನಿವಾಸಗಳು



ಆ ದಿನ ಭಾನುವಾರ. ಮಹೇಶ್, ಕಮಲ, ಲತ, ಸಲೀಮ್, ಡೇವಿಡ್ ತೋಟಕ್ಕೆ ಹೋದರು. ತೋಟದ ಪಕ್ಕದಲ್ಲಿಯೇ ಮಹೇಶ್ ರವರ ಹೊಲಗಳಿವೆ. ತೋಟದಲ್ಲಿ, ಹೊಲಗಳಲ್ಲಿ ಅವರಿಗೆ ವಿವಿಧ ರೀತಿಯ ಪ್ರಾಣಿಗಳು, ಪಕ್ಷಿಗಳು ಕಾಣಿಸುತ್ತವೆ. ಕೆಳಗಿನ ಚಿತ್ರಗಳನ್ನು ನೋಡಿರಿ. ಅವರು ಏನೇನು ನೋಡಿದರೋ ಹೇಳಿರಿ.



- ಮೇಲಿನ ಚಿತ್ರದಲ್ಲಿ ಯಾವ ಯಾವ ಪ್ರಾಣಿಗಳು ಪಕ್ಷಿಗಳು ಇವೆ?
- ನಿಮ್ಮ ಸುತ್ತ ಮುತ್ತಲಲ್ಲಿ ನೀವು ಯಾವ ಯಾವ ಪ್ರಾಣಿಗಳನ್ನು, ಪಕ್ಷಿಗಳನ್ನು ನೋಡಿದ್ದೀರಿ?


ತೋಟದಲ್ಲಿ ಎಲ್ಲರೂ ಮಧ್ಯಾಹ್ನದ ವರೆಗೆ ಆಡಿಕೊಂಡರು. ಮಹೇಶ್ ಕೈಗಳನ್ನು ತೊಳೆದುಕೊಳ್ಳಲಿಕ್ಕಾಗಿ ಕೆರೆಯ ಹತ್ತಿರಕ್ಕೆ ಹೋದನು. ಕೆರೆಯಲ್ಲಿ, ಕೆರೆಯ ದಡದ ಮೇಲೆ ಸಹಾ ವಿವಿಧ ರೀತಿಯ ಪ್ರಾಣಿಗಳು ಕಾಣಿಸಿದವು. ತಕ್ಷಣ ಸ್ನೇಹಿತರೆಲ್ಲರನ್ನು ಕೆರೆಯ ಹತ್ತಿರಕ್ಕೆ ಬರಲು ತಿಳಿಸಿದರು. ಅವರು ನೀರಿನಲ್ಲಿ ಯಾವ ಯಾವ ಪ್ರಾಣಿಗಳು ನೋಡಿರುತ್ತಾರೋ ಹೇಳಿರಿ.







ಕೆಳಗಿನ ಚಿತ್ರವನ್ನು ನೋಡಿರಿ. ಏನೇನು ಕಾಣಿಸುತ್ತಿವೆ? ಅವು ಎಲ್ಲಿ ಇರುತ್ತವೆ ಹೇಳಿರಿ.



ಮೀನುಗಳು ನೀರಿನಲ್ಲೇ ಇರುತ್ತವೆ. ಕೆಲವು ರೀತಿಯ ಹಾವುಗಳು ನೀರಿನಲ್ಲೇ ಇರುತ್ತವೆ. ,ಮತ್ತೆ ಕೆಲವು ನೆಲದ ಮೇಲೆ ಇರುತ್ತವೆ. ಹಾಗೆಯೇ ಕಪ್ಪೆಗಳು ಆಮೆಗಳು, ಮೊಸಳೆಗಳು, ಏಡಿಗಳಂತಹವು ನೀರಿನಲ್ಲಿಯೂ, ನೆಲದ ಮೇಲೂ ಸಹ ಇರುತ್ತವೆ.

ಪ್ರಾಣಿಗಳು ಬೇರೆ ಬೇರೆ ಸ್ಥಳದಲ್ಲಿ ವಾಸಿಸುತ್ತವೆ. ಕೆಲವು ಮರದ ಮೇಲೆ, ಕೆಲವು ನೀರಿನಲ್ಲಿ , ಕೆಲವು ನೆಲದ ಮೇಲೆ, ಮತ್ತೆ ಕೆಲವು ನೆಲದ ಒಳಗೆ ಬಿಲಗಳನ್ನು ಮಾಡಿಕೊಂಡು ವಾಸಿಸುತ್ತವೆ.

**ಕೆಳಗಿನ ಚಿತ್ರಗಳನ್ನು ನೋಡಿರಿ**










ಯಾವ ಯಾವ ಜಂತುಗಳು ಎಲ್ಲೆಲ್ಲಿ ವಾಸಿಸುತ್ತವೆಯೋ ಹೇಳಿರಿ. ಬರೆಯಿರಿ.

| ಜಂತುಗಳ ಹೆಸರು | ನಿವಾಸ |
|---|---|
| ...................................... | ...................................... |
| ...................................... | ...................................... |
| ...................................... | ...................................... |






ಕೆಲವು ಪ್ರಾಣಿಗಳು ನಮ್ಮ ಮನೆಯಲ್ಲಿ ಕೂಡಾ ಕಾಣಿಸುತ್ತವೆ. ಕೆಳಗಿನ ಚಿತ್ರವನ್ನು ನೋಡಿರಿ. ಮನೆಯಲ್ಲಿನ ಪ್ರಾಣಿಗಳ ಚಿತ್ರಗಳಿಗೆ ಬಣ್ಣಗಳನ್ನು ಹಾಕಿರಿ. ಮನೆಯಲ್ಲಿ ಸಾಕಿಕೊಳ್ಳುವ ಪ್ರಾಣಿಗಳನ್ನು "ಸಾಕು ಪ್ರಾಣಿಗಳು" ಎನ್ನುವರು



SCERT TELANGANA







## ಪಕ್ಷಿಗಳು ಎಲ್ಲಿ ವಾಸಿಸುತ್ತವೆ?




ರಂಗನವರ ಮನೆಗೆ ವಾಸು ಬಂದನು. ಮನೆ ಮೇಲ್ಛಾವಣಿಗೆ ನೇತುಹಾಕಿದ ಬಟ್ಟಲಿನಲ್ಲಿ ನೀರನ್ನು ಗುಬ್ಬಿಗಳು ಕುಡಿಯುತ್ತಾ ಸ್ನಾನ ಮಾಡುವುದನ್ನು ನೋಡಿದನು. ರಂಗ ಹಿಡಿಯಿಂದ ಅಕ್ಕಿ ನುಚ್ಚನ್ನು ಚೆಲ್ಲಿದ ತಕ್ಷಣ ಗುಬ್ಬಿಗಳೆಲ್ಲವೂ ಬಂದು ನುಚ್ಚನ್ನು ಗಬಗಬ ತಿನ್ನುವುದನ್ನು ನೋಡಿದನು. ವಾಸುವಿಗೆ ಬಹಳ ಆನಂದವಾಯಿತು. ಗುಬ್ಬಿಗಳೆಲ್ಲಾ ಎಷ್ಟು ಮುದ್ದಾಗಿ ಇವೆಯೋ! ಎಂದನು ವಾಸು. ರಂಗ, ವಾಸುವನ್ನು ಹಿತ್ತಲಿಗೆ ಕರೆದೊಯ್ದನು.

ಹಿತ್ತಲಲ್ಲಿ ಮರದ ಕೊಂಬೆಯ ಮೇಲೆ ಕಾಗೆ ಗೂಡು ಕಾಣಿಸಿತು. ಅದರಲ್ಲಿ ಕಾಗೆ ಮರಿಗಳು ಕಾಣಿಸಿದವು. ರಂಗನಿಗೆ ಅವುಗಳನ್ನು ನೋಡಿದ ತಕ್ಷಣ ಸಂತೋಷವಾಯಿತು.

- ಕಾಗೆಗಳು ಗೂಡನ್ನು ಏಕೆ ಕಟ್ಟಿಕೊಳ್ಳುತ್ತವೆ ?
- ಹೀಗೆ ಮರದ ಮೇಲೆ ಗೂಡು ಕಟ್ಟಿಕೊಳ್ಳುವ ಇತರ ಪಕ್ಷಿಗಳ ಹೆಸರುಗಳನ್ನು ಹೇಳಿರಿ ಬರೆಯಿರಿ.



ಪಕ್ಷಿಗಳು ಮರದ ಮೇಲೆ ಗೂಡು ಕಟ್ಟಿ ಕೊಳ್ಳುತ್ತವೆಯಲ್ಲವೇ! ಮತ್ತೆ ಕೇಳಗಿನ ಚಿತ್ರಗಳನ್ನು ನೋಡಿರಿ. ಅವು ಯಾವ ಪಕ್ಷಿಗಳ ಗೂಡೋ ತಿಳಿಸಿರಿ. ಹಾಗೆಯೇ ಅವು ಎಲ್ಲಿ ಇರುತ್ತವೆಯೋ ಹೇಳಿರಿ.







ಪಕ್ಷಿ ಹೆಸರು ...................... ಪಕ್ಷಿ ಹೆಸರು ......................... ಪಕ್ಷಿ ಹೆಸರು .........................

ನಿವಾಸ ........................ ನಿವಾಸ ........................ ನಿವಾಸ ..........................


ಇವಲ್ಲದೆ ಇನ್ನೂ ಕೆಲವು ಪಕ್ಷಿಗಳು ಎಲ್ಲಿ ವಾಸವಾಗುತ್ತವೆಯೋ ದೊಡ್ಡವರನ್ನು ಕೇಳಿ ತಿಳಿದುಕೊಳ್ಳಿ.

SCERT TELANGANA





## ವಲಸೆ ಪಕ್ಷಿಗಳು



ರಂಗ, ವಾಸು ಸಾಯಂಕಾಲ ಆಟವಾಡುತ್ತಾ ಆಕಾಶದಲ್ಲಿ ಹಾರುವ ಪಕ್ಷಿಗಳ ಗುಂಪನ್ನು ನೋಡಿದರು. ಅವೆಲ್ಲ ಒಂದೇ ಸಾಲಿನಲ್ಲಿ ಆಕಾಶದಲ್ಲಿ ಹಾರಾಡುತ್ತಿದ್ದರೆ ಬಹಳ ಆನಂದವಾಗಿ ಕಾಣಿಸುತ್ತವೆ. ಇಂತಹ ಆಗಾಗ ಕಾಣಿಸುತ್ತಿರುತ್ತವೆ ಅಲ್ಲವೇ! ಇವು ಎಲ್ಲಿ ಇರುತ್ತವೆ ಎಂದು ವಾಸು ಕೇಳಿದನು. ಇವು ಯಾವಗಲೂ ಕಾಣಿಸುವುದಿಲ್ಲ ಮಾರ್ಚ್ ತಿಂಗಳಲ್ಲಿ ಕಾಣಿಸುತ್ತವೆ ಎಂದು ರಂಗ ಹೇಳಿದನು.

ಕೆಲವು ಪಕ್ಷಿಗಳು ಮೊಟ್ಟೆ ಇಟ್ಟು ಮರಿಗಳನ್ನು ಮಾಡಿಕೊಳ್ಳಲು ಆಹಾರಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತವೆ. ಹಾಗೆಯೇ ಮತ್ತೆ ಕೆಲವು ಪಕ್ಷಿಗಳು ಬೇಸಿಗೆ ಕಾಲದಲ್ಲಿ, ಚಳಿಗಾಲದಲ್ಲಿ ಅಲ್ಲಿಯ ವಾತವರಣಕ್ಕೆ ಹೊಂದಿಕೊಳ್ಳದೆ ಇತರ ಪ್ರದೇಶಗಳಿಗೆ ವಲಸೆ ಹೋಗುತ್ತವೆ. ಇಂತಹ ಪಕ್ಷಿಗಳನ್ನು **"ವಲಸೆ ಪಕ್ಷಿಗಳು"** ಎನ್ನುವರು.

ವಲಸೆಪಕ್ಷಿಗಳು ಗುಂಪುಗಳಾಗಿ ಹೋಗುವುದನ್ನು ನೀವು ಎಂದಾದರೂ ನೋಡಿದ್ದೀರಾ? ಅವುಗಳನ್ನು ಕುರಿತು ಚರ್ಚಿಸಿರಿ.



## ಯಾವುವು ಹೇಗೆ ಹೋಗುತ್ತವೆ?

ಪ್ರಾಣಿಗಳು ಮತ್ತು ಪಕ್ಷಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವುದಕ್ಕೆ ನಡೆದುಕೊಂಡು ಹೋಗುತ್ತವೆ. ಕೆಲವು ತೆವಳುತ್ತಾ ಹೋಗುತ್ತವೆ. ಕೆಲವು ಜಿಗಿಯುತ್ತಾ ಹೋಗುತ್ತವೆ. ಮತ್ತೆ ಕೆಲವು ಎಗರುತ್ತವೆ. ಇನ್ನೂ ಕೆಲವು ಈಜುತ್ತವೆ. ಇದಕ್ಕಾಗಿ ಅವು ತಮ್ಮ ಕಾಲುಗಳು, ರೆಕ್ಕೆಗಳು, ಒಂದೊಂದು ಬಾರಿ ಬಾಲವನ್ನು ಸಹ ಉಪಯೋಗಿಸುತ್ತವೆ. ಪ್ರಾಣಿಗಳಲ್ಲಿ ಯಾವ್ಯಾವು ಹಾರುತ್ತಿರುತ್ತವೆ? ಯಾವುವು ತೆವಳುತ್ತವೆ.? ಯಾವುವು ಜಿ



SCERT TELANGANA









## ಮಾಡಿ ನೋಡೋಣ!


- ನಿಮಗೆ ಇಷ್ಟವಾದ/ನೋಡಿದ ಪ್ರಾಣಿ ಚಿತ್ರವನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬಿಡಿಸಿರಿ.
- ಈಗ ನೀವು ಪ್ರತಿ ಗುಂಪಿಗೆ ಮೂವರಂತೆ ಒಂದು ಗುಂಪಾಗಿ ಕುಳಿತುಕೊಳ್ಳಿ. ಒಂದೊಂದು ಗುಂಪಿನವರು ಒಂದು ಕಾಗದವನ್ನು ತೆಗೆದುಕೊಳ್ಳಿ. ಅದನ್ನು ಮೂರು ಭಾಗಗಳಾಗಿ ಮಡಚಿರಿ.




1 ಪ್ರತಿ ಗುಂಪಿನಲ್ಲಿ ಒಬ್ಬರು ಮೊದಲನೆ ಪದರದ ಮೇಲೆ ಇಷ್ಟವಾದ ಪ್ರಾಣಿಯ ತಲೆ, ಕುತ್ತಿಗೆಯ ಚಿತ್ರ ಬಿಡಿಸಬೇಕು ಬಿಡಿಸಿದ ಭಾಗವನ್ನು ಮಡಚಿ ಎರಡನೆಯವರಿಗೆ ಕೊಡಬೇಕು.



2 ಗುಂಪಿನಲ್ಲಿ ಎರಡಯವನು ಎರಡನೇ ಪದರದಲ್ಲಿ ಇಷ್ಟವಾದ ಪ್ರಾಣಿಯು ಮುಂಡದ ಚಿತ್ರವನ್ನು ಬಿಡಿಸಬೇಕು.ಬಿಡಿಸಿದ ಭಾಗವನ್ನು ಮಡಚಿ ಮೂರವನೆಯವರಿಗೆ ನಿಡಬೇಕು.



3 ಗುಂಪಿನಲ್ಲಿ ಮೂರನೆಯವನು ಮೂರನೆ ಪದರದಲ್ಲಿ ಇಷ್ಟವಾದ ಪ್ರಾಣಿಯ ಕಾಲುಗಳು ಬಿಡಿಸಬೇಕು.



4. ಈಗ ಕಾಗದದ ಪದರಗಳು ತೆರೆದು ನೋಡಿರಿ.ವಿಚಿತ್ರ ಪ್ರಾಣಿಯಂತೆ ಇದೆಯಲ್ಲವೇ!


ಹಾಗೆಯೇ ಉಳಿದ ಗುಂಪಿನಲ್ಲಿ ವಿದ್ಯಾರ್ಥಿಗಳು ಬಿಡಿಸಿದ ಪತ್ರಗಳನ್ನು ಸಹ ನೋಡಿರಿ.

SCERT TELANGANA





ಜಯ, ವಿಜಯ, ಲತಳು ಸಹ ಹೀಗೆಯೇ ಬಿಡಿಸಿದರು. ಅವರು ಬಿಡಿಸಿದ ಚಿತ್ರವನ್ನು ನೋಡಿರಿ. ಇದರಲ್ಲಿ ಯಾವ ಭಾಗ ಯಾವ ಪ್ರಾಣಿಯದೋ ಹೇಳಿರಿ.






**ಪ್ರಾಣಿಗಳ ಮೇಲೆ ದಯೆ ತೋರಿಸಬೇಕು.**

ಒಂದು ದಿನ ಕಿಟ್ಟು ಶಾಲೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ನಡುಗುತ್ತಾ ನೋವಿನಿಂದ ಬೊಗಳುತ್ತಿರುವ ನಾಯಿಮರಿ ಕಾಣಿಸಿತು. ಅದರ ಕಾಲಿಗೆ ಗಾಯವಾಗಿತ್ತು. ಕಿಟ್ಟು ಅದನ್ನು ಮನೆಗೆ ತೆಗೆದುಕೊಂಡು ಹೋಗಿ ತಮ್ಮ ತಂದೆಗೆ ತೋರಿಸಿದನು. ಅವರ ತಂದೆ ನಾಯಿಮರಿಯ ಗಾಯಕ್ಕೆ ಕಟ್ಟು ಕಟ್ಟಿದನು. ನಂತರ ಕಿಟ್ಟು ಪಾತ್ರೆಯಲ್ಲಿ ಹಾಲು ಹಾಕಿ ಅದಕ್ಕೆ ಕುಡಿಸಿದನು. ಹಾಲು ಕುಡಿದ ನಾಯಿಮರಿ ಸಂತೋಷದಿಂದ ಬಾಲ ಅಲುಗಾಡಿಸುತ್ತಾ ಕಿಟ್ಟು ಹತ್ತಿರಕ್ಕೆ ಹೋಯಿತು. ಕಿಟ್ಟು ಅದಕ್ಕೆ ಮುದ್ದಾದ 'ಪಿಂಕಿ' ಎಂದು ಹೆಸರು ಇಟ್ಟುಕೊಂಡನು. ಆ ದಿನದಿಂದ ಪಿಂಕಿ ಕಿಟ್ಟು ರವರ ಕುಟುಂಬದಲ್ಲಿ ಬೆರೆತುಹೋಯಿತು. ಕಿಟ್ಟು ಮಾಡಿದ ಕೆಲಸವನ್ನು ಶಾಲೆಯಲ್ಲಿ ಶಿಕ್ಷಕರೂ ಸಹಪಾಠಿಗಳು ಎಷ್ಟೋ ಮೆಚ್ಚಿಕೊಂಡರು.




SCERT TELANGANA





ಕಿಟ್ಟು ಏನು ಮಾಡಿದನೆಂದು ತಿಳಿದುಕೊಂಡಿರಲ್ಲವೇ! ಮತ್ತೆ ನೀವು ಹೀಗೆ ಎಂದಾದರೂ ಮಾಡಿದ್ದೀರಾ? ಏನು ಮಾಡಿದಿರಿ? ನಿಮ್ಮ ಮನೆಯಲ್ಲಾಗಲಿ,ಬೀದಿಯಲ್ಲಾಗಲೀ ಹಸಿವಿನಿಂದ ತಿರುಗುವ ಬೆಕ್ಕಿನ ಮರಿಗಳು, ನಾಯಿ ಮರಿಗಳು ಕಾಣಿಸಿದರೆ ನೀವೇನು ಮಾಡುತ್ತೀರಿ?

## ಪತಂಗಕ್ಕೆ ಬಣ್ಣ ಹಾಕಿರಿ.




ಪತಂಗ ಎಷ್ಟು ಸುಂದರವಾಗಿ ಇದೆಯಲ್ಲವೇ! ಗಿಡಗಳ ಮೇಲೆ ವಾಲುತ್ತಿದ್ದರೆ ನೋಡುವುದಕ್ಕೆ ಮನೋಹರವಾಗಿ ಇರುತ್ತದೆ. ಹಾಗೆಯೇ ಡೋಣಿಗಳನ್ನು ಸಹ ಗಾಳಿಯಲ್ಲಿ ಹಾರುತ್ತಾ ಇದ್ದರೆ ನಮ್ಮ ಪರಿಸರಗಳು ಎಷ್ಟೋ ರಮಣೀಯವಾಗಿ ಕಾಣಿಸುತ್ತವೆ. ಇಂತಹವುಗಳನ್ನು ನಾವು ರಕ್ಷಿಸಿಕೊಳ್ಳಬೇಕು. ಆದರೆ ಕೆಲವು ಮಂದಿ ತುಂಟ ಮಕ್ಕಳು ಮರಗಳನ್ನು ಹತ್ತಿ ಪಕ್ಷಿಗೂಡುಗಳನ್ನು ಬೀಳಿಸುವುದು, ಗೀಜಗನ ಗೂಡಿನಲ್ಲಿನ ಮೊಟ್ಟೆಗಳನ್ನು ಒಡೆದು ಹಾಕಿ. ಅವುಗಳ ಗೂಡಿನಿಂದ ಆಡಿಕೊಳ್ಳವುದು ಪತಂಗ, ಡೋಣಿಗಳಂತಹ ಕೀಟಗಳ ರೆಕ್ಕೆಗಳು ಮುರಿಯುವುದು. ಪತಂಗದ ಮೇಲೆ ಕಲ್ಲು ಎಸೆಯುವುದು ಇಂತಹವು ಮಾಡುತ್ತಾರೆ ಇದು ದೊಡ್ಡ ತಪ್ಪು.

ನಮ್ಮ ಜೊತೆಗೆ ನಮ್ಮ ಪರಿಸರದಲ್ಲಿ ಅನೇಕ ಪ್ರಾಣಿಗಳು ಜೀವಿಸುತ್ತಾ ಇರುತ್ತವೆ. ಅವೆಲ್ಲ ನಮ್ಮಂತೆಯೇ ಜೀವಿಗಳೇ, ಗಾಯವಾದರೆ ನಮ್ಮಂತಯೇ ನೋವು ಅನುಭವಿಸುತ್ತವೆ. ಅದಕ್ಕಾಗಿ ಅವುಗಳನ್ನು ಜೀವಿಸಲು ಬಿಡಬೇಕು.



## ಕೀಟಕಗಳು

ಕೆಳಗೆ ವಿವಿಧ ರೀತಿಯ ಕೀಟಗಳನ್ನು ನೋಡಿರಿ, ಇವುಗಳಲ್ಲಿ ನೀವು ಯಾವ್ಯಾವನ್ನು ಎಲ್ಲೆಲ್ಲಿ ನೋಡಿದ್ದೀರೋ ಹೇಳಿರಿ.



SCERT TELANGANA





## ಕ್ರಿಮಿ ಕೀಟಗಳು ಕಡಿದರೆ ಏನಾಗುತ್ತದೆ?

ರಾಜುವಿನ ಅಜ್ಜನಿಗೆ ಚಳಿಜ್ವರ ಬಂದಿದೆ. ವೈದ್ಯರ ಹತ್ತಿರಕ್ಕೆ ಕರೆದುಕೊಂಡು ಹೋದರು. ವೈದ್ಯರು ಪರೀಕ್ಷೆ ಮಾಡಿ, ಮಲೇರಿಯಾ ಜ್ವರ ಬಂದಿದೆ ಎಂದು ಹೇಳಿದರು. ಮಲೇರಿಯಾ ಜ್ವರ ಏಕೆಬಂದಿದೆ ಎಂದು ರಾಜು ವೈದ್ಯರನ್ನು ಕೇಳಿದನು. ಒಂದು ವಿಧದ ಸೊಳ್ಳೆ ಕಡಿಯುವುದರಿಂದ ಮಲೇರಿಯಾ ಬಂದಿದೆ ಎಂದು ವೈದ್ಯರು ಹೇಳಿದರು.

ಸೊಳ್ಳೆಗಳು ಕಡಿಯದಂತೆ ನಾವು ಯಾವ ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು?

ಸೊಳ್ಳೆಗಳು ಹೆಚ್ಚಾಗದಂತೆ ನಾವು ಯಾವ ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು.?

ಇವನ್ನು ನೋಡಿದ್ದೀರಾ? ಈವು ಏತಕ್ಕಾಗಿ ಬಳಸುತ್ತಾರೋ ಹೇಳಿರಿ.








ಸೊಳ್ಳೆಗಳು ನಿಂತ ನೀರಲ್ಲಿ ಬೆಳೆಯುತ್ತವೆ. ನಮ್ಮ ಪರಿಸರದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನೊಣಗಳು, ಸೊಳ್ಳೆಗಳು ವೃದ್ಧಿಯಾಗದಂತೆ ಇರಬೇಕಾದರೆ ನಮ್ಮ ಪರಿಸರದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಕಸವನ್ನು ಕಸದ ಬುಟ್ಟಿಯಲ್ಲಿಯೇ ಹಾಕಬೇಕು. ನಿಂತ ನೀರಲ್ಲಿ ಕಿರೋಸಿನ್ ಇಲ್ಲವೇ ಮಲಾಥಿಯಾನ್ ನಂತಹ ಕ್ರಿಮಿ ಸಂಹಾರಕಗಳು ಚೆಲ್ಲಿದರೆ ಸೊಳ್ಳೆಗಳು ಸಾಯುತ್ತವೆ. ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆಪರದೆಗಳನ್ನು ಬಳಸುತ್ತಾರೆ. ಕೆಲವರು ಸೊಳ್ಳೆ ಬತ್ತಿಗಳನ್ನು ಬಳಸುತ್ತಾರೆ. ಇವರ ಆರೋಗ್ಯಕ್ಕೆ ಹಾನಿಕರ ಆದ್ದರಿಂದ ಸೊಳ್ಳೆ ಪರದೆಗಳನ್ನು ಬಳಸುವುದೇ ಉತ್ತಮ.

ಹಾಗೆಯೇ ನೊಣಗಳಿಂದ ಸಹ ನಮಗೆ ಬಹಳ ಹಾನಿ ಉಂಟಾಗುತ್ತವೆ. ನೊಣಗಳು ತಿಪ್ಪೆಗಳ ಮೇಲೆ, ಅಪರಿಶುಭ್ರವಾದ ಪ್ರದೇಶಗಳಲ್ಲಿಯೂ ಇರುತ್ತವೆ. ಇಂತಹ ಸ್ಥಳದಲ್ಲಿ ರೋಗಗಳನ್ನು ಉಂಟುಮಾಡುವ ಕ್ರಿಮಿಗಳು ಸಹ ಇರುತ್ತವೆ. ನಾವು ತಿನ್ನುವ ಆಹಾರ ಪದಾರ್ಥಗಳ ಮೇಲೆ ಬಂದು ನೊಣಗಳು ಕುಳಿತುಕೊಳ್ಳುತ್ತವೆ. ಹೀಗೆ ನೊಣಗಳು ಕುಳಿತ ಕಲುಷಿತ ಆಹಾರ ಸೇವನೆಯಿಂದ ಟೈಫಾಯಿಡ್, ಕಲಾರಾದಂತಹ ರೋಗಗಳು ಬರುತ್ತವೆ. ಅದಕ್ಕಾಗಿ ಆಹಾರ ಪದಾರ್ಥಗಳ ಮೇಲೆ ನೊಣಗಳು ಕುಳಿತುಕೊಳ್ಳದಂತೆ ಮುಚ್ಚಳವನ್ನು ಇರಿಸಬೇಕು.

ಮುಚ್ಚಳ ಇಲ್ಲದಂತೆ, ಧೂಳು ಬೀಳುವಂತೆ ಇರುವ ಆಹಾರ ಪದಾರ್ಥಗಳನ್ನು ಮಿಠಾಯಿಗಳನ್ನು ನೀವು ಎಲ್ಲಿಯಾದರೂ ನೋಡಿದ್ದೀರಾ? ಅಂತಹವುಗಳನ್ನು ಏತಕ್ಕೆ ತಿನ್ನಬಾರದು ಹೇಳಿರಿ. ನೀರಿನ ಕುಣಿ ಇರದಂತೆ, ಅದರಲ್ಲಿ ಕಸ ಕಡ್ಡಿಗಳನ್ನು ಹಾಕದಂತೆ ನಮ್ಮ ಸುತ್ತಲಿನ ಪರಿಸರಗಳನ್ನು ಪರಿಶುಭ್ರವಾಗಿ ಇರಿಸಿಕೊಳ್ಳಬೇಕು. ಮನೆಯಲ್ಲಿ, ಹೊರಗಡೆ ಪರಿಶುಭ್ರತೆ ಪಾಲಿಸಿದರೆ ಸೊಳ್ಳೆಗಳಿರುವುದಿಲ್ಲ.

SCERT TELANGANA





## ಕಠಿಣ ಪದಗಳು

1. ಪ್ರಾಣಿಗಳ ನಿವಾಸಗಳು 2. ನೀರಿನಲ್ಲಿ ಇರುವ ಪ್ರಾಣಿಗಳು 3. ವಲಸೆ ಪಕ್ಷಿಗಳು
4. ನೆಲದ ಮೇಲೆ ನಡೆಯುವ ಜಂತುಗಳು 5. ಸಾಕು ಪ್ರಾಣಿಗಳು 6. ಕೀಟಗಳು
7. ಪ್ರಾಣಿಗಳ ಮೇಲೆ ದಯೆ 8. ಜೀವಿಗಳು 9. ಪರಿಸರಗಳ ಪರಿಶುಭ್ರತೆ.
10. ಮಸ್ಕಿಟೋ ಕ್ವಾಯಲ್ಸ್ 11. ಮೆಲಾಥಿಯಾನ್

## ನಾವು ಕಲಿತಿರುವೆವು

- ಪ್ರಾಣಿಗಳು ನೆಲದ ಮೇಲೆ, ನೀರಿನಲ್ಲಿ, ಮರದ ಮೇಲೆ ವಾಸಿಸುತ್ತವೆ.
- ಮನೆಯಲ್ಲಿ ಸಾಕುವ ಪ್ರಾಣಿಗಳನ್ನು "ಸಾಕು ಪ್ರಾಣಿಗಳು" ಎನ್ನುವರು.
- ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಾಣಿಗಳು ನಡೆಯುತ್ತಾ, ತೆವಳುತ್ತಾ, ಜಿಗಿಯುತ್ತಾ, ಹಾರುತ್ತಾ, ಈಜುತ್ತಾ ಹೋಗುತ್ತವೆ.
- ಪಕ್ಷಿಗಳು ಆಹಾರಕ್ಕಾಗಿ ಅನುಕೂಲವಾದ ಪರಿಸರಕ್ಕಾಗಿ ವಲಸೆ ಹೋಗುತ್ತವೆ. ಇಂತಹ ಪಕ್ಷಿಗಳನ್ನು "ವಲಸೆ ಪಕ್ಷಿಗಳು" ಎನ್ನುವರು,
- ಪ್ರಾಣಿಗಳ ಮೇಲೆ ದಯೆ ತೋರಿಸಬೇಕು. ಅವುಗಳಿಗೆ ಬೇಕಾದ ಆಹಾರ, ನೀರು ಕೊಡಬೇಕು ಅವುಗಳನ್ನು ಸಂರಕ್ಷಿಸಬೇಕು.
- ನಿಂತ ನೀರಿನಲ್ಲಿ ಸೊಳ್ಳೆಗಳು ಬೆಳೆಯುತ್ತವೆ.
- ಅಪರಿಶುಭ್ರವಾದ ಪರಿಸರದಲ್ಲಿ ನೊಣಗಳು, ಸೊಳ್ಳೆಗಳು ಇರುತ್ತವೆ. ಆದ್ದರಿಂದ ನಮ್ಮ ಸುತ್ತಲಿನ ಪರಿಸರವನ್ನು ಶುಭ್ರವಾಗಿಟ್ಟುಕೊಳ್ಳಬೇಕು.

SCERT TELANGANA

## ಇವನ್ನು ಮಾಡಿರಿ



### ವಿಷಯಾವಗಾಹನೆ

1 ಸಾಕು ಪ್ರಾಣಿಗಳಿಗೆ ನಾಲ್ಕು ಉದಾಹರಣೆಗಳನ್ನು ತಿಳಿಸಿರಿ

2 ಸೊಳ್ಳೆಗಳು ಇಲ್ಲದಂತೆ ಮಾಡಬೇಕಾದರೆ ಏನು ಮಾಡಬೇಕು?

3 ಪಕ್ಷಿಗಳು ಏಕೆ ವಲಸೆ ಹೋಗುತ್ತವೆ?

4 ಪಕ್ಷಿಗಳಿಗೆ, ಪ್ರಾಣಿಗಳಿಗೆ ಇರುವ ಯಾವುದಾದರೂ ಮೂರು ವ್ಯತ್ಯಾಸಗಳನ್ನು ಹೇಳಿರಿ. ಬರೆಯಿರಿ.

5 ಕೆಳಗಿನವುಗಳಿಗೆ ಮೂರು ಹೆಸರುಗಳನ್ನು ಹೇಳಿರಿ. ಬರೆಯಿರಿ.

ಎ) ಹಾರುವವು 1................ 2. ................ 3. ..................

ಬಿ) ತೆವಳುವವು 1................ 2. ................ 3. ..................

ಸಿ) ನಡೆಯುವವು 1................ 2. ................ 3. ..................



5. ಯಾರು ? ನಾನು ಯಾರು ?

ಅ) ನಾನು ಉದ್ದವಾಗಿ ಇರುತ್ತೇನೆ.
ಕಾಲುಗಳಿರುವುದಿಲ್ಲ, ಕಿವಿಗಳಿರುವುದಿಲ್ಲ
ತೆವಳುತ್ತಾ ಹೋಗುತ್ತೇನೆ. ಹುತ್ತದಲ್ಲಿರುತ್ತೇನೆ.
ಯಾರು ? ನಾನು ಯಾರು ?

ಆ) ನೀರಿನಲ್ಲಿರುತ್ತೇನೆ
ನಾನಸಲೇ ನಿದ್ರೆ ಹೋಗುವುದಿಲ್ಲ
ಕಿವಿರುಗಳಿಂದ ಶ್ವಾಸವಾಡುತ್ತೇನೆ.
ಯಾರು ? ನಾನು ಯಾರು ?


ಇ) ನನಗೆ ನಾಲ್ಕು ಕಾಲುಗಳಿರುತ್ತವೆ.
ಮೇ, ಮೇ, ಎನ್ನುವೇನು.
ಎಲೆಗಳನ್ನು ತಿನ್ನುತ್ತೇನೆ
ಯಾರು ? ನಾನು ಯಾರು ?


ಈ) ನನಗೆ ರೆಕ್ಕೆಗಳಿವೆ
ಆಕಾಶದಲ್ಲಿ ಬಹಳ ಎತ್ತರದಲ್ಲಿ ಹಾರುತ್ತೇನೆ.
ಎತ್ತರದಿಂದ ಸಹ ಕೆಳಗಿರುವ ಸಣ್ಣವಸ್ತು
ನೋಡಬಲ್ಲೆನು. ನಾನು ಯಾರು ?

**ಚಿತ್ರಗಳನ್ನು ಬಿಡಿಸಿರಿ. ಬಣ್ಣಗಳು ಹಾಕಿರಿ ;**



1. ಕೆಳಗಿನ ಚಿತ್ರಗಳನ್ನು ಬಿಡಿಸಿ ಬಣ್ಣಗಳನ್ನು ಹಾಕಿರಿ.






**ಕಥೆ ಓದಿರಿ:**

ನಿಮ್ಮ ಪಾಠಶಾಲೆಯ ಗ್ರಂಥಾಲಯಕ್ಕೆ ಹೋಗಿ ಭಿಷ್ಮ ಸಹಾನಿ ಬರೆದ “ಗಿಜಗನ ಗೂಡು” ಕಥೆ ಓದಿರಿ.

SCERT TELANGANA







## ಸಮಾಚಾರ ಕೌಶಲ್ಯ–ಪ್ರಾಜೆಕ್ಟ್ ಕೆಲಸ

1) ಪ್ರಾಣಿಗಳ ಚಿತ್ರಗಳನ್ನು ಶೇಖರಿಸಿ, ಅಲ್ಬಂ ತಯಾರು ಮಾಡಿರಿ. ಪ್ರತಿಯೊಂದು ಪ್ರಾಣಿಗಳನ್ನು ಪರಿಶೀಲಿಸಿ ಎರಡು ಮೂರು ವಾಕ್ಯಗಳನ್ನು ಬರೆಯಿರಿ.

2) ನೀವು ನಿಮ್ಮ ಮಿತ್ರನ ಮನೆಗೆ ಹೋಗಿ ಅವರು ಯಾವ ಯಾವ ಪ್ರಾಣಿಗಳನ್ನು, ಪಕ್ಷಿಗಳನ್ನು ಸಾಕುತ್ತಿರುವರೋ ವಿವರಗಳು ಶೇಖರಿಸಿ, ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಕ್ರ.ಸಂ. | ಮಿತ್ರನ ಹೆಸರು | ಸಾಕು ಪ್ರಾಣಿಗಳು /ಪಕ್ಷಿಗಳ ಹೆಸರುಗಳು |
|---|---|---|
| | | |
| | | |
| | | |
| | | |

ಹೆಚ್ಚು ಜನ ಸಾಕುವ ಪ್ರಾಣಿಗಳು ಯಾವುವು ?



## ಪ್ರಶಂಸೆ

1) ಮರದ ಮೇಲಿನ ಪಕ್ಷಿಗೂಡಿನಿಂದ ಮರಿ ಪಕ್ಷಿ ಕೆಳಗೆ ಬಿದ್ದಿದೆ. ಅದನ್ನು ನೋಡಿ ನೀವು ಏನು ಮಾಡುತ್ತೀರೋ ಹೇಳಿರಿ, ಬರೆಯಿರಿ.

2) ಪ್ರಾಣಿಗಳು ಸಹ ನಮ್ಮಂತೆಯೇ ಜೀವಿಗಳು ಪ್ರಾಣಿಗಳಿಗೆ ನೋವಾಗದಂತೆ ಇರಬೇಕಾದರೆ ನಾವು ಯಾವ ಯಾವ ಕೆಲಸಗಳನ್ನು ಮಾಡಬಾರದೋ ಮೂರನ್ನು ಹೇಳಿರಿ ಕ್ರಮವಾಗಿ ಬರೆಯಿರಿ.



## ಪ್ರಶ್ನಿಸುವುದು

1) ರೀತು, ಸೀತ, ಇಬ್ಬರು ಮರದ ಮೇಲೆ ಇರುವ ಪಕ್ಷಿಗಳ ಗೂಡನ್ನು ಆಸಕ್ತಿಕರವಾಗಿ ನೋಡುತ್ತಿದ್ದಾರೆ. ಅವುಗಳನ್ನು ಕುರಿತು ತಿಳಿದು ಕೊಳ್ಳಬೇಕೆಂದು ಕೊಂಡರು. ಅಲ್ಲೇ ಇರುವ ಪೆಂಚಲಯ್ಯನನ್ನು ಪಕ್ಷಿಗಳ ಗೂಡುಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಿದರು. ಅವರು ಕೇಳಿದ ಪ್ರಶ್ನೆಗಳು ಯಾವಾಗಿರಬಹುದು ? ಅವುಗಳನ್ನು ಬರೆಯಿರಿ.



## ನಾನು ಇವನ್ನು ಮಾಡಬಲ್ಲೆನಾ ?



| | | |
|---|---|---|
| 1) | ವಿವಿಧ ಪ್ರಾಣಿಗಳು, ಪಕ್ಷಿಗಳು ಎಲ್ಲೆಲ್ಲಿ ವಾಸಿಸುತ್ತವೋ ಹೇಳಬಲ್ಲೆನು. | ಹೌದು / ಅಲ್ಲ |
| 2) | ಸಾಕು ಪ್ರಾಣಿಗಳ ವಿವಿರಗಳನ್ನು ಶೇಖರಿಸಿ ಪಟ್ಟಿ ತಯಾರು ಮಾಡಬಲ್ಲೆನು. | ಹೌದು / ಅಲ್ಲ |
| 3) | ಪಕ್ಷಿ/ ಪ್ರಾಣಿಗಳ ಚಿತ್ರಗಳನ್ನು ಬಿಡಿಸಿ ಬಣ್ಣ ಹಾಕಬಲ್ಲೆನು. | ಹೌದು / ಅಲ್ಲ |
| 4) | ಪಕ್ಷಿಗಳು, ಪ್ರಾಣಿಗಳೆಂದರೆ ನನ್ನಗೆ ಇಷ್ಟ. ಅವುಗಳ ಮೇಲೆ ದಯೆ ತೋರಿಸುತ್ತೇನೆ. | ಹೌದು / ಅಲ್ಲ |
| 5) | ಪಕ್ಷಿ ಗೂಡುಗಳ ಕುರಿತು ಪ್ರಶ್ನೆಗಳನ್ನು ಕೇಳಬಲ್ಲೆನು | ಹೌದು / ಅಲ್ಲ |

SCERT TELANGANA



# 5.ನಮ್ಮ ಸುತ್ತಲೂ ಇರುವ ಗಿಡಗಳು



ಸಲೀಮಾಳಿಗೆ ಹೂವಿನ ಗಿಡಗಳೆಂದರೆ ಬಹಳ ಇಷ್ಟ. ಮನೆಯಲ್ಲಿ ವಿವಿಧ ತರಹದ ಹೂವಿನ ಗಿಡಗಳನ್ನು ಬೆಳೆಸಿಕೊಳ್ಳುತ್ತಿದ್ದಾಳೆ. ಪ್ರತಿದಿನ ಅವುಗಳಿಗೆ ನೀರು ಹಾಕುತ್ತಾಳೆ. ಯಾರೂ ಸಹ ಇವುಗಳ ಎಲೆಗಳು, ಕೊಂಬೆಗಳನ್ನು ಮುರಿಯದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾಳೆ.

ಸಲೀಮಾ ಪಾಠಶಾಲೆಯಲ್ಲಿಯೂ ಸಹ ಕೆಲವು ಗಿಡಗಳನ್ನು ದತ್ತು ತೆಗೆದುಕೊಂಡಿದ್ದಾಳೆ. ಅವುಗಳನ್ನು ಸಹ ಮನೆಯಲ್ಲಿ ಬೆಳಸಿಕೊಳ್ಳುತ್ತಿರುವ ಗಿಡಗಳ ಹಾಗೆ ಜಾಗ್ರತೆಯಿಂದ ನೋಡಿಕೊಳ್ಳುತ್ತಾಳೆ. ರಜೆಯಲ್ಲಿಯೂ ಸಹ ಆಗಾಗ ಹೋಗಿ ನೀರು ಹಾಕುತ್ತಾಳೆ. ಒಂದು ದಿನ ಅಖಿಲ ಬತುಕಮ್ಮ ಕಲಿಯಲು ಹೂವಿಗಾಗಿ ಸಲೀಮಾಳ ಮನೆಗೆ ಬಂದಳು.

ಇಬ್ಬರೂ ಸೇರಿ ವಿವಿಧ ರೀತಿಯ ಹೂವಿನ ಗಿಡಗಳನ್ನು ನೋಡಿದರು. ಹೂವು ಕಿತ್ತುಕೊಂಡರು.




TELANGANA









ಅಖಿಲ, ಸಲೀಮಾ ಯಾವ ಯಾವ ಹೂವಿನ ಗಿಡಗಳನ್ನು ನೋಡಿರುತ್ತಾರೆ?
ನಿಮಗೆ ತಿಳಿದ ಇನ್ನಷ್ಟು ಕೆಲವು ಹೂವಿನ ಗಿಡಗಳ ಹೆಸರುಗಳು ಬರೆಯಿರಿ.
ಹೂವಿನಿಂದ ಅಖಿಲ, ಸಲೀಮಾ ಏನು ಮಾಡಿರಬಹುದು? ಹೂವುಗಳನ್ನು ಇನ್ನೂ ಯಾವುದಕ್ಕೆ, ಯಾವ ಸಂದರ್ಭದಲ್ಲಿ ಉಪಯೋಗಿಸುತ್ತಾರೆ?



ಸಲೀಮಾ ತಮ್ಮ ಮನೆಯಲ್ಲಿ ಹೂವಿನ ಗಿಡಗಳೇ ಅಲ್ಲದೆ ಇನ್ನೂ ವಿವಿಧ ವಿಧಗಳ ತರಕಾರಿಯ ಗಿಡಗಳು, ಹಣ್ಣಿನ ಗಿಡಗಳು ಸಹ ಬೆಳೆಸುತ್ತಿದ್ದಾರೆ. ಅವುಗಳನ್ನು ನೋಡಿರಿ.














ನಿಮ್ಮ ಮನೆಯಲ್ಲಿ, ನಿಮ್ಮ ಮಿತ್ರರ ಮನೆಯಲ್ಲಿ ಬೆಳೆಸಿಕೊಳ್ಳುವ ಗಿಡಗಳ ವಿವರಗಳನ್ನು ತಿಳಿದುಕೊಂಡು ಬರೆಯಿರಿ.

| ಮಿತ್ರನ ಹೆಸರು | ಮನೆಯಲ್ಲಿ ಬೆಳೆಸಿಕೊಳ್ಳುವ ಗಿಡಗಳ ಹೆಸರುಗಳು |
|---|---|
| 1. | |
| 2. | |
| 3. | |
| 4. | |
| 5. | |
| 6. | |

ಹೆಚ್ಚು ಜನರು ಮನೆಗಳಲ್ಲಿ ಬೆಳೆಸಿಕೊಳ್ಳುವ ಗಿಡಗಳು ಯಾವುವು?

ಕೆಲವರ ಮನೆಗಳಲ್ಲಿ ಮಾತ್ರವೇ ಬೆಳೆಸಿಕೊಳ್ಳುವ ಗಿಡಗಳು ಯಾವುವು?

ಸಾಧಾರಣವಾಗಿ ಮನೆಯ ಮುಂದೆ ಖಾಲಿ ಸ್ಥಳದಲ್ಲಿ ವಿವಿಧ ಗಿಡಗಳನ್ನು ಬೆಳೆಸುತ್ತಾರೆ. ಕೆಲವರು ಮನೆಯ ಮುಂದೆ ಖಾಲಿಸ್ಥಳ ಇರುವುದಿಲ್ಲ. ಇಂತಹವರು ಯಾವ ಯಾವ ಗಿಡಗಳನ್ನು, ಹೇಗೆ ಬೆಳೆಸಿಕೊಳ್ಳುತ್ತಾರೆ?


ಆಖಿಲ, ಸಲೀಮಾ ಆಡಿಕೊಳ್ಳೋಣ ಎಂದು ಹೊರಗಡೆ ಹೋದರು. ಅಲ್ಲಿ ಮಕ್ಕಳೆಲ್ಲರೂ ಆಲದ ಮರದ ಕೆಳಗೆ ಆಡಿಕೊಳ್ಳುತ್ತಿದ್ದಾರೆ. ಆಲದ ಮರದ ಜೊತೆಗೆ ರಸ್ತೆ ಪಕ್ಕದಲ್ಲಿ ಹುಣಿಸೆ, ಬೇವಿನ ಮರಗಳು ಸಹ ಇವೆ. ಅಖಿಲ, ಸಲೀಮಾ ಸಹ ಮಕ್ಕಳೊಂದಿಗೆ ಅಲ್ಲೇ ಆಡಿಕೊಂಡರು.

ಗಿಡಗಳಿಂದ ನಮಗೆ ಎಂತಹ ಉಪಯೋಗಗಳು ಇರುತ್ತವೆ?ಆಲೋಚಿಸಿರಿ.

## ಗಿಡಗಳೆಲ್ಲ ಒಂದೇ ವಿಧವಾಗಿ ಇರುತ್ತವೆಯೇ ?



ಆಖಿಲ, ಸಲೀಮಾ ಹಿತ್ತಲಲ್ಲಿ ಗಿಡಗಳ ಎಲೆಗಳು, ಕೊಂಬೆಗಳು, ಕಾಂಡವನ್ನು ನೋಡಿದರು. ಅವುಗಳಲ್ಲಿ ಕೆಲವು ಉದ್ದವಾಗಿ, ಕೆಲವು ಗಿಡ್ಡವಾಗಿ ಇದ್ದವು. ಮನೆ ಹೊರಗಡೆ ಎತ್ತರವಾಗಿ, ಉದ್ದವಾಗಿ ಇರುವ ತಾಳೆ ಮರವನ್ನು ನೋಡಿ, 'ಅಬ್ಬಾ! ಎಷ್ಟು ಎತ್ತರವಾಗಿ ಇದೆಯೋ!' ಎಂದಳು ಅಖಿಲ. ಕೆಲವು ಸಣ್ಣ ಸಣ್ಣ ಎಲೆಗಳಿಂದ, ದೊಡ್ಡ ದೊಡ್ಡ ಎಲೆಗಳಿಂದ ಇರುವ ಗಿಡಗಳನ್ನು ನೋಡಿದರು. ಅವರು ನೋಡಿದವುಗಳಲ್ಲಿ ಸಣ್ಣ ಸಣ್ಣ ಎಲೆಗಳಿಂದ, ದೊಡ್ಡ ದೊಡ್ಡ ಎಲೆಗಳಿಂದ ಇರುವ ಗಿಡಗಳು ಯಾವಾಗಿರುತ್ತವೆ? ಹಾಗೆಯೇ ದೊಡ್ಡದಾಗಿ,ಎತ್ತರವಾಗಿ ಇದ್ದು ನೆರಳುಕೊಡುವ ಗಿಡಗಳು ಯಾವುವಾಗಿರುತ್ತವೆಯೋ ಹೇಳಿರಿ.









SCERT TELANGANA







ನಮ್ಮ ಸುತ್ತಲೂ ವಿವಿಧ ರೀತಿಯ ಗಿಡಗಳು, ಮರಗಳು ಇವೆ ಅಲ್ಲವೇ ! ಅವುಗಳೆಲ್ಲ ಒಂದೇ ಎತ್ತರದಲ್ಲಿ ಇವೆಯೇ ? ಇವುಗಳಲ್ಲಿ ಕೆಲವು ನಿಮಗಿಂತ ಕಡಿಮೆ ಎತ್ತರದಲ್ಲಿ ಇರುತ್ತವೆ. ಆದರೆ ಕೆಲವು ಗಿಡಗಳು ನಿಮ್ಮಷ್ಟು ಎತ್ತರ ಇರುತ್ತವೆ. ಮತ್ತೆ ಕೆಲವು ನಿಮಗಿಂತ ಎತ್ತರವಾಗಿ ಇರುತ್ತವೆ. ನಿಮ್ಮ ಪರಿಸರಗಳಲ್ಲಿನ ಗಿಡಗಳನ್ನು, ಪೂರ್ಣ ಬೆಳೆದ ಮರಗಳನ್ನು ನೋಡಿರಿ. ಅವುಗಳ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ನಿಮಗಿಂತಲೂ ಚಿಕ್ಕದಾಗಿರುವವು | ನಿಮ್ಮಷ್ಟೇ ಎತ್ತರ ಇರುವವು | ನಿಮಗಿಂತಲೂ ಬಹಳ ಎತ್ತರ ಇರುವವು |
|---|---|---|
| | | |


ಅಲದಮರ, ಹುಣಿಸೆಮರ, ಬೇವಿನಮರದಂತಹ ಮರಗಳು ಬಹಳ ಕೊಂಬೆಗಳಿಂದ ದೊಡ್ಡದಾಗಿ ಇರುತ್ತವೆ. ಇವು ನೆರಳು ಕೊಡುತ್ತವೆ. ಆದ್ದರಿಂದ ರಸ್ತೆ ಪಕ್ಕದಲ್ಲಿ ಇಂತಹ ಮರಗಳನ್ನು ಬೆಳೆಸುತ್ತಾರೆ. ಇವುಗಳ ಎಲೆಗಳು, ಹೂವು, ಕಾಯಿಗಳು ನಮಗೆ ಉಪಯೋಗವಾಗುತ್ತವೆ. ಮರಗಳಿಂದ ನಮಗೆ ಕಟ್ಟಿಗೆ ಸಹ ದೊರೆಯುತ್ತದೆ. ಮರದ ಕಟ್ಟಿಗೆಯಿಂದ ಎಷ್ಟೋ ವಸ್ತುಗಳನ್ನು ತಯಾರು ಮಾಡುತ್ತಾರೆ. ತಾಳೆಮರ ಬಹಳ ಎತ್ತರವಾಗಿ ಬೆಳೆಯುತ್ತದೆ. ಇದಕ್ಕೆ ಕೊಂಬೆಗಳು ಇರುವುದಿಲ್ಲ. ತಾಳೆಮರದ ಎಲೆಗಳು ದೊಡ್ಡ ದೊಡ್ಡ ಮಟ್ಟೆಗಳ ಹಾಗೆ ಇರುತ್ತವೆ. ತಾಳೆ ಮಟ್ಟೆಗಳನ್ನು ಗುಡಿಸಲುಗಳ ಮೇಲೆ ಹೊದಿಸಲು ಬಳಸುತ್ತಾರೆ.

ಹೀಗೆಯೇ ಇನ್ನು ಯಾವ ಯಾವ ಮರಗಳಿಂದ ಎಂತಹ ಲಾಭಗಳು ಇವೆಯೋ ಆಲೋಚಿಸಿರಿ.

### ನಾವು ಏಕೆ ಮರಗಳನ್ನು ಬೆಳೆಸಿಕೊಳ್ಳಬೇಕು?

ಅಖಿಲ ತಮ್ಮ ಮನೆಯ ಹಿತ್ತಲಲ್ಲಿ ಮಾವಿನಮರ ಇದೆ. ಮಾವಿನ ಮರದಿಂದ ಯಾವ ಯಾವ ಲಾಭಗಳು ಇವೆಯೋ ಗೊತ್ತೇ?

ಮಾವಿನ ಕಾಯಿಗಳಿಂದ ಉಪ್ಪಿನಕಾಯಿ ಹಾಕಿಕೊಳ್ಳುತ್ತಾರೆ. ಮಾವಿನ ಹಣ್ಣು ತಿನ್ನುತ್ತಾರೆ. ಹಬ್ಬದ ದಿನಗಳಲ್ಲಿ ಮಾವಿನ ಎಲೆಗಳಿಂದ ಮನೆಗೆ ತೋರಣ ಕಟ್ಟುತ್ತಾರೆ. ಮರಗಳಿಗೆ ಜೋಕಾಲಿ ಕಟ್ಟಿಕೊಂಡು ಜೋಕಾಲಿ ಆಡುತ್ತಾರೆ.



SCERT TELANGANA





ಮಾವಿನ ಮರ ನಮಗೆ ಹೇಗೆ ಉಪಯೋಗವಾಗುತ್ತಿದೆಯೋ ತಿಳಿದುಕೊಂಡಿರಲ್ಲವೇ! ಕೆಳಗಿನ ಮರಗಳಿಂದ ನಮಗೆಯಾವ ಯಾವ ಉಪಯೋಗಗಳು ಇವೆಯೋ ಗುಂಪಿನಲ್ಲಿ ಚರ್ಚಿಸಿರಿ, ಬರೆಯಿರಿ.



ತೆಂಗಿನ ಮರ



ಬೇವಿನ ಮರ

## ನಮ್ಮ ಸುತ್ತಲೂ ಬೆಳೆಯದ ಮರಗಳು

ನಾವು ವಿವಿಧ ಹಣ್ಣುಗಳನ್ನು ತಿನ್ನುತ್ತೇವೆ. ಈ ಹಣ್ಣಿನ ಮರಗಳಲ್ಲಿ ಕೆಲವು ನಮ್ಮ ಪ್ರಾಂತದಲ್ಲಿ ಇರುತ್ತವೆ. ಮತ್ತೆ ಕೆಲವು ನಮ್ಮ ಪ್ರಾಂತದಲ್ಲಿ ಇರುವುದಿಲ್ಲ. ಅಖಿಲಳಿಗೆ ಸೇಬುಹಣ್ಣು ಅಂದರೆ ಬಹಳ ಇಷ್ಟ. ಆದರೆ ಸೇಬು ಹಣ್ಣಿನ ಮರವನ್ನು ಆಕೆ ಎಂದೂ ನೋಡಿಲ್ಲ. ಹಾಗೇಯೇ ನೀವು ನೋಡದ ಹಣ್ಣಿನ ಮರಗಳ ಹೆಸರುಗಳನ್ನು ಬರೆಯಿರಿ.



.................... ....................

.................... ....................

.................... ....................

.................... ....................

.................... ....................

.................... ....................





## ಜಲ ವೃಕ್ಷಗಳು, ಮರಭೂಮಿ ವೃಕ್ಷಗಳು

ಸಲೀಮಾ, ಅಖಿಲ ಸ್ನೇಹಿತೆಯರೊಂದಿಗೆ ಸೇರಿ ಹೊಲಕ್ಕೆ ಹೋದರು. ಪಕ್ಕದಲ್ಲೇ ಇರುವ ಕೊಳದಲ್ಲಿ ತಾವರೆ ಹೂವನ್ನು ನೋಡಿದರು. ಮೀನುಗಳನ್ನು ಹಿಡಿಯುತ್ತಿದ್ದ ಸೋಮಯ್ಯ ಅವರಿಗೆ ತಾವರೆಹೂಗಳ ಬಗ್ಗೆ ಹೇಳಿದನು. ಮನೆಗೆ ಹಿಂದಿರುಗಿ ಬರುತ್ತಿರುವಾಗ ದಾರಿಯಲ್ಲಿ ಅಖಿಲ ಒಂದು ಗಿಡದ ಹತ್ತಿರ ನಿಂತಳು. "ಈ ಗಿಡವನ್ನು ನೋಡು, ತಮಾಷೆಯಾಗಿ ಇದೆ. ಎಲೆಗಳು ಇಲ್ಲ. ಬಹಳ ಮುಳ್ಳುಗಳಿವೆ. ಇದೇನು?" ಎಂದು ಸಲೀಮಾಳನ್ನು ಕೇಳಿದಳು. ಸಲೀಮಾ ಏನು ಹೇಳಿರುತ್ತಾಳೆ? ಊಹಿಸಿರಿ. ಕೆಳಗಿನ ಚಿತ್ರಗಳು ನೋಡಿರಿ. ಇವುಗಳ ಕುರಿತು ನಿಮಗೆ ಗೊತ್ತಾ ? ಇವು ಎಲ್ಲಿ ಬೆಳೆಯುತ್ತವೆ?




ಕಮಲ



ತಾವರೆ




ಲೋಳೆಸರ



ಪಾಪಸ್‌ಕಳ್ಳಿ

ಕಮಲ, ತಾವರೆಯಂತಹವು ನೀರಿನಲ್ಲಿ ಬೆಳೆಯುತ್ತವೆ. ಇವುಗಳನ್ನು 'ಜಲವೃಕ್ಷಗಳು' ಎನ್ನುವರು. ಲೋಳೆಸರ, ಪಾಪಸಿಕಳ್ಳಿ ಇಂತಹವು ನೀರು ಕಡಿಮೆ ಇರುವ ಪ್ರದೇಶದಲ್ಲಿ, ಮರಳಿನಲ್ಲಿ ಬೆಳೆಯುತ್ತವೆ. ಇವುಗಳನ್ನು **'ಮರುಭೂಮಿ ವೃಕ್ಷಗಳು'** ಎನ್ನುವರು.

SCERT TELANGANA



### ಕಠಿಣ ಪದಗಳು

1. ಮರಗಳಿಂದ ಲಾಭಗಳು  2. ಗಿಡಗಳ ದತ್ತು  3. ಮನೆಯಲ್ಲಿ ಬೆಳೆಸಿಕೊಳ್ಳುವ ಗಿಡಗಳು
4. ಮರುಭೂಮಿ ಗಿಡಗಳು  5. ಜಲ ವೃಕ್ಷಗಳು  6. ಹೊರಗಡೆ ಬೆಳೆಯುವ ಮರಗಳು

### ನಾವು ಕಲಿತ ಕೊಂಡಿರುವುದು

- ನಮ್ಮ ಮನೆಯಲ್ಲಿ, ಸುತ್ತಮುತ್ತಲ್ಲಿ ವಿವಿಧ ರೀತಿಯ ಗಿಡಗಳು ಬೆಳೆಯುತ್ತವೆ.
- ನಮ್ಮ ಸುತ್ತಲೂ ಇರುವ ಗಿಡಗಳು ವಿವಿಧ ರೀತಿಯಲ್ಲಿ ಇರುತ್ತವೆ. ಕೆಲವು ಬಹಳ ಎತ್ತರವಾಗಿ ಬೆಳೆಯುತ್ತವೆ. ಕೆಲವು ಕಡಿಮೆ ಎತ್ತರದಲ್ಲಿ ಇರುತ್ತವೆ. ಇನ್ನೂ ಕೆಲವು ಬಹಳ ಸಣ್ಣವಾಗಿ ಇರುತ್ತವೆ.
- ಬೇವಿನ ಮರಗಳಂತಹ ಮರಗಳು ಬಹಳ ಕೊಂಬೆಗಳಿಂದ ದೊಡ್ಡದಾಗಿ ಇರುತ್ತವೆ. ತಾಳೆ ಮರದಂತಹ ಮರಗಳು ಕೊಂಬೆಗಳಿಲ್ಲದೇ ಎತ್ತರವಾಗಿ ಬೆಳೆಯುತ್ತವೆ.
- ಮರಗಳಿಂದ ಅನೇಕ ಉಪಯೋಗಗಳಿವೆ. ಇವುಗಳಿಂದ ಹೂ, ಹಣ್ಣು, ಕಟ್ಟಿಗೆ ಮೊದಲಾದವು ದೊರೆಯುತ್ತವೆ.
- ಕೆಲವು ಮರಗಳು ನಮ್ಮ ಪರಿಸರದಲ್ಲಿ ಬೆಳೆಯುವುದಿಲ್ಲ. ಆದರೆ ಅವುಗಳಿಂದ ಲಭಿಸುವ ಹೂ, ಹಣ್ಣುಗಳನ್ನು ನಾವು ಬಳಸುತ್ತೇವೆ.
- ಮರಳು ಭೂಮಿಯಲ್ಲಿ ಪಾಪಸ್‌ಕಳ್ಳಿ, ಲೋಳೆಸರ ದಂತಹ ಗಿಡಗಳು ಬೆಳೆಯುತ್ತವೆ. ಇವುಗಳನ್ನು ಮರುಭೂಮಿ ವೃಕ್ಷಗಳು ಎನ್ನುವರು.

### ಇವನ್ನು ಮಾಡಿರಿ



### ವಿಷಯಾವಗಾಹನೆ

1. ಹೂಬಿಡುವ, ಹಣ್ಣು ಬಿಡುವ ಮರಗಳಿಗೆ ಕೆಲವು ಉದಾಹರಣೆಕೊಡಿರಿ.
2. ಈಚಲು, ಮಾವಿನ ಮರಗಳ ನಡುವೆ ಇರುವ ಹೋಲಿಕೆಗಳು, ವ್ಯತ್ಯಾಸಗಳು ಯಾವುವು?
3. ಮಲ್ಲಿಗೆ ಹೂ, ದಾಸವಾಳ ಗಿಡಗಳ ನಡುವೆ ಇರುವ ಹೋಲಿಕೆಗಳು, ವ್ಯತ್ಯಾಸಗಳು ಹೇಳಿರಿ, ಬರೆಯಿರಿ.
4. ನಿಮ್ಮ ಸುತ್ತಲೂ ಬೆಳೆಯದ ಮರಗಳು ಯಾವುವು?
5. ನಿಮ್ಮ ಶಾಲೆಯಲ್ಲಿ ನೀವು ನೆಟ್ಟಿರುವ ಸಸಿಯನ್ನು ಹೇಗೆ ರಕ್ಷಿಸುತ್ತೀರಿ ?





| | ಆಲದ ಮರ | ತಾಳೆಮರ |
|---|---|---|
| ಎತ್ತರ | | |
| ಎಲೆಗಳು | | |
| ಕೊಂಬೆಗಳು | | |

SCERT TELANGANA





6 ಅಲದ ಮರಕ್ಕೂ, ತಾಳೆ ಮರಕ್ಕೂ ಇರುವ ವ್ಯತ್ಯಾಸಗಳನ್ನು ಪಟ್ಟಿಯಲ್ಲಿ ಬರೆಯಿರಿ.

7. ಸೀತೆ, ಲಕ್ಷ್ಮಿ ಯವರ ಮನೆಗಳನ್ನು ನೋಡಿರಿ. ಉತ್ತರಗಳು ಹೇಳಿರಿ.


ಸೀತೆಯ ಮನೆ


ಲಕ್ಷ್ಮಿಯ ಮನೆ

- ನಿಮಗೆ ಯಾರ ಮನೆ ಬಹಳ ಇಷ್ಟವಾಯಿತು?ಏಕೆ?
- ಸೀತಾಳ ಮನೆಯಲ್ಲಿ ಏನೇನು ಇವೆ? ಲಕ್ಷ್ಮಿಯ ಮನೆಯಲ್ಲಿ ಏನೇನು ಇಲ್ಲ?
- ನಿಮ್ಮ ಮನೆಯಲ್ಲೂ ಸಹ ಲಕ್ಷ್ಮಿ ಮನೆಯ ಹಾಗೆ ಖಾಲಿಸ್ಥಳ ಇದ್ದರೆ ನೀವೇನು ಮಾಡುವಿರಿ?

8. ಸೀತಾ ತಮ್ಮ ಮನೆಯಲ್ಲಿ ಗಿಡಗಳನ್ನು ಬೆಳೆಸುತ್ತಾಳೆ.ಮನೆಯೆಲ್ಲಾ ಪರಿಶುಭ್ರವಾಗಿ ಇರಿಸುತ್ತಾಳೆ.ಮತ್ತೆ ನೀವು ಈ ಕೆಳಗಿನವುಗಳಲ್ಲಿ ಏನು ಮಾಡುವಿರೋ'3' ಮಾಡಿರಿ. .

- ನಾನು ಮನೆಯಲ್ಲಿ ಗಿಡಗಳನ್ನು ಬೆಳೆಸುತ್ತೇನೆ . ( )
- ಅವುಗಳಿಗೆ ಪ್ರತಿದಿನ ನೀರು ಹಾಕುತ್ತೇನೆ. ( )
- ಕೊಂಬೆಗಳು,ಎಲೆಗಳು ಕೀಳದಂತೆ ನೋಡಿಕೊಳ್ಳುತ್ತೇವೆ. ( )
- ಗಿಡಗಳ ಸುತ್ತಲೂ ಶುಭ್ರ ಮಾಡುತ್ತೇನೆ. ( )
- ಉದುರಿದ ಎಲೆಗಳನ್ನು ತೆಗೆದು ಹಾಕುತ್ತೇನೆ . ( )
- ನಾನು ಶಾಲೆಯಲ್ಲಿ ಗಿಡಗಳನ್ನು ದತ್ತು ತೆಗೆದುಕೊಂಡಿದ್ದೇನೆ.ಜಾಗ್ರತ್ತೆಯಿಂದ ಬೆಳೆಸುತ್ತೇನೆ ( )

9 ಮನೆಯಲ್ಲಿ ಗಿಡಗಳು ಇರುವುದು ಅವಶ್ಯಕ ಏಕೆಂದರೆ . . . . . . . . . . . . . . . . . .



## ಚಿತ್ರಗಳನ್ನು ಬಿಡಿಸಿರಿ. ಬಣ್ಣಗಳನ್ನು ಹಾಕಿರಿ.

1. ಕೆಳಗಿನ ಚಿತ್ರಗಳನ್ನು ಬಿಡಿಸಿ ಬಣ್ಣಗಳನ್ನು ಹಾಕಿರಿ.







2. ನಿಮ್ಮ ಪ್ರದೇಶದಲ್ಲಿ ಬಹಳ ಎತ್ತರವಾಗಿರುವ ಒಂದು ಮರದ ಚಿತ್ರ ಬಿಡಿಸಿ ಅದಕ್ಕೆ ಬಣ್ಣಗಳನ್ನು ಹಾಕಿರಿ. ಅದನ್ನು ಕುರಿತು ಬರೆಯಿರಿ.



## ಸಮಾಚಾರ ನೈಪುಣ್ಯಗಳು – ಪ್ರಾಜೆಕ್ಟು ಕೆಲಸ

1. ನಿಮ್ಮ ಸುತ್ತಮುತ್ತಲಲ್ಲಿ ಇರುವ ಗಿಡಗಳು/ಮರಗಳಲ್ಲಿ ಎಷ್ಟರ ಹೆಸರುಗಳು ನಿಮಗೆ ತಿಳಿದಿದೆ? ನಿಮಗೆ ತಿಳಿದಿರುವ ಹೆಸರುಗಳನ್ನು ಬರೆಯಿರಿ. ತಿಳಿಯದಿದ್ದರೆ ಆ ಹೆಸರುಗಳನ್ನು ತಿಳಿದುಕೊಂಡು ಬರೆಯಿರಿ.

2. ನಿಮ್ಮ ಸುತ್ತಮುತ್ತಲಲ್ಲಿ ಇರುವ ಹೂವು, ಹಣ್ಣು, ನೆರಳು, ಕಟ್ಟಿಗೆಯನ್ನು ನೀಡುವಗಿಡಗಳ/ಮರಗಳ ಹೆಸರುಗಳನ್ನು ಬರೆಯಿರಿ.

| ಹೂ ಬಿಡುವವು | ಹಣ್ಣು ಕೊಡುವವು | ನೆರಳು ಕೊಡುವವು | ಕಟ್ಟಿಗೆ ಕೊಡುವವು |
|---|---|---|---|
| ...................... | ...................... | ...................... | ...................... |
| .................... | .................... | .................... | .................... |
| .................... | .................... | .................... | .................... |



## ಪ್ರಶಂಸೆ

1. ಯಾರದರೂ ಮರದ ಕೊಂಬೆಗಳನ್ನು ಮುರಿದರೆ ನಿಮಗೆ ಏನು ಅನಿಸುತ್ತದೆ? ಆಗ ನೀವು ಏನು ಮಾಡುವಿರಿ?

2 ಸಲೀಮಾಳ ಶಾಲೆಯಲ್ಲಿ ಗಿಡಗಳು ಬಹಳ ಇವೆಯಲ್ಲವೇ? ರಜಾದಿನಗಳಲ್ಲಿ ಸಹ, ಜಾಗ್ರತೆಯಾಗಿ ನೋಡಿಕೊಳ್ಳುತ್ತಾಳೆ ಎಂದು ತಿಳಿದುಕೊಂಡಿರಲ್ಲವೇ! ಹಾಗೆಯೇ ನೀವು ಸಹ ನಿಮ್ಮ ಶಾಲೆಯಲ್ಲಿ ಒಂದು ಗಿಡವನ್ನು ನೆಡಿರಿ ಇಲ್ಲವೇ ದತ್ತು ತೆಗೆದುಕೊಳ್ಳಿರಿ. ಅದಕ್ಕೆ ಪ್ರತಿ ದಿನ ನೀರು ಹಾಕಿರಿ, ತಿಂಗಳ ನಂತರ ಏನಾಗಿದೆಯೋ ಹೇಳಿರಿ.



## ಪ್ರಶ್ನಿಸುವುದು

1. ಅಖಿಲ ಜಲ ವೃಕ್ಷಗಳ ಕುರಿತು ತಿಳಿದುಕೊಳ್ಳಬೇಕೆಂದುಕೊಂಡಳು. ಇದಕ್ಕಾಗಿ ಕೆರೆಯ ಹತ್ತಿರ ಹೋದಳು. ಅಲ್ಲಿ ರಾಮಯ್ಯ ಅಜ್ಜನನ್ನು ಭೇಟಿಯಾದಳು. ಜಲ ವೃಕ್ಷಗಳ ಬಗ್ಗೆ ಪ್ರಶ್ನೆಗಳು ಕೇಳಿದಳು. ಅಖಿಲ ಯಾವ ಯಾವ ಪ್ರಶ್ನೆಗಳು ಕೇಳಿರಬಹುದು. ಆ ಪ್ರಶ್ನೆಗಳು ಬರೆಯಿರಿ. ರಾಮಯ್ಯ ಅಜ್ಜ ಏನು ಉತ್ತರ ನೀಡಿರಬಹುದು.



## ನಾನು ಇವನ್ನು ಮಾಡಬಲ್ಲೆನೇ?



| | | |
|---|---|---|
| 1 | ನಮ್ಮ ಸುತ್ತಲೂ ಇರುವ ಗಿಡಗಳಲ್ಲಿ ಬಹಳ ಎತ್ತರವಾಗಿ ಬೆಳೆಯುವವು ಚಿಕ್ಕದಾಗಿ ಇರುವವು ಯಾವುವೋ ಹೇಳಬಲ್ಲೆನು. | ಹೌದು/ಅಲ್ಲ |
| 2 | ಮರಗಳಿಂದ ಆಗುವ ಉಪಯೋಗಗಳನ್ನು ಹೇಳಬಲ್ಲೆನು. | ಹೌದು/ಅಲ್ಲ |
| 3 | ಜಲ ವೃಕ್ಷಗಳು, ಮರು ಭೂಮಿ ವೃಕ್ಷಗಳ ಕುರಿತು ವಿವರಿಸಬಲ್ಲೆನು. | ಹೌದು/ಅಲ್ಲ |
| 4 | ಹೂ ಗಿಡಗಳು, ಮರದ ಕೊಂಬೆಗಳು ಬಿಡಿಸಿ ಬಣ್ಣಗಳನ್ನು ಹಾಕಬಲ್ಲೆನು. | ಹೌದು/ಅಲ್ಲ |
| 5 | ಗಿಡಗಳ ಕುರಿತು, ಮರಗಳ ಕುರಿತು ತಿಳಿಯಲು ಪ್ರಶ್ನಿಸಬಲ್ಲೆನು | ಹೌದು/ಅಲ್ಲ |

SCERT TELANGANA





# 6 ಎಲೆಗಳಿಂದ ಅನುಬಂಧ







ನಮ್ಮ ಸುತ್ತಲೂ ಎಷ್ಟೋ ಮರಗಳು, ಗಿಡಗಳು ಇವೆ. ಇವೆಲ್ಲಾ ಬೇರೆ ಬೇರೆಯಾಗಿರುವಂತೆ ಇವುಗಳ ಎಲೆಗಳು ಕೂಡ ಬೇರೆ ಬೇರೆಯಾಗಿರುತ್ತವೆ. ಬಾಳೆ ಎಲೆ ನೋಡಿದ್ದೀರಾ? ಎಷ್ಟು ದೊಡ್ಡದಾಗಿ ಇರುತ್ತದೆಯೋ! ಇದರಲ್ಲಿ ಊಟವನ್ನು ಸಹ ಮಾಡುತ್ತಾರೆ. ಹುಣಿಸೆ ಎಲೆ ನೋಡಿದ್ದೀರಾ ? ಎಷ್ಟು ಚಿಕ್ಕದಾಗಿ ಇರುತ್ತದೋ ! ತೆಂಗಿನ ಎಲೆಗಳನ್ನು ನೋಡಿದ್ದೀರಾ ? ಹೇಗೆ ಇರುತ್ತದೆಯೋ ಆಲೋಚಿಸಿರಿ. ಚಿತ್ರದಲ್ಲಿ ಬಗೆಬಗೆಯ ಎಲೆಗಳು ಇವೆ. ಇವನ್ನು ಗುರುತಿಸಬಲ್ಲಿರಾ?

ಚಿತ್ರದಲ್ಲಿರುವ ಎಲೆಗಳ ಹೆಸರು ಹೇಳಿರಿ, ಬರೆಯಿರಿ.

ಈ ಎಲೆಗಳೆಲ್ಲವೂ ಒಂದೇ ರೀತಿಯವಾಗಿವೆಯೇ? ಯಾವ ಯಾವ ವ್ಯತ್ಯಾಸಗಳಿವೆ ?


ಎಲೆಗಳೆಲ್ಲಾ ಒಂದೇ ರೀತಿಯಾಗಿರುವುದಿಲ್ಲ. ಕೆಲವು ದೊಡ್ಡದಾಗಿ, ಇನ್ನು ಕೆಲವು ಚಿಕ್ಕದಾಗಿರುತ್ತವೆ. ಅವುಗಳ ಅಂಚುಗಳು, ತುದಿಗಳು ಬೇರೆ ಬೇರೆ ಯಾಗಿರುತ್ತವೆ.

SCERT TELANGANA





ಕೆಳಗಿನ ಎಲೆಗಳನ್ನು ಪರಿಶೀಲಿಸಿರಿ. ಎಲೆಗಳ ಅಂಚುಗಳು, ತುದಿಗಳು ಹೇಗೆ ಇರುವವೆಂದು ನೋಡಿರಿ.



ಸಾಧಾರಣವಾಗಿ ಕೆಲವು ಎಲೆಗಳ ಅಂಚುಗಳು ಮೃದುವಾಗಿ ಇನ್ನು ಕೆಲವು ಗರಗಸದ ತುದಿಯಂತೆ ಇರುತ್ತವೆ. ಕೆಲವು ಎಲೆಗಳ ತುದಿಗಳು ಚೂಪಾಗಿ, ಇನ್ನು ಕೆಲವು ಎಲೆಗಳ ತುದಿಗಳು ದುಂಡಾಗಿ ಇರುತ್ತವೆ. ಇಂತಹ ಇನ್ನು ಕೆಲವು ಎಲೆಗಳ ಹೆಸರುಗಳ ಬಗ್ಗೆ ಹೇಳಿರಿ.



ನೀವು ಕೆಲವು ಎಲೆಗಳನ್ನುಶೇಖರಿಸಿರಿ. ಶೇಖರಿಸಿದ ಎಲೆಗಳನ್ನು ಕೈಯಿಂದ ಮುಟ್ಟಿ ನೋಡಿರಿ. ಮೃದುವಾಗಿ ಇವೆಯೇ? ಗಡುಸಾಗಿ ಇವೆಯೇ ? ಪರಿಶೀಲಿಸಿ ಪಟ್ಟಿಯಲ್ಲಿ ಬರೆಯಿರಿ.

| ಮೃದುವಾಗಿರುವ ಎಲೆಗಳು | ಒರಟಾಗಿರುವ ಎಲೆಗಳು |
|---|---|
| | |



## ಬಣ್ಣ ಬಣ್ಣದ ಎಲೆಗಳು



ಯೂಸುಫ್ ಮನೆಯಲ್ಲಿ ಬಗೆಬಗೆಯ ಕ್ರೋಟನ್ ಸಸ್ಯಗಳು ಇವೆ, ಅವು ಬಗೆಬಗೆಯ ಬಣ್ಣಗಳಲ್ಲಿ ಇವೆ. ಯೂಸುಫ್‌ನ ಮನೆಗೆ ಬಂದ ರಾಮುಗೆ ಬಣ್ಣಬಣ್ಣದ ಎಲೆಗಳನ್ನು ನೋಡಿದಾಗ ಆಶ್ಚರ್ಯವಾಯಿತು. ರಾಮು ಮಾವಿನ ಎಲೆಗಳನ್ನು ನೋಡಿದನು. ಅದರ ಚಿಗುರು ಎಲೆಗಳು ಎಳೆ ಕೆಂಪು ಬಣ್ಣದಲ್ಲಿ ಬಲಿತ ಎಲೆಗಳು ಹಸಿರು ಬಣ್ಣದಲ್ಲಿ, ಉದುರುವ ಎಲೆಗಳು ಅರಿಶಿನ ಬಣ್ಣದಲ್ಲಿ ಇರುವುದನ್ನು ಗಮನಿಸಿದನು. ನೀವು ಎಂದಾದರೂ ಬಗೆಬಗೆಯ ಬಣ್ಣದಲ್ಲಿರುವ ಎಲೆಗಳನ್ನು ನೋಡಿದ್ದೀರಾ ? ಅವುಗಳ ಹೆಸರುಗಳನ್ನು ಹೇಳಿರಿ.

SCERT TELANGANA







ನೀವು ಯಾವುದೇ ಒಂದು ಎಲೆಯನ್ನು ತೆಗೆದುಕೊಂಡು ಪರಿಶೀಲಿಸಿರಿ. ಅದರ ಬಣ್ಣ, ಆಕಾರ, ಎಲೆಯ ಮೇಲಿನ ಭಾಗ, ಕೆಳಗಿನ ಭಾಗ ನೋಡಿರಿ. ಅವು ಹೇಗೆ ಇವೆ? ಅದನ್ನು ಕೈಯಿಂದ ಮುಟ್ಟಿದಾಗ ನಿಮಗೆ ಹೇಗೆ ಅನಿಸುತ್ತದೆ? ಗಡುಸಾಗಿ ಇದೆಯಾ? ನುಣಪಾಗಿ ಇದೆಯಾ ? ಎಲೆಯ ವಾಸನೆ ನೋಡಿರಿ. ಆ ವಾಸನೆ ಹೇಗೆ ಅನಿಸುತ್ತದೆ ? ಎಲೆಯ ಕೊನೆಗಳನ್ನು ನೋಡಿರಿ ? ಕೊನೆಗಳು ಹೇಗೆ ಇವೆ ? ಕೆಲವು ಎಲೆಗಳನ್ನು ಶೇಖರಿಸಿರಿ. ಅವುಗಳ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

**ನಿಮಗೆ ಗೊತ್ತೇ ?**
ಬಾದಾಮಿ ಗಿಡದ ಎಲೆಗಳು ಬಹಳ ವಿಧದ ಬಣ್ಣದಲ್ಲಿ ಇರುತ್ತವೆ.



| ಎಲೆಯ ಹೆಸರು | ಎಳೆಎಲೆಯ ಬಣ್ಣ | ಬಲಿತ ಎಲೆಯ ಬಣ್ಣ | ಉದುರಿದ ಎಲೆಯಬಣ್ಣ | ಕೊನೆಗಳ (ತುದಿ)ಆಕಾರ | ಮೇಲಿನ ಭಾಗ | ಕೆಳಗಿನ ಭಾಗ | ವಾಸನೆ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |

## ಎಲೆಗಳು ಉದುರುವುದು



ರಾಬರ್ಟ್‌ರವರ ಪಾಠಶಾಲೆಯಲ್ಲಿ ದೊಡ್ಡ ಮರ ಇದೆ. ರಜಾ ದಿನಗಳಲ್ಲಿ ಮಕ್ಕಳೆಲ್ಲರೂ ಆ ಮರದ ನೆರಳಿನಲ್ಲಿ ಆಟವಾಡುತ್ತಾರೆ.ಮರಕ್ಕೆ ಇರುವ ಎಲೆಗಳೆಲ್ಲಾ ಉದುರುವುದನ್ನು ರಾಬರ್ಟ್ ನೋಡಿದನು. ಎಲೆಗಳು ಇಲ್ಲದ ಮರವನ್ನು ನೋಡಿದ ರಾಬರ್ಟ್‌ನಿಗೆ ದುಃಖವಾಯಿತು. ಮರಕ್ಕೆ ಪುನಃ ಎಲೆಗಳು ಯಾವಾಗ ಬರುವವೋ ? ಎಂದು ಆಲೋಚನೆ ಮಾಡತೊಡಗಿದನು.

* ಯಾವ ಯಾವ ಮರದ ಎಲೆಗಳು ಉದುರುತ್ತವೆಯೋ ಪರಿಶೀಲಿಸಿ ಹೇಳಿರಿ.
* ಮರದ ಎಲೆಗಳು ಯಾವಾಗ ಉದುರುತ್ತವೆ?
* ಉದುರಿದ ಎಲೆಗಳು ಏನಾಗುತ್ತವೆ?
* ಎಲೆಗಳು ಉದುರಿದ ಮರಗಳು ಯಾವಾಗ ಪುನಃ ಚಿಗುರುತ್ತವೆ?

SCERT TELANGANA






## ಉದುರಿದ ಎಲೆಗಳನ್ನು ಏನು ಮಾಡಬೇಕು?

ಸಾಧಾರಣವಾಗಿ ಮರದ ಎಲೆಗಳು ಉದುರುತ್ತಿರುತ್ತವೆ. ಉದುರಿದ ಎಲೆಗಳಿಂದ ಪರಿಸರವು ಅಪರಿಶುಭ್ರವಾಗಿ ಕಾಣಿಸುತ್ತದೆ. ಅದಕ್ಕಾಗಿ ಅವನ್ನು ಕಸ ಗೂಡಿಸಿ ಪರಸರವನ್ನು ಶುಭ್ರವಾಗಿ ಇರಿಸಬೇಕು.

**ನಿಮಗೆಗೊತ್ತೇ?**

ಉದುರಿ ಹೋಗಿರುವ ಎಲೆಗಳು,ಕಸವನ್ನು ಸುಡುವುದರಿಂದ ಬರುವ ಹೊಗೆಯಿಂದ ಆರೋಗ್ಯಕ್ಕೆ ಹಾನಿ ಆಗುತ್ತದೆ.ಆದ್ದರಿಂದ ಕಸವನ್ನು ಕಂಪೋಸ್ಟ್ ಕುಣಿಯಲ್ಲಿ ಹಾಕಬೇಕು. ಸುಡಬಾರದು.

### ಕಂಪೋಸ್ಟು ಕುಣಿ



ರಾಬರ್ಟ್ ರವರ ಪಾಠಶಾಲೆಯಲ್ಲಿ ಪ್ರತಿದಿನ ಮರಗಳಿಂದ ಉದುರುವ ಎಲೆಗಳು, ಕಸವನ್ನು ಕೂಡಿಸಿ ಪಾಠಶಾಲೆ ಸ್ವಚ್ಚತಾ ಕಮಿಟಿಯ ಸದಸ್ಯರು ಕುಣಿಯಲ್ಲಿ ಹಾಕುವರು. ಹಾಗೆಯೇ ಮಧ್ಯಾಹ್ನ ಊಟ ಮಾಡಿದ ನಂತರ ಉಳಿದ ಪದಾರ್ಥವನ್ನೆಲ್ಲಾ ಆ ಕುಣಿಯಲ್ಲಿ ಹಾಕಿ ಮೇಲೆ ಮಣ್ಣನ್ನು ಮುಚ್ಚುತ್ತಾರೆ. ಹೀಗೆ ಸ್ವಲ್ಪ ಮಣ್ಣನ್ನು ಚೆಲ್ಲುವರು. ಏತಕ್ಕಾಗಿ ಮಾಡುವರೋ ತಿಳಿದಿದೆಯಾ? ಸ್ವಲ್ಪ ದಿನಗಳಲ್ಲಿ ಇವೆಲ್ಲಾ ಕೊಳೆತು ಹೋಗಿ ಗೊಬ್ಬರವಾಗಿ ಬದಲಾಗುತ್ತದೆ. ಈ ಗೊಬ್ಬರವನ್ನು ಪಾಠಶಾಲೆಯಲ್ಲಿರುವ ಸಸ್ಯಗಳಿಗೆ ಹಾಕುವರು.

**ನಿಮ್ಮ ಪಾಠಶಾಲೆಯಲ್ಲಿರುವ ಕಸವನ್ನು ಏನು ಮಾಡುವಿರಿ?**



## ಆಹಾರವಾಗಿ ಎಲೆಗಳು

ರಾಬರ್ಟ್ ಶಾಲೆಯಿಂದ ಮನೆಗೆ ಬರುತ್ತಲೇ ಅಡಿಗೆ ಮನೆಯಿಂದ ಸಾಂಬಾರು ಮಾಡುತ್ತಿರುವ ವಾಸನೆ ಬಂದಿತು. ಸಾಂಬಾರಿನಲ್ಲಿ ಕರಿಬೇವು, ಕೊತ್ತಂಬರಿ ಹಾಕಿದ ಕೂಡಲೇ ಇನ್ನಷ್ಟು ಘಮ ಘಮದ ವಾಸನೆ ಬಂದಿತು.

**ವಾಸನೆ ಬರುವ ಎಲೆಗಳ ಹೆಸರು ಹೇಳಿರಿ. ಬರೆಯಿರಿ.**

ನಾವು ಮಾಡಿಕೊಳ್ಳುವ ಅಡುಗೆಯಲ್ಲಿ ಎಲೆಗಳನ್ನು ಬಳಸುವದರಿಂದ ಆಹಾರಕ್ಕೆ ವಾಸನೆಯ ಜೊತೆಗೆ, ಒಳ್ಳೆಯ ರುಚಿಯೂ ಸಹ ಬರುತ್ತದೆ. ಸೊಪ್ಪಿನ ಪದಾರ್ಥಗಳು ಆರೋಗ್ಯಕ್ಕೆ ಬಹಳ ಒಳ್ಳೆಯದು. ಅದಕ್ಕಾಗಿ ವಿಧವಿಧದ ಸೊಪ್ಪುಗಳನ್ನು ಬೇಯಿಸಿ ತಿನ್ನುತ್ತಾರೆ. ಸೊಪ್ಪಿನ ಪದಾರ್ಥಗಳನ್ನು ಬೇಯಿಸುವ ಮೊದಲು ಶುಭ್ರವಾಗಿ ತೊಳೆಯಬೇಕು.

SCERT TELANGANA







ಕೆಳಗಿನ ಚಿತ್ರಗಳನ್ನುನೋಡಿರಿ. ಅವು ಯಾವ ಎಲೆಗಳೆಂದು ಹೇಳಿರಿ. ಅವುಗಳಿಂದ ಏನೇನು ಮಾಡುವರೆಂದು ಹೇಳಿರಿ.










**ನಿಮಗೆ ತಿಳಿದ ಕೆಲವು ಸೊಪ್ಪುಗಳ ಹೆಸರುಗಳನ್ನು ಹೇಳಿರಿ. ಬರೆಯಿರಿ.**

............................  ............................  ............................

............................  ............................  ............................

............................  ............................  ............................

**ಯಾವ ಎಲೆಗಳೆಂದು ಹೇಳಿರಿ ನೋಡೋಣ !**

ಕೊತ್ತಂಬರಿ, ಪುದೀನಾ, ಯೂಕಲಿಪ್ಟಸ್ (ನೀಲಗಿರಿ) ಹುಣಿಸೆ, ಬೇವು, ನಲ್ಲಿಕಾಯಿ, ತುಳಸಿ, ಎಲೆಗಳನ್ನು ಕೆಲವೊಂದನ್ನು ಶೇಖರಿಸಿರಿ.

ನಿಮ್ಮಲ್ಲಿ ಒಬ್ಬರ ಕಣ್ಣಿಗೆ ಪಟ್ಟಿಯನ್ನು ಕಟ್ಟಿರಿ. ಆತನ ಕೈಯಲ್ಲಿ ಎಲೆಯನ್ನು ಕೊಟ್ಟು ರುಚಿ, ವಾಸನೆ ನೋಡಿ ಆ ಎಲೆ ಯಾವುದೆಂದು ಹೇಳಬೇಕೆನ್ನಿರಿ. ಯಾರು ಹೆಚ್ಚು ಎಲೆಗಳನ್ನು ಗುರುತಿಸುತ್ತಾರೋ ನೋಡಿರಿ.







SCERT TELANGANA




## ಎಲೆಗಳಿಂದ ಅಲಂಕಾರ

ನೀವು ಇಲ್ಲಿಯವರೆಗೆ ಎಲೆಗಳ ಆಕಾರ, ಬಣ್ಣ, ರುಚಿ, ವಾಸನೆಯ ಕುರಿತು ತಿಳಿದುಕೊಂಡಿದ್ದೀರಿ ಅಲ್ಲವೇ !

ಯಾವ ಯಾವ ಸಂಧರ್ಭಗಳಲ್ಲಿ ಮನೆಯನ್ನು ಎಲೆಗಳಿಂದ ಅಲಂಕರಿಸುತ್ತಾರೆಂದು ನಿಮಗೆ ಗೊತ್ತೇ? ನಿಮ್ಮ ಮನೆಯನ್ನು ಎಂದಾದರೂ ಹೀಗೆ ಅಲಂಕರಿಸಿದ್ದೀರಾ ?

ಸಂಕ್ರಾಂತಿ ಹಬ್ಬದ ದಿನದಂದು ಕಮಲ ಮನೆಯನ್ನು ಹೇಗೆ ಅಲಂಕರಿಸಿದ್ದಾಳೆಂದು ಕೆಳಗಿನ ಚಿತ್ರದಲ್ಲಿ ನೋಡಿರಿ.



ಮೇಲಿನ ಚಿತ್ರದಲ್ಲಿ ಮನೆಯನ್ನು ಯಾವ ಯಾವ ಎಲೆಗಳಿಂದ ಅಲಂಕರಿಸಿದ್ದಾರೆ ?
ಹಬ್ಬಗಳಲ್ಲಿ ನೀವು ಯಾವ ಸಂದರ್ಭಗಳಲ್ಲಿ ಎಲೆಗಳನ್ನು ಅಲಂಕರಣಕ್ಕಾಗಿ ಉಪಯೋಗಿಸುತ್ತೀರಿ? ನಿಮ್ಮ ಶಾಲೆಯನ್ನು ಎಲೆಗಳಿಂದ ಯಾವ ಯಾವಾಗ ಅಲಂಕರಿಸುತ್ತಾರೆ ? ಇದಕ್ಕಾಗಿ ಯಾವ ಯಾವ ಎಲೆಗಳನ್ನು ಉಪಯೋಗಿಸುತ್ತಾರೆ ?

ಸಾಧಾರಣವಾಗಿ ಹಬ್ಬಗಳು, ಮದುವೆಗಳು, ಜಾತ್ರೆಗಳು ನಡೆಯುವಾಗ ಮನೆಯನ್ನು ಮಾವು, ತೆಂಗಿನ , ಬಾಳೆಯ ಎಲೆಗಳಿಂದ ಅಲಂಕರಿಸುತ್ತಾರೆ. ಹೀಗೆ ಅಲಂಕರಿಸುವುದರಿಂದ ಮನೆಯು ಅಂದವಾಗಿ ಕಾಣುತ್ತದೆ.



## ಎಲೆಗಳಿಂದ ಬಣ್ಣಗಳು



ಆ ದಿನ ಹಾರಿಕಳ ಹುಟ್ಟಿದ ದಿನ, ಹೊಸ ಬಟ್ಟೆ ಧರಿಸಿದ್ದಾಳೆ. ಕೈಗಳಿಗೆ ಗೋರಂಟಿ ಎಲೆ ಹಾಕಿಕೊಂಡಿದ್ದಾಳೆ. ಪಾಠಶಾಲೆಯಲ್ಲಿರುವ ಮಕ್ಕಳೆಲ್ಲರಿಗೂ ತನ್ನ ಕೈಗಳಿಗೆ ಹಾಕಿಕೊಂಡಿರುವ ಸುಂದರವಾದ ಮದರಂಗಿ ಎಲೆಯ ಡಿಜೈನನ್ನು ತೋರಿಸಿದಳು. ಹಾರಿಕಳನ್ನು ಮಕ್ಕಳೆಲ್ಲರೂ ಮೆಚ್ಚಿಕೊಂಡರು. ಬಹಳ ಚೆನ್ನಾಗಿ ಇದೆ ಎಂದರು.





SCERT TELANGANA

ನೀವು ಸಹ ಹಾರಿಕಳ ಹಾಗೆ ಕೈಗಳಿಗೆ ಮದರಂಗಿ ಎಲೆಗಳಿಂದ ಡಿಜೈನ್‌ಗಳನ್ನು ಹಾಕಿ ಕೊಳ್ಳ ಬೇಕೆಂದುಕೊಂಡಿದ್ದೀರಾ ? ಹಾಗಾದರೆ ನಿಮ್ಮ ತಾಯಿಯನ್ನು ಕೇಳಿ ಕೈಗಳಿಗೆ ಅಂದವಾಗಿ ಮದರಂಗಿ ಎಲೆಯಿಂದ ಡಿಜೈನ್‌ಗಳನ್ನು ಹಾಕಿಸಿಕೊಳ್ಳಿರಿ. ನಿಮ್ಮ ಸ್ನೇಹಿತರಿಗೆ ತೋರಿಸಿರಿ.



## ಎಲೆಗಳಿಂದ ಆಕಾರಗಳು.

ಎಲೆಗಳನ್ನು ಅಲಂಕರಣಕ್ಕಾಗಿ ಬಳಸುತ್ತೇವೆಂದು ತಿಳಿದುಕೊಂಡಿದ್ದೀರಲ್ಲವೇ ! ಆದರೆ ಎಲೆಗಳಿಂದ ವಿಧವಿಧವಾದ ಆಕಾರಗಳನ್ನು ಸಹ ಮಾಡಬಹುದು, ರಾಬರ್ಟ್ ಪಾಠಶಾಲೆಯಲ್ಲಿ ಉದುರಿದ ಎಲೆಗಳೆನ್ನೆಲ್ಲಾ ಶೇಖರಿಸಿದ್ದಾನೆ. ಅವುಗಳನ್ನು ಬಿಳಿಕಾಗದದ ಮೇಲೆ ಅಂಟಿಸಿ ಚಿತ್ರ ಮಾಡಿದ್ದಾನೆ. ರಾಬರ್ಟ್ ಮಾಡಿದ ಆಕಾರವನ್ನು ನೋಡಿ ಉಳಿದ ಮಕ್ಕಳೆಲ್ಲರೂ ಮೆಚ್ಚಿಕೊಂಡರು. ರಾಬರ್ಟ್ ಎಲೆಗಳಿಂದ ಮಾಡಿದ ಆಕಾರಗಳನ್ನು ನೋಡೋಣವೇ!





ನೀವು ಸಹ ಎಲೆಗಳನ್ನು ಶೇಖರಿಸಿರಿ. ಬಗೆ ಬಗೆಯ ಪ್ರಾಣಿಗಳ, ಪಕ್ಷಿಗಳ ಆಕಾರಗಳನ್ನು ತಯಾರು ಮಾಡಿರಿ. ಅವುಗಳನ್ನು ಎಲ್ಲರಿಗೂ ತೋರಿಸಿರಿ. ಗೋಡೆ ಪತ್ರಿಕೆಯಲ್ಲಿ ಪ್ರದರ್ಶಿಸಿರಿ.

SCERT TELANGANA




## ಎಲೆಗಳಿಂದ ಆಟಗಳು


ರಾಬರ್ಟ್ ಗಾಳಿ ಹೂವಿನಿಂದ ಆಡುವುದನ್ನು ಹಾರಿಕ ನೋಡಿದಳು. ಯಾವ ಅಂಗಡಿಯಲ್ಲಿ ಕೊಂಡು ಕೊಂಡಿದ್ದೀಯಾ ಎಂದು ಕೇಳಿದಳು. ನಾನೇ ತಯಾರು ಮಾಡಿದೆ, ಎಂದನು ರಾಬರ್ಟ್. ನನಗೂ ಸಹ ಕಲಿಸು ಎಂದು ಕೇಳಿದಳು. ಹಾರಿಕ, ಗಾಳಿ ಹೂವನ್ನು ರಾಬರ್ಟ್ ಹೇಗೆ ತಯಾರು ಮಾಡಿದನೋ ನೋಡೋಣ

1) ಒಣಗಿದ ತಾಳೆ ಎಲೆಯನ್ನು ತೆಗೆದುಕೊಂಡು ಬೆರಳಷ್ಟು ಉದ್ದ ಇರುವಂತೆ ತುಂಡು ಮಾಡಿರಿ.





2) ತುಂಡು ಮಾಡಿದ ತಾಳೆ ಎಲೆಗೆ ಒಂದು ಮುಳ್ಳನ್ನು ಇಲ್ಲವೇ ಸಣ್ಣ ಮೊಳೆಯನ್ನು ಚುಚ್ಚಬೇಕು.



3) ಮುಳ್ಳು ಇಲ್ಲವೆ ಸಣ್ಣ ಮೊಳೆ ಚುಚ್ಚಿದ ತಾಳೆ ಎಲೆಯನ್ನು ಒಂದು ದಂಟಿಗೆ ಇಲ್ಲವೆ ಬೆಂಡು ಮೆತ್ತಗೆ ಇರುವ ಕಟ್ಟಿಗೆಗೆ ಚುಚ್ಚಬೇಕು.



4) ಹೀಗೆ ತಾಳೆ ಗರಿಯಿಂದ ತಯಾರು ಮಾಡಿದ ಹೂವಿನಿಂದ ಓಡಿದರೆ ಅದು ಗಿರಗಿರ ತಿರುಗುತ್ತದೆ.



ಎಲೆಗಳಿಂದ ಇನ್ನೂ ಯಾವ ಯಾವ ಆಟದ ವಸ್ತುಗಳನ್ನು ತಯಾರು ಮಾಡಬಹುದೆಂದು ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ತಯಾರು ಮಾಡಿರಿ.

### ಮುಖ್ಯ ಪದಗಳು

| | | | | | |
|---|---|---|---|---|---|
| 1 | ಕೊನೆಗಳು | 2 | ತುದಿಗಳು | 3 | ಗಡಸುತನ |
| 4 | ನುಣಪುತನ | 5 | ಎಳೆ ಎಲೆಗಳು | 6 | ಕಂಪೋಸ್ಟು ಕುಣಿ |
| 7 | ಗೊಬ್ಬರ | 8 | ಬಲಿತ ಎಲೆಗಳು | 9 | ಅಲಂಕಾರ |

### ನಾವು ಕಲಿತು ಕೊಂಡಿರುವವು

- ಎಲೆಗಳು ವಿವಿಧರೀತಿ ಇರುತ್ತವೆ. ಕೆಲವು ಎಲೆಗಳ ತುದಿಗಳು ನುಣಪಾಗಿ, ಇನ್ನು ಕೆಲವು ಗರಗಸದ (ರಂಪ) ತುದಿಯಂತೆ ಇರುತ್ತವೆ. ಕೆಲವು ಎಲೆಗಳ ಕೊನೆಗಳು ಚೂಪಾಗಿ, ಇನ್ನು ಕೆಲವು ದುಂಡಾಗಿ ಇರುತ್ತವೆ.
- ಸಾಧಾರಣವಾಗಿ ಚಿಗುರು ಎಲೆಗಳು ಎಳೆ ಕೆಂಪು ಬಣ್ಣದಲ್ಲಿ, ಬಲಿತ ಎಲೆಗಳು ಹಸಿರು ಬಣ್ಣದಲ್ಲಿ, ಉದುರುವ ಎಲೆಗಳು ಅರಿಶಿನ ಬಣ್ಣದಲ್ಲಿ ಇರುತ್ತವೆ.
- ಕರಿಬೇವು, ಕೊತ್ತಂಬರಿ, ಪಾಲಾಕ್ ಸೊಪ್ಪು, ಅರಿವೆಸೊಪ್ಪು ವಂತಹ ಸೊಪ್ಪುಗಳು ತಿನ್ನುವುದು ಆರೋಗ್ಯಕ್ಕೆ ಬಹಳ ಒಳ್ಳೆಯದು. ಸೊಪ್ಪುಗಳನ್ನು ಬೇಯಿಸುವ ಮೊದಲು ಶುಭ್ರವಾಗಿ ತೊಳೆಯಬೇಕು.
- ಬಾಳೆ, ಮಾವಿನ ಎಲೆಗಳನ್ನು ಅಲಂಕರಣಕ್ಕಾಗಿ ಬಳಸುತ್ತಾರೆ. ಗೋರಂಟಿ ಎಲೆಗಳನ್ನು ಕೈಗಳಿಗೆ ಹಾಕಿ ಕೊಳ್ಳುವರು.
- ಉದುರಿದ ಮರದ ಎಲೆಗಳನ್ನು ಸುಡದೇ , ಕಂಪೋಷ್ಟು ಕುಣಿಯಲ್ಲಿ ಹಾಕಿ ಮಣ್ಣಿನಿಂದ ಮುಚ್ಚಬೇಕು.

SCERT TELANGANA






## ಇವು ಮಾಡಿರಿ



### ವಿಷಯಾವಗಾಹನೆ

1. ಗರಗಸದ (ರಂಪ) ತುದಿಯಂತೆ ಇರುವ ಕೆಲವು ಎಲೆಗಳ ಹೆಸರುಗಳನ್ನು ಬರೆಯಿರಿ.
2. ತಾವರೆ, ದಾಸವಾಳ ಎಲೆಗಳ ನಡುವೆ ಇರುವ ಹೋಲಿಕೆ, ವ್ಯತ್ಯಾಸಗಳನ್ನು ಬರೆಯಿರಿ.



3. ಆಹಾರವಾಗಿ ಉಪಯೋಗಿಸುವ ನಾಲ್ಕು ಬಗೆಯ ಎಲೆಗಳಿಗೆ ಉದಾಹರಣೆಗಳನ್ನು ಕೊಡಿರಿ.
4. ಕೆಳಗಿನ ಪಟ್ಟಿಯಲ್ಲಿ ಕೆಲವು ಎಲೆಗಳ ಹೆಸರುಗಳು ಇವೆ. ಅವು ಯಾವುವು?

| | | | | | |
|---|---|---|---|---|---|
| ಕೊ | ತ್ತಂ | ಬ | ರಿ | ಮೆಂ | ಪ |
| ಹು | ಣಿ | ಸೆ | ಬಾ | ತೆ | ಪಾ |
| ಪು | ದೀ | ನಾ | ಳೆ | ಸೊ | ಲ |
| ಬೇ | ವು | ತೆಂ | ಗು | ಪ್ಪು | ಕ್ |
| ಶ್ಯಾ | ವೆ | ತು | ಲ | ಸಿ | ಸೊ |
| ಮಾ | ಅ | ರಿ | ವೆ | ಸೊ | ಪ್ಪು |

- ಇವುಗಳಲ್ಲಿ ಯಾವನ್ನು ವಾಸನೆಯ ಮೂಲಕ ಗುರುತಿಸಬಹುದು?
- ಅಲಂಕರಣಕ್ಕಾಗಿ ಯಾವನ್ನು ಬಳಸುತ್ತಾರೆ?

5. ನಿಮಗೆ ತಿಳಿದ ಕೆಲವು ಎಲೆಗಳ ಹೆಸರುಗಳನ್ನು ಬರೆದು ಅವು ಯಾವುದಕ್ಕೆ ಉಪಯೋಗವಾಗುತ್ತವೆ ಎಂದು ಬರೆಯಿರಿ.
6. ಉದುರಿದ ಎಲೆಗಳನ್ನು ಏನು ಮಾಡಬೇಕು?




SCERT TELANGANA




## ಚಿತ್ರಗಳನ್ನು ಬಿಡಿಸಿರಿ. ಬಣ್ಣವನ್ನು ಹಾಕಿರಿ.

1. ನಿಮಗೆ ಇಷ್ಟವಾದ ಎರಡು ಎಲೆಗಳ ಚಿತ್ರ ಬಿಡಿಸಿ, ಅವುಗಳ ಹೆಸರು ಬರೆಯಿರಿ.

2. ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಬಿಡಿಸಿ. ಬಣ್ಣ ಹಾಕಿರಿ.







## ಸಮಾಚಾರ ಕೌಶಲ್ಯ –ಪ್ರಾಜೆಕ್ಟ್ ಕೆಲಸ

1. ನಿಮ್ಮ ಸ್ನೇಹಿತರ ಮನೆಯಲ್ಲಿ ಕಳೆದ ಎರಡು ದಿನಗಳಿಂದ ಯಾವ ಯಾವ ಸೊಪ್ಪಿನಿಂದ ಆಹಾರ ಪದಾರ್ಥವನ್ನಾಗಿ ಮಾಡಿದ್ದಾರೆಂಬ ವಿವರಗಳನ್ನು ಶೇಖರಿಸಿ.ಪಟ್ಟಿಯಲ್ಲಿ ನಮೋದಿಸಿ.

| ಕ್ರ.ಸಂ | ಸ್ನೇಹಿತನ ಹೆಸರು | ಸೊಪ್ಪಿನ ಹೆಸರು | ತಯಾರಿಸಿದ ಪದಾರ್ಥ |
|---|---|---|---|
| | | | |

- ಎಷ್ಟು ಜನರ ಮನೆಯಲ್ಲಿ ಸೊಪ್ಪನ್ನು ಬಳಸಿದ್ದಾರೆ ?
- ಹೆಚ್ಚಿನ ಜನರ ಮನೆಯಲ್ಲಿ ಯಾವ ಸೊಪ್ಪು ತರಕಾರಿಗಳಿಂದ ಆಹಾರ ಪದಾರ್ಥಗಳನ್ನು ಮಾಡಿದ್ದಾರೆ?

2. ಎಲೆಗಳಿಂದ ವಿವಿಧ ಆಕಾರಗಳನ್ನು ತಯಾರು ಮಾಡಿರಿ. ಚಾರ್ಟ್ ಮೇಲೆ ಅಂಟಿಸಿರಿ. ತರಗತಿಯಲ್ಲಿ ಪ್ರದರ್ಶಿಸಿರಿ.

3. ಕೆಲವು ಎಲೆಗಳನ್ನು ಶೇಖರಿಸಿ, ನೋಟು ಪುಸ್ತಕದಲ್ಲಿ ವಾರದವರೆಗೆ ಇರಿಸಿರಿ. ಚಾರ್ಟ್‌ಮೇಲೆ ಅಂಟಿಸಿ ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.

SCERT TELANGANA







## ಮಾಡಿ ನೋಡಿರಿ – ಏನು ಆಗಿದೆಯೋ ಹೇಳಿರಿ.

1. ದಾಸವಾಳದ ಎಲೆಗಳನ್ನು ರುಬ್ಬಿ ಎಡಗೈಗೆ, ಮದರಂಗಿ ಎಲೆಗಳನ್ನು ರುಬ್ಬಿ ಬಲಗೈಗೆ ಇಟ್ಟುಕೊಳ್ಳಿರಿ. ಎರಡು ಗಂಟೆಯ ನಂತರ ನೋಡಿರಿ. ಏನಾಗಿದೆಯೋ ಹೇಳಿರಿ.

2. ಯಾವುದಾದರೂ ಒಂದು ಎಲೆಯನ್ನು ಹದಿನೈದು ದಿನಗಳ ವರೆಗೆ ಹಳೆಯ ನೋಟು ಪುಸ್ತಕದಲ್ಲಿ ಇಡಿರಿ. ಯಾವ ಬದಲಾವಣೆ ಆಗಿದೆಯೋ ಎಂದು ಬರೆಯಿರಿ.

3. ಪರಿಸರದಲ್ಲಿ ಸಿಗುವ ಎಲೆಗಳನ್ನು ಬಿಸಿ ನೀರಿನಲ್ಲಿ ಹಾಕಿರಿ. ಸ್ವಲ್ಪ ಸಮಯದ ನಂತರ ತೆಗೆದು ನೋಡಿರಿ. ಎಂತಹ ಬದಲಾವಣೆಯನ್ನು ಗಮನಿಸಿರುವಿರಿ ?



## ಪ್ರಶಂಸೆ

1. ನಿಮ್ಮ ತರಗತಿಯಲ್ಲಿ ಎಲೆಗಳಿಂದ ಯಾರು ಅಂದವಾದ ಚಿತ್ರಗಳನ್ನು ತಯಾರು ಮಾಡಿರುವರು ? ಯಾವ ಚಿತ್ರಗಳನ್ನು ತಯಾರು ಮಾಡಿರುವರು? ಅವು ಅಂದವಾಗಿವೆ ಎಂದು ನಿಮಗೆ ಏಕೆ ಅನಿಸುತ್ತದೆ?
2. ನಿಮ್ಮ ಮನೆಯಲ್ಲಿ /ಶಾಲೆಯಲ್ಲಿ ಎಲೆಗಳು ಉದುರಿದಾಗ ನೀವು ಏನು ಮಾಡುವಿರಿ ?



## ಪ್ರಶ್ನಿಸುವುದು

1. ನೀರಜಳ ಮನೆಗೆ ಹರಣಿ ಬಂದಳು, ಅವರ ಮನೆಯಲ್ಲಿ ವಿವಿಧ ಸಸ್ಯಗಳ ಎಲೆಗಳನ್ನು ನೋಡಿದಳು. ಕೆಲವು ಎಲೆಗಳನ್ನು ನೋಡಿ ಆಶ್ಚರ್ಯಪಟ್ಟಳು. ಅವುಗಳ ಬಗ್ಗೆ ನೀರಜಳನ್ನು ಕೇಳಿದಳು. ಹರಣಿ ಯಾವ ಯಾವ ಪ್ರಶ್ನೆಗಳನ್ನು ಕೇಳಿರಬಹುದು. ಆ ಪ್ರಶ್ನೆಗಳನ್ನು ಬರೆಯಿರಿ. ನೀರಜ ಏನು ಉತ್ತರಗಳನ್ನು ಹೇಳಿರಬಹುದು?



## ನಾನು ಇವನ್ನು ಮಾಡಬಲ್ಲೆನೇ ?



| | | |
|---|---|---|
| 1. | ಮಾದರಿಯನ್ನು ಹಿಡಿದು ಎಲೆಗಳನ್ನು ವರ್ಗೀಕರಿಸಬಲ್ಲೆನು. | ಹೌದು/ಇಲ್ಲ |
| 2. | ಎಲೆಗಳ ಉಪಯೋಗಗಳನ್ನು ವಿವರಿಸಬಲ್ಲೆನು. | ಹೌದು/ಇಲ್ಲ |
| 3. | ವಿಧವಿಧದ ಎಲೆಗಳ ಚಿತ್ರಗಳನ್ನು ಬಿಡಿಸಬಲ್ಲೆನು. | ಹೌದು/ಇಲ್ಲ |
| 4. | ಎಲೆಗಳಿಗೆ ಸಂಬಂಧಿಸಿದ ಸಮಾಚಾರವನ್ನು ಶೇಖರಿಸಿ, ಪಟ್ಟಿಯಲ್ಲಿ ಬರೆಯಬಲ್ಲೆನು. | ಹೌದು/ಇಲ್ಲ |
| 5. | ಸೊಪ್ಪುಗಳನ್ನು ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು ಪ್ರತಿದಿನ ಸೊಪ್ಪುಗಳನ್ನು ತಿನ್ನುತ್ತೇನೆ | ಹೌದು/ಇಲ್ಲ |
| 6. | ಎಲೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಬಲ್ಲೆನು. | ಹೌದು/ಇಲ್ಲ |

SCERT TELANGANA



# 7. ನಾವು ಏನೇನು ತಿನ್ನುತ್ತೇವೆ !



ರವಿ ಎರಡು ದಿನಗಳಿಂದ ಶಾಲೆಗೆ ಬಂದಿಲ್ಲ.ಆದಿನವೇ ಶಾಲೆಗೆ ಬಂದನು. ಮಧ್ಯಾಹ್ನ ಊಟದ ಸಮಯದಲ್ಲಿ ರವಿ ಹತ್ತಿರ ರಾಮು, ಮೇರಿ, ರೋಜಾ ಬಂದರು.



**ರೋಜಾ :** ರವಿ! ಎರಡು ದಿನಗಳಿಂದ ಶಾಲೆಗೆ ಏತಕ್ಕಾಗಿ ಬಂದಿಲ್ಲ ?

ರವಿ : ನಮ್ಮ ಮಾವನ ಮದುವೆಗಾಗಿ ಭುವನಗಿರಿಗೆ ಹೋಗಿದ್ದೆವು.ಅದಕ್ಕಾಗಿ ಬರಲಿಲ್ಲ.

ಮೇರಿ : ನಿಮ್ಮ ಮಾವನ ಮದುವೆಗೆ ಹೋಗಿದ್ದೀಯಾ1 ಮದುವೆ ಚೆನ್ನಾಗಿ ನಡೆಯಿತೇ?

ರವಿ : ಓ ! ಬಹಳ ಚೆನ್ನಾಗಿ ನಡೆಯಿತು. ಮದುವೆಯಲ್ಲಿ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ವಿಧವಿಧವಾದ ಅಡುಗೆ ಮಾಡಿದ್ದರು.

ರಾಮು : ಮದುವೆಯಲ್ಲಿ ಏನೇನು ತಿಂದಿದ್ದೀಯಾ?

ರವಿ : ಸಾಕಷ್ಟು ಬಗೆಯ ಅಡುಗೆಗಳು ತಿಂದಿದ್ದೀನಿ.








ರವಿ ಮದುವೆಯಲ್ಲಿ ಏನೇನು ತಿಂದಿರಬಹುದೆಂದು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಬೆಳಿಗ್ಗೆ | ಮಧ್ಯಾಹ್ನ | ಸಾಯಂಕಾಲ | ರಾತ್ರಿ |
|---|---|---|---|
| | | | |

ಮದುವೆಗಳಲ್ಲಿ ತಿನ್ನುವದೆಲ್ಲಾ ಪ್ರತಿದಿನ ನಮ್ಮ ಮನೆಗಳಲ್ಲಿ ತಿನ್ನುತ್ತೇವೆಯೇ, ತಿನ್ನುವದಿಲ್ಲವೇ?ಏಕೆ?

SCERT TELANGANA







ನೀವು ನಿಮ್ಮ ಮನೆಯಲ್ಲಿ ಪ್ರತಿದಿನ ಏನು ತಿನ್ನುತ್ತೀರೆಂದೂ ಕೆಳಗಿನ ಪಟ್ಟಿಯಲಿ ಬರೆಯಿರಿ

| ಬೆಳಿಗ್ಗೆ | ಮಧ್ಯಾಹ್ನ | ಸಾಯಂಕಾಲ | ರಾತ್ರಿ |
|---|---|---|---|
| | | | |

ನೀವು ಏನೇನು ತಿನ್ನುತ್ತೀರೋ ಎಂದು ಬರೆದಿದ್ದೀರಲ್ಲವೇ!

ಹಾಗಾದರೆ ನಿಮ್ಮ ಸ್ನೇಹಿತರು ಯಾವ ಯಾವಾಗ ಏನೇನು ತಿನ್ನುತ್ತಾರೆಂದು ತಿಳಿದುಕೊಂಡು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಸ್ನೇಹಿತರ ಹೆಸರು | ಬೆಳಿಗ್ಗೆ | ಮಧ್ಯಾಹ್ನ | ರಾತ್ರಿ |
|---|---|---|---|
| | | | |
| | | | |
| | | | |
| | | | |
| | | | |

ಹೆಚ್ಚಿನ ಜನರು ಪ್ರತಿದಿನ ಬೆಳಿಗ್ಗೆ ತಿನ್ನುವುದೇನು? ಹಾಗೆಯೇ ಮಧ್ಯಾಹ್ನ, ರಾತ್ರಿ ಏನೇನು ತಿನ್ನುತ್ತಾರೆ ?

### ನಾವು ಆಹಾರವನ್ನು ಏಕೆ ತಿನ್ನಬೇಕು ನಿಮಗೆ ಗೊತ್ತೇ ?

ರವಿ ತಡವಾಗಿ ನಿದ್ದೆಯಿಂದ ಎದ್ದನು. ಬೇಗನೆ ಸ್ನಾನ ಮಾಡಿ ಶಾಲೆಗೆ ಹೋದನು. ಆಲಸ್ಯ ಆಗುವದೆಂದು ಏನೂ ತಿನ್ನದೇ ಹೋದನು. ಶಾಲೆಯಲ್ಲಿ ರವಿಗೆ ಏನು ಅನಿಸಿರಬಹುದೆಂದು ಹೇಳಿರಿ.

ಎಂದಾದರೂ ನೀವು ಏನೂ ತಿನ್ನದೇ ಶಾಲೆಗೆ ಹೋಗಿದ್ದೀರಾ ! ಆಗ ನಿಮಗೆ ಏನು ಅನಿಸಿತು ?

ನಾವು ಏತಕ್ಕಾಗಿ ತಿನ್ನಬೇಕು ಗೊತ್ತಾ ? ನಾವು ಪ್ರತಿ ದಿನ ಅನೇಕ ಕೆಲಸಗಳನ್ನುಮಾಡಿರುತ್ತೇವೆ. ನಡೆಯುವುದು, ಆಡಿಕೊಳ್ಳುವುದು, ಓಡುವುದು, ನೀರು ತರುವಂತಹ ಅನೇಕ ಕೆಲಸಗಳನ್ನು ಮಾಡುತ್ತೇವೆ. ಈ ಕೆಲಸಗಳೆನ್ನೆಲ್ಲಾ ಮಾಡುವುದಕ್ಕೆ ನಮಗೆ ಶಕ್ತಿ ಬೇಕು. ಇದಕ್ಕಾಗಿ ನಮಗೆ ಆಹಾರ ಅವಶ್ಯಕ.



### ನಾವು ತಿನ್ನುವ ಆಹಾರ ಎಲ್ಲಿಂದ ಬರುತ್ತದೆ.?

ನಾವು ತಿನ್ನುವ ಆಹಾರ ಎಲ್ಲಿಂದ ಬರುತ್ತದೆ ಎಂದು ನಿಮಗೆ ಗೊತ್ತೇ ? ನಾವು ಆಹಾರವಾಗಿ ತಿನ್ನುವ ತರಕಾರಿಗಳು, ಹಣ್ಣುಗಳು, ಗಡ್ಡೆಗೆಣಸುಗಳಂತಹವು ಸಸ್ಯಗಳಿಂದ ಬರುತ್ತವೆ. ಹಾಗೆಯೇ ಬರುವ ಹಾಲು, ಮೊಟ್ಟೆ, ಮಾಂಸವು ಪ್ರಾಣಿಗಳಿಂದ ಬರುತ್ತದೆ.

ಪಕ್ಕದ ಪುಟದಲ್ಲಿನ ಚಿತ್ರಗಳನ್ನು ನೋಡಿರಿ. ಅವು ಏನೆಂದು ಹೇಳಿರಿ ಪ್ರಾಣಿಗಳಿಂದ ಸಿಗುವದಕ್ಕೆ »◯µ ಸುತ್ತಿರಿ. ಸಸ್ಯಗಳಿಂದ ಸಿಗುವುದಕ್ಕೆ '✓' ಹಾಕಿರಿ.

SCERT TELANGANA





**ಸಸ್ಯಗಳಿಂದ ಸಿಗುವವು ಯಾವುವು? ಪ್ರಾಣಿಗಳಿಂದ ಸಿಗುವವು ಯಾವುವು?**





















SCERT TELANGANA







ರವಿಗೆ ಅವನ ತಾಯಿ ಅನ್ನ ಬಡಿಸಿದಳು. ಕೋಳಿ ಮೊಟ್ಟೆಯ ಸಾರು ಹಾಕಿದಳು. ರವಿ ಅವನ ತಾಯಿಗೆ ಕೋಳಿಮೊಟ್ಟೆಯ ಸಾರನ್ನು ಹೇಗೆ ಮಾಡುತ್ತಾರೆಂದು ಕೇಳಿದನು.ಕೋಳಿ ಮೊಟ್ಟೆಯ ಸಾರಿನಲ್ಲಿ ಕೋಳಿಮೊಟ್ಟೆ, ಹಸಿ ಮೆಣಸಿನಕಾಯಿ, ಎಣ್ಣೆ, ಅರಿಶಿನ, ಈರುಳ್ಳಿ, ಟಮೋಟಾ ಮೊದಲಾದವುಗಳನ್ನು ಹಾಕಿ ಮಾಡುತ್ತಾರೆಂದು ಹೇಳಿದಳು, ಇದರಲ್ಲಿ ಕೋಳಿಮೊಟ್ಟೆ ಕೋಳಿಯಿಂದ ಸಿಗುತ್ತದೆ. ಹಾಗೆಯೆ ಹಸಿ ಮೆಣಸಿನಕಾಯಿ, ಅರಿಸಿನ, ಈರುಳ್ಳಿ, ಟಮೋಟ ಮೊದಲಾದವು ಸಸ್ಯಗಳಿಂದ ಸಿಗುತ್ತವೆ. ಕೆಳಗೆ ಕೆಲವು ಆಹಾರ ಪದಾರ್ಥಗಳ ಹೆಸರುಗಳು ಕೊಟ್ಟಿವೆ. ಅವು ಯಾವ ಮೂಲದಿಂದ ಬಂದ ಪದಾರ್ಥದಿಂದ ತಯಾರಿಸುತ್ತಾರೆಂದು ಕೆಳಗಿನ ಪಟ್ಟಿಯಲ್ಲಿ '✓' ಹಾಕಿರಿ.


| ಆಹಾರ ಪದಾರ್ಥ | ಪ್ರಾಣಿಗಳಿಂದ | ಸಸ್ಯಗಳಿಂದ | ಎರಡರಿಂದ |
|---|---|---|---|
| ಅನ್ನ | | ✓ | |
| ಚಿಕನ್ ಬಿರ್ಯಾನಿ | | | ✓ |
| ಬೇಳೆ | | | |
| ಸಾಂಬಾರು | | | |
| ಆಮ್ಲೇಟ್ | | | |
| ಹಾಗಲಕಾಯಿ ಪಲ್ಯ | | | |
| ಆಲುಗಡ್ಡೆ ಪಲ್ಯ | | | |
| ತುಪ್ಪ | | | |
| ಕೇಕು | | | |
| ಬ್ರೆಡ್ | | | |
| ಮೊಸರು | | | |
| ಹಾಲು | | | |
| ಮೊಸರು ಬಜ್ಜಿ | | | |
| ಉಪ್ಪಿನಕಾಯಿ | | | |
| ಮೀನು ಸಾರು | | | |
| ಕೋಳಿ ಸಾರು | | | |

SCERT TELANGANA





## ನಾವು ಏಕೆ ಆಹಾರವನ್ನು ಬೇಯಿಸಿ ತಿನ್ನುತ್ತೇವೆ?



ಆಹಾರವು ಎಲ್ಲಿಂದ ಬರುತ್ತದೆಯೆಂದು ತಿಳಿದುಕೊಂಡಿದ್ದೀರಲ್ಲವೇ ! ಹಾಗಾದರೆ ಬೇಯಿಸಿ ತಿನ್ನುವ ಆಹಾರ ಯಾವುದು, ಬೇಯಿಸದೇ ತಿನ್ನುವ ಆಹಾರ ಯಾವುದೆಂದು ತಿಳಿದುಕೊಳ್ಳೋಣ.

ಮೇರಿ ಸಾಯಂಕಾಲ ಶಾಲೆಯಿಂದ ಮನೆಗೆ ಬಂದಳು. ಮೇರಿಯ ಜೊತೆಗೆ ಅವಳ ಸ್ನೇಹಿತರಾದ ರೋಜಾ, ರವಿ, ರಾಮು ಸಹ ಬಂದರು, ತಿನ್ನುವದಕ್ಕೆ ಏನಾದರೂ ಇದೆಯಾ ಎಂದು ತನ್ನ ತಾಯಿಯನ್ನು ಮೇರಿ ಕೇಳಿದಳು. ಅಲ್ಮಾರಾದಲ್ಲಿ ಇವೆ, ಹೋಗಿ ನಿಮಗೆ ಇಷ್ಟವಾದವುಗಳನ್ನು ತೆಗೆದುಕೊಂಡು ತಿನ್ನಿರಿ ಎಂದು ಹೇಳಿದಳು. ಅಲ್ಮಾರದಲ್ಲಿ ಮೇರಿ ಏನೇನು ನೋಡಿರಬಹುದು. ಏನೇನು ತಿಂದಿರಬಹುದೆಂದು ಊಹಿಸಿರಿ. ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ನೋಡಿರುವುದು | ತಿಂದಿರುವುದು |
|---|---|
| | |

ಮೇಲೆ ಇರುವದರಲ್ಲಿ ನಿಮಗೆ ಏನೇನು ಇಷ್ಟವೋ ಅದರ ಹೆಸರು ಬರೆಯಿರಿ.

ನಾವು ಪ್ರತಿ ದಿನ ಅನ್ನ, ಬೇಳೆ, ಪಲ್ಯ, ಕಡಲೆಬೇಳೆ, ಹಾಲು, ಶೇಂಗ ಹೀಗೆ ವಿವಿಧ ಆಹಾರ ಪದಾರ್ಥಗಳನ್ನು ತಿನ್ನುತ್ತಿರುತ್ತೇವೆ, ಅದರಲ್ಲಿ ಬೇಯಿಸಿ ತಿನ್ನುವ, ಬೇಯಿಸದೇ ತಿನ್ನುವವು ಇರುವವು ಅಲ್ಲವೇ!



ನೀವು ತಿನ್ನುವುದರಲ್ಲಿ ಬೇಯಿಸಿ ತಿನ್ನುವ, ಬೇಯಿಸದೇ ತಿನ್ನುವವು ಯಾವುವು ಎಂದು ಕೆಳಗಿನ ಪಟ್ಟಿಕೆಯಲ್ಲಿ ಬರೆಯಿರಿ.

| ಬೇಯಿಸಿ ತಿನ್ನುವವು | ಬೇಯಿಸದೇ ತಿನ್ನುವವು |
|---|---|
| | |

SCERT TELANGANA





ಕೆಲವು ಆಹಾರ ಪದಾರ್ಥಗಳನ್ನು ಬೇಯಿಸಿ ತಿನ್ನುತ್ತೇವೆ, ಇನ್ನೂ ಕೆಲವನ್ನು ಬೇಯಿಸದೇ ತಿನ್ನಬಹುದು, ಹೀಗೆ ಕೆಲವು ಆಹಾರ ಪದಾರ್ಥಗಳನ್ನು ಬೇಯಿಸಿದ ನಂತರವೇ ಏತಕ್ಕಾಗಿ ತಿನ್ನಬೇಕು. ನಿಮಗೆ ತಿಳಿದಿದೆಯೇ? ಆಲೋಚಿಸಿರಿ.

ಬೇಯಿಸುವದರಿಂದ ಆಹಾರವು ರುಚಿಯಾಗಿ ಇರುತ್ತದೆ. ಸುಲಭವಾಗಿ ಜೀರ್ಣವಾಗುತ್ತದೆ. ಬೇಯಿಸದೆ ತಿಂದರೆ ಕೆಲವು ಜೀರ್ಣ ಆಗುವುದಿಲ್ಲ . ಆಹಾರ ಪದಾರ್ಥಗಳನ್ನು ಬೇಯಿಸಿ ತಿನ್ನಬೇಕು. ಆದರೆ ಹೆಚ್ಚಾಗಿ ಬೇಯಿಸಬಾರದು. ಹೆಚ್ಚಾಗಿ ಬೇಯಿಸುವುದರಿಂದ ಅದರಲ್ಲಿರುವ ಪೋಷಕ ಪದಾರ್ಥಗಳು ನಾಶವಾಗುತ್ತವೆ.



### ಯಾವುದರಲ್ಲಿ ಬೇಯಿಸುತ್ತಾರೆ ?

ಅನ್ನ ಮಾಡಬೇಕಾದರೆ, ಬೇಳೆ, ಪಲ್ಯ ಹೀಗೆ ಏನು ಮಾಡ ಬೇಕಾದರೂ ಅಡುಗೆ ಪಾತ್ರೆಗಳು ಬೇಕಾಗುತ್ತವೆ. ಆಹಾರ ಬೇಯಿಸುವುದಕ್ಕೆ ನಿಮ್ಮ ಮನೆಯಲ್ಲಿ ಯಾವ ಯಾವ ಅಡುಗೆ ಪಾತ್ರೆಗಳು ಇರುವವು?

ಕೆಳಗಿನ ಚಿತ್ರ ನೋಡಿರಿ. ಈ ಚಿತ್ರದಲಿ ಬಗೆ ಬಗೆಯ ಅಡುಗೆ ಪಾತ್ರೆಗಳು ಅಡಗಿ ಕೊಂಡಿವೆ. ಚಿತ್ರದಲ್ಲಿ ಚುಕ್ಕೆ ಇರುವ ಭಾಗವನ್ನು ನಿಮಗೆ ಇಷ್ಟವಾದ ಬಣ್ಣದಿಂದ ತುಂಬಿರಿ. ಬಣ್ಣ ತುಂಬಿದ ನಂತರ ಯಾವ ಯಾವ ಪಾತ್ರೆಗಳು ಕಾಣಿಸಿವೆಯೋ ಹೇಳಿರಿ.



ಯಾವ ಯಾವ ಅಡುಗೆ ಪಾತ್ರೆಗಳು ಕಾಣಿಸಿವೆ ? ಅವುಗಳ ಹೆಸರು ಹೇಳಿರಿ ಅದರಿಂದ ಏನೇನು ಮಾಡುತ್ತಾರೆ?





SCERT TELANGANA

ಇಂತಹ ಅಡುಗೆ ಪಾತ್ರೆಗಳು ನಿಮ್ಮ ಮನೆಯಲ್ಲಿಯೂ ಸಹ ಬಹಳ ಇರುತ್ತವೆ. ಅವುಗಳ ಹೆಸರುಗಳನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.



| ಅಡಿಗೆ ಪಾತ್ರೆಯ ಹೆಸರು | ಯಾವುದಕ್ಕೆ ಉಪಯೋಗಿಸುತ್ತಾರೆ. |
|---|---|
| | |



ಕೆಳಗಿನ ಅಡುಗೆ ಪಾತ್ರೆಗಳನ್ನು ಯಾವಾಗಲಾದರೂ ನೋಡಿದ್ದೀರಾ ? ಇವುಗಳನ್ನು ಉಪಯೋಗಿಸಿ ಏನೇನು ಬೇಯಿಸುತ್ತಾರೆ. ಅದರ ಬಗ್ಗೆ ತಿಳಿದುಕೊಂಡು ಹೇಳಿರಿ.



ಎಲಕ್ಟ್ರಿಕ್ ಕುಕರ್



ಇಂಡಕ್ಷನ್ ಸ್ಟವ್



ಮೈಕ್ರೋ ಓವನ್



ಇಡ್ಲಿ ಪಾತ್ರೆ

SCERT TELANGANA







## ಎಲ್ಲಾ ಒಂದೇ ರೀತಿಯಾಗಿ ಬೇಯಿಸುತ್ತಾರೆಯೇ ?

ನಿಖಿಲ್ ಅಡುಗೆ ಮನೆಗೆ ಹೋದನು, ಅಪ್ಪ ಬದನೇಕಾಯಿ ಹೋಳುಗಳನ್ನು ಹೆಚ್ಚುತ್ತಿದ್ದಾನೆ. ಹೆಚ್ಚಿದ ಹೋಳುಗಳನ್ನು ನೀರು ಇರುವ ಪಾತ್ರೆಯಲ್ಲಿ ಹಾಕುತ್ತಿದ್ದಾನೆ. ಬದನೇಕಾಯಿ ಹೋಳುಗಳಿಂದ ಯಾವ ಅಡುಗೆಯನ್ನು ಮಾಡುತ್ತಿರುವೆ? ಅಪ್ಪಾ ! ಎಂದು ನಿಖಿಲ್ ಕೇಳಿದನು. ಬದನೇಕಾಯಿ ಪಲ್ಯ ಮಾಡುತ್ತಿರುವೆನೆಂದು ಅಪ್ಪ ಹೇಳಿದನು. ನಿಖಿಲ್ ಸಹ ಟಮೋಟ, ಹಸಿ ಮೆಣಸಿನಕಾಯನ್ನು ತೆಗೆದುಕೊಟ್ಟನು. ಅವನ್ನು ತೊಳೆಯಬೇಕೆಂದು ಅವನ ಅಪ್ಪ ಹೇಳಿದನು. ನಿಖಿಲ್ ತೊಳೆದು ತಂದನು, ಟಮೋಟ, ಮೆಣಸಿನಕಾಯಿ, ಕೊತ್ತಂಬರಿ ಎಲ್ಲವನ್ನು ಸಣ್ಣ ಸಣ್ಣ ಹೋಳುಗಳಾಗಿ ಹಚ್ಚಿದನು. ಆ ನಂತರ ಬದನೇಕಾಯಿ ಪಲ್ಯವನ್ನು ಮಾಡಿದನು. ನಿಖಿಲ್‌ನ ಅಪ್ಪ ಬದನೇಕಾಯಿ ಪಲ್ಯವನ್ನು ಹೇಗೆ ಮಾಡಿದನೆಂದು ಆಲೋಚಿಸಿರಿ.

ಬದನೇಕಾಯಿ ಪಲ್ಯವನ್ನು ಯಾರ್‍ಯಾರ ಮನೆಯಲ್ಲಿ ಹೇಗೆ ಮಾಡುತ್ತಾರೆ ? ತಿಳಿದುಕೊಂಡು ಹೇಳಿರಿ

ಎಲ್ಲಾ ಆಹಾರ ಪದಾರ್ಥಗಳನ್ನು ಒಂದೇ ರೀತಿಯಾಗಿ ಮಾಡಲಾರರು, ವಿವಿಧ ಆಹಾರ ಪದಾರ್ಥಗಳನ್ನು ಮಾಡುವ ವಿಧಾನ ಬೇರೆ ಬೇರೆ ಯಾಗಿರುತ್ತದೆ. ಕೆಳಗಿನ ಆಹಾರ ಪದಾರ್ಥಗಳನ್ನು ನೋಡಿರಿ. ಇವನ್ನು ಹೇಗೆ ಮಾಡುತ್ತಾರೆಂದು ತಿಳಿದುಕೊಂಡು ಹೇಳಿರಿ.



ಅನ್ನ, ಬೇಳೆಯಂತಹ ಆಹಾರ ಪದಾರ್ಥಗಳನ್ನು ಕುದಿಸುತ್ತಾರೆ, ಬಜ್ಜಿ, ಸಮೋಸ ಮೊದಲಾದವುಗಳನ್ನು ಎಣ್ಣೆಯಲ್ಲಿ ಕರಿಯುತ್ತಾರೆ. ಮೆಕ್ಕೆಜೋಳದ ತೆನೆಗಳು, ರೊಟ್ಟಿಗಳು, ಮಾಂಸ ಮೊದಲಾದವುಗಳನ್ನು ಬೆಂಕಿಯ ಮೇಲೆ ಸುಡುತ್ತಾರೆ ಇಡ್ಲಿಯನ್ನು ಆವಿಯಿಂದ ಬೇಯಿಸುತ್ತಾರೆ. ಮಾವಿನಕಾಯಿ ಉಪ್ಪಿನಕಾಯಿ, ಮೊಸರ ಬಜ್ಜಿಯಂತಹವನ್ನು ಬಿಸಿ ಮಾಡದೆ ಬೆರೆಸಿ ತಯಾರು ಮಾಡಿತ್ತಾರೆ. ಹೀಗೆ ಬಗೆ ಬಗೆಯ ಆಹಾರ ಪದಾರ್ಥಗಳನ್ನು ವಿವಿಧ ಪದ್ಧತಿಗಳಲ್ಲಿ ಮಾಡುತ್ತಾರೆ. ನಿಮ್ಮ ಮನೆಯಲ್ಲಿ ಯಾವುದರಿಂದ ಹೇಗೆ ತಯಾರು ಮಾಡುತ್ತಾರೆ ತಿಳಿದುಕೊಂಡು ಹೇಳಿರಿ.

SCERT TELANGANA



## ನಿಮಗೆ ಗೊತ್ತೇ?





* ಸೊಪ್ಪುಗಳನ್ನು,ತರಕಾರಿಗಳನ್ನುಚೆನ್ನಾಗಿ ತೊಳೆದ ನಂತರವೇ ಹೋಳುಗಳಾಗಿ ಕೊಯ್ದು ಬೇಯಿಸಬೇಕು.
* ಎಲೆ ಸೊಪ್ಪುಗಳನ್ನು,ತರಕಾರಿಗಳನ್ನು ಹೋಳುಗಳಾಗಿ ಕೊಯ್ದ ನಂತರ ತೊಳೆದರೆ ಅದರಲ್ಲಿರುವ ಪೋಷಕ ಪದಾರ್ಥಗಳೆಲ್ಲಾ ನಶಿಸುತ್ತವೆ.
* ಅನ್ನ ಬೇಯಿಸುವ ಮೊದಲು ಅಕ್ಕಿಯನ್ನು ಹೆಚ್ಚಾಗಿ ತೊಳೆಯಬಾರದು.
* ಅನ್ನ ಬೇಯಿಸುವಾಗ ಗಂಜಿ ಬಸಿಯದೇ ಮಾಡಬೇಕು. ಬಸಿದರೆ ಅದರಲ್ಲಿರುವ ಪೋಷಕ ಪದಾರ್ಥಗಳು ಹೋಗುತ್ತವೆ.
* ಪ್ರತಿದಿನ ತಿನ್ನುವ ಆಹಾರದಲ್ಲಿ ಬೇಳೆ, ಸೊಪ್ಪುಗಳು ಇರುವಂತೆ ನೋಡಿ ಕೊಳ್ಳಬೇಕು.
* ತರಕಾರಿಗಳು, ಬೇಳೆಯಂತಹವುಗಳನ್ನು ಹೆಚ್ಚಾಗಿ ಬೇಯಿಸಬಾರದು.
* ಕ್ಯಾರೆಟ್, ಬೀಟುರೂಟ್, ಮುಲ್ಲಂಗಿ, ಸೌತೆಕಾಯಿ, ಈರುಳ್ಳಿ, ಕೊತ್ತಂಬರಿ, ಪುದಿನಾಗಳನ್ನು ಬೇಯಿಸದೇ ತಿನ್ನಬಹುದು.

## ಮುಖ್ಯ ಪದಗಳು

| | | |
|---|---|---|
| 1. ಆಹಾರ | 2. ಬೇಯಿಸಿ ತಿನ್ನುವವು | 3. ಬೇಯಿಸದೇ ತಿನ್ನುವವು |
| 4. ಜೀರ್ಣ | 5. ಅಡುಗೆ ಪಾತ್ರೆಗಳು | 6. ಪೋಷಕ ಪದಾರ್ಥಗಳು |

## ನಾವು ಕಲಿತು ಕೊಂಡಿರುವುದು

☞ ಆಹಾರದಿಂದ ನಮಗೆ ಶಕ್ತಿ ಸಿಗುತ್ತದೆ.

☞ ಸಸ್ಯಗಳಿಂದ, ಪ್ರಾಣಿಗಳಿಂದಲೇ ನಮಗೆ ಆಹಾರ ಸಿಗುತ್ತದೆ.

☞ ಕೆಲವು ಆಹಾರ ಪದಾರ್ಥಗಳನ್ನು ಬೇಯಿಸಿ, ಇನ್ನು ಕೆಲವನ್ನು ಬೇಯಿಸದೇ ತಿನ್ನುತ್ತೇವೆ.

☞ ಬೇಯಿಸುವುದರಿಂದ ಆಹಾರವು ರುಚಿಯಾಗಿ ಇರುತ್ತದೆ. ಬೇಗ ಜೀರ್ಣವಾಗುತ್ತದೆ.

☞ ಒಂದೇ ರೀತಿಯ ಆಹಾರ ಪದಾರ್ಥವನ್ನು ಎಲ್ಲರೂ ಒಂದೇ ರೀತಿಯಾಗಿ ಮಾಡುವುದಿಲ್ಲ.

☞ ಅಡುಗೆಗೆ ಕುಕ್ಕರ್, ಮೈಕ್ರೋ ಓವೆನ್‌ಗಳಂತವುಗಳನ್ನು ಈಗಿನ ಕಾಲದಲ್ಲಿ ಬಳಸುತ್ತಿದ್ದಾರೆ.

☞ ಎಲ್ಲಾ ಆಹಾರ ಪದಾರ್ಥಗಳನ್ನು ಒಂದೇ ರೀತಿಯಾಗಿ ಬೇಯಿಸುವುದಿಲ್ಲ. ಕುದಿಸುವುದು, ಬೇಯಿಸುವುದು, ಕರಿಯುವುದು, ಸುಡುವದು ಹೀಗೆ ವಿವಿಧ ರೀತಿಯಲ್ಲಿ ಮಾಡುತ್ತಾರೆ. ಆಹಾರ ಪದಾರ್ಥಗಳನ್ನು ಬೇಯಿಸಲು ವಿವಿಧ ಅಡುಗೆ ಪಾತ್ರೆಗಳು ಬೇಕಾಗುತ್ತವೆ.

☞ ಬೇಯಿಸುವ ಮೊದಲು ತರಕಾರಿಗಳನ್ನು,ಸೊಪ್ಪುಗಳನ್ನು ಚೆನ್ನಾಗಿ ತೊಳೆಯಬೇಕು.

SCERT TELANGANA





## ಇವು ಮಾಡಿರಿ



### ವಿಷಯಾವಗಾಹನೆ

1. ಆಹಾರವನ್ನು ತಿನ್ನದಿದ್ದರೆ ಏನಾಗುತ್ತದೆ ?
2. ಬೇಯಿಸದೇ ತಿನ್ನುವ ಆಹಾರ ಪದಾರ್ಥಗಳಿಗೆ ಉದಾಹರಣೆಗಳನ್ನು ಕೊಡಿರಿ.
3. ಕೆಳಗಿನವುಗಳನ್ನು ವರ್ಗೀಕರಿಸಿ ಪಟ್ಟಿಯಲ್ಲಿ ಬರೆಯಿರಿ.

ಪೂರಿ, ಸಪೋಟ, ಖರ್ಜೂರ, ಮೊಟ್ಟೆ, ಕೋಳಿ ಮಾಂಸ, ಬೆಂಡೇಕಾಯಿ, ಮೀನು ಬಾದಾಮಿ, ಕಬ್ಬು, ಬದನೇಕಾಯಿ, ಮೂಸುಂಬೆ, ಪಾಯಸ, ನಿಂಬೆರಸ, ಮಾವಿನಕಾಯಿ, ಕಂದ, ಸ್ಯಾವೆ, ಪಾಲಕ್ ಸೊಪ್ಪು, ಕೊತ್ತಂಬರಿ, ಗೋಡಂಬಿ, ಮೆಣಸಿನಕಾಯಿ, ಬಾಳೆಕಾಯಿ, ಸೀಬೆ(ಜಾಮ)ಹಣ್ಣು, ಕಲ್ಲಂಗಡಿ, ಆಲೂಗಡ್ಡೆ, ಈರುಳ್ಳಿ, ಗೆಣಸುಗಡ್ಡೆ.

| ಬೇಯಿಸಿ ತಿನ್ನುವವು | ಬೇಯಿಸದೇ ತಿನ್ನುವವು |
|---|---|
| | |

4. ಬೇಯಿಸಿ, ಬೇಯಿಸದೇ ಎರಡೂ ವಿಧವಾಗಿ ತಿನ್ನುವುವು ಯಾವುವು ?
5. ಅಕ್ಕಿ, ಗೋಧಿಯಿಂದ ಮಾಡುವ ಆಹಾರ ಪದಾರ್ಥಗಳ ಹೆಸರುಗಳನ್ನು ಬರೆಯಿರಿ.
6. ನಿಮ್ಮ ಮನೆಯಲ್ಲಿ ಯಾವ ಯಾವ ಅಡಿಗೆ ಪಾತ್ರೆಗಳು ಇವೆ ?



### ಚಿತ್ರಗಳನ್ನು ಬಿಡಿಸಿರಿ. ಬಣ್ಣ ವನ್ನು ಹಾಕಿರಿ

1. ನಿಮ್ಮ ಮನೆಯಲ್ಲಿ ಅನ್ನವನ್ನು ಯಾವುದರಲ್ಲಿ ಬೇಯಿಸುತ್ತಾರೆ, ಹಾಗೆಯೇ ತರಕಾರಿಗಳು, ಬಜ್ಜಿಗಳನ್ನು ಯಾವುದರಲ್ಲಿ ಮಾಡುತ್ತಾರೆ ? ಅವುಗಳ ಚಿತ್ರ ಬಿಡಿಸಿರಿ.
2. ನಿಮಗೆ ಇಷ್ಟವಾದ ಹಣ್ಣುಗಳ ಚಿತ್ರಗಳನ್ನು ಬಿಡಿಸಿರಿ. ಬಣ್ಣ ಹಾಕಿರಿ.

SCERT TELANGANA





## ಸಮಾಚಾರ ಕೌಶಲ್ಯ – ಪ್ರಾಜೆಕ್ಟ್ ಕೆಲಸ

1. ನಿಮ್ಮ ಸ್ನೇಹಿತರಲ್ಲಿ ಮೂವರನ್ನು ಕೇಳಿ ಹಿಂದಿನ ದಿನದ ಬೆಳಿಗ್ಗೆ, ಮಧ್ಯಾಹ್ನ ರಾತ್ರಿ, ಏನು ತಿಂದಿದ್ದಾರೆಂಬ ವಿವರವನ್ನು ಶೇಖರಿಸಿರಿ. ಪಟ್ಟಿಯಲ್ಲಿ ನಮೋದಿಸಿರಿ.

| ಕ್ರ.ಸಂ. | ಸ್ನೇಹಿತನ ಹೆಸರು | ಬೆಳಿಗ್ಗೆ ತಿಂದಿರುವುದು | ಮಧ್ಯಾಹ್ನ ತಿಂದಿರುವುದು | ರಾತ್ರಿ ತಿಂದಿರುವುದು. |
|---|---|---|---|---|
| | | | | |

* ಎಲ್ಲರೂ ತಿಂದಿರುವ ಆಹಾರ ಪದಾರ್ಥ ಯಾವುದು ?
* ರಾತ್ರಿ ಹೆಚ್ಚು ಮಂದಿ ತಿನ್ನುವ ಆಹಾರ ಪದಾರ್ಥ ಯಾವುದು?
* ಬೆಳಿಗ್ಗೆ ತಿನ್ನದೇ ಇದ್ದವರು ಎಷ್ಟು ಮಂದಿ ?

2. ನಿಮ್ಮ ಮನೆಯಲ್ಲಿ ಅನ್ನ/ಬೇಳೆ /ಪಲ್ಯ... ಇಂತಹ ಯಾವುದಾದರು ಒಂದು ಆಹಾರ ಪದಾರ್ಥವನ್ನು ಹೇಗೆ ಮಾಡುತ್ತಾರೆಂದು ಪರಿಶೀಲಿಸಿರಿ. ಯಾವುದರನಂತರ ಯಾವುದು ಮಾಡಿದ್ದಾರೆಂದು ಚಾರ್ಟಿನಲ್ಲಿ ಬರೆದು ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.



## ಪ್ರಶ್ನಿಸುವುದು.

1. ಮೇರಿ ರಜನಿಯವರ ಮನೆಗೆ ಹೋದಳು. ಅವಳ ತಾಯಿ ಅಡುಗೆ ಮಾಡುವವದನ್ನು ನೋಡಿದಳು. ರಜನಿಯ ತಾಯಿ ಮಾಡುವ ಅಡುಗೆಯನ್ನು ಕುರಿತು ಮೇರಿ ಬಗೆ ಬಗೆಯ ಪ್ರಶ್ನೆಗಳನ್ನು ಕೇಳಿದಳು. ಅವಳು ಯಾವ ಯಾವ ಪ್ರಶ್ನೆಗಳನ್ನು ಕೇಳಿರಬಹುದು? ರಜನಿಯ ತಾಯಿ ತರಕಾರಿಗಳ ಬಗ್ಗೆ ಬಗೆ ಬಗೆಯ ಸೂಚನೆಗಳನ್ನು ಕೊಟ್ಟಳು ಅವಳು ಯಾವ ಸೂಚನೆಗಳನ್ನು ಕೊಟ್ಟಿರಬಹುದು?




## ನಾನು ಇವನ್ನು ಮಾಡಬಲನೇ ?



| | |
|---|---|
| 1. ಆಹಾರವನ್ನು ಏಕೆ ತಿನ್ನಬೇಕೆಂದು ವಿವರಿಸಬಲ್ಲೆನೇ. | ಹೌದು/ಇಲ್ಲ |
| 2. ಆಹಾರವನ್ನು ಬೇಯಿಸಿ ತಿನ್ನುವ ಬೇಯಿಸದೆ ತಿನ್ನುವ ಪದಾರ್ಥಗಳಾಗಿ ವರ್ಗೀಕರಿಸಬಲ್ಲೆನು. | ಹೌದು/ಇಲ್ಲ |
| 3. ವಿವಿಧ ಅಡಿಗೆ ಪಾತ್ರೆಗಳ, ತರಕಾರಿಗಳ ಚಿತ್ರಗಳನ್ನು ಹಾಕಬಲ್ಲೆನು. | ಹೌದು/ಇಲ್ಲ |
| 4. ಅಡುಗೆ ಮಾಡುವ ವಿಧಾನವನ್ನು ವಿವರಿಸಬಲ್ಲೆನ್ನು! | ಹೌದು/ಇಲ್ಲ |
| 5. ಪೋಷಕ ಪದಾರ್ಥಗಳು ನಶಿಸಿ ಹೋಗದೇ ಆಹಾರವನ್ನು ಹೇಗೆ ಬೇಯಿಸ ಬೇಕೆಂದು ಹೇಳಬಲ್ಲೆನು. | ಹೌದು/ಇಲ್ಲ |
| 6. ಆಹಾರ ಪದಾರ್ಥಗಳ ಬಗ್ಗೆ ಪ್ರಶ್ನೆಗಳನ್ನು ಕೇಳಬಲ್ಲೆನು. | ಹೌದು/ಇಲ್ಲ |

SCERT TELANGANA





# 8. ಆಹಾರದ ಅಭ್ಯಾಸಗಳು



ದಸರಾ ರಜೆಗಳಲ್ಲಿ ಶಾಲೆಯ ಮಕ್ಕಳೆಲ್ಲರೂ ವಿಹಾರ ಯಾತ್ರೆಗಾಗಿ ಹೈದ್ರಾಬಾದ್‌ಗೆ ಹೋದರು. ಅಲ್ಲಿ ಬೇರೆ ಬೇರೆ ಪ್ರಾಂತಗಳಿಂದ ಬಂದ ಮಕ್ಕಳೆಲ್ಲರೂ ಸೇರಿದರು. ಅವರೆಲ್ಲರಿಗೂ ಸ್ನೇಹ ಬೆಳೆಯಿತು. ಜೂ ಪಾರ್ಕ್‌ನಲ್ಲಿ ಅನೇಕ ಬಗೆಯ ಪ್ರಾಣಿಗಳನ್ನು ನೋಡಿದ್ದಾರೆ. ಮಧ್ಯಾಹ್ನ ಆದ ತಕ್ಷಣವೇ ಮಕ್ಕಳೆಲ್ಲರು ಒಂದು ಸ್ಥಳದಲ್ಲಿ ಸೇರಿದರು. ಮನೆಯಿಂದ ತೆಗೆದುಕೊಂಡು ಬಂದ ಡಬ್ಬಾಗಳನ್ನು ತೆಗೆದುಕೊಂಡು ಆಹಾರವನ್ನು ತಿನ್ನುತ್ತಿದ್ದಾರೆ. ಅವರೇನು ತಿನ್ನುತ್ತಿದ್ದಾರೆಂದು ನೋಡೋಣವೇ !




ಯಾರ್ಯಾರು ಏನೇನು ತಿನ್ನುತ್ತಿದ್ದಾರೆಂದು ತಿಳಿದು ಕೊಂಡಿದ್ದೀರಲ್ಲವೇ ! ಹಾಗಾದರೆ ನಿಮ್ಮ ಪ್ರಾಂತ್ಯದಲ್ಲಿ ಯಾವ ಯಾವ ಆಹಾರ ಪದಾರ್ಥಗಳನ್ನು ತಿನ್ನುತ್ತಾರೆ?

SCERT TELANGANA





ನಮ್ಮ ರಾಜ್ಯದ ಗುಡ್ಡ ಪ್ರಾಂತ್ಯಗಳಲ್ಲಿ. ಅಡವಿ ಪ್ರಾಂತ್ಯಗಳಲ್ಲಿ ವಾಸಿಸುವವರು. ಕಾಡಿನಲ್ಲಿ ಸಿಗುವ ವಿವಿದ ಗೆಡ್ಡೆಗಳು, ನೆಲ್ಲಿಕಾಯಿ, ನೇರಳೆಹಣ್ಣು, ಕೌಳೆಹಣ್ಣು, ಕಾರೆಹಣ್ಣು, ಲೇಬಹಣ್ಣು, ಕರ್ದೆಹಣ್ಣು ಮೊದಲಾದವುಗಳನ್ನು ತಿನ್ನುತ್ತಾರೆ. ಅಲ್ಲಿ ಬೆಳೆಯುವ ಬೆಳೆಗಳು, ಸಿಗುವ ಆಹಾರ ಪದಾರ್ಥಗಳ ಆಧಾರವಾಗಿ ವಿವಿಧ ಆಹಾರದ ಅಭ್ಯಾಸಗಳು ಇರುತ್ತವೆ.

ರಾಜಸ್ಥಾನ ರಾಜ್ಯದಲ್ಲಿ ಜೋಳ ಹೆಚ್ಚಾಗಿ ಬೆಳೆಯುತ್ತಾರೆ. ಅವರು ಜೋಳದ ರೊಟ್ಟಿಗಳನ್ನು ತಿನ್ನುತ್ತಾರೆ. ಹಾಗೇಯೇ ಡಿಲ್ಲಿ, ಗುಜರಾತ, ಮಧ್ಯಪ್ರದೇಶ್, ಬಿಹಾರ್ ಮೊದಲಾದ ರಾಜ್ಯಗಳಲ್ಲಿ ಗೋಧಿಯಿಂದ ಮಾಡಿದ ರೊಟ್ಟಿಗಳು, ಪೂರಿಗಳು ಹೆಚ್ಚಾಗಿ ತಿನ್ನುತ್ತಾರೆ. ತಮಿಳನಾಡು, ಕರ್ನಾಟಕ, ಆಂಧ್ರಪ್ರದೇಶ್ ರಾಜ್ಯಗಳಲ್ಲಿ ಭತ್ತದ ಅನ್ನ ತಿನ್ನುತ್ತಾರೆ. ಕೇರಳ ರಾಜ್ಯದಲ್ಲಿ ಭತ್ತದ ಅನ್ನದ ಜೊತೆಗೆ ಮೀನನ್ನು ಸಹ ಹೆಚ್ಚಾಗಿ ತಿನ್ನುತ್ತಾರೆ.

ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ಆಹಾರದ ಅಭ್ಯಾಸ ಇರುತ್ತದೆ. ಅದೇ ರೀತಿಯಾಗಿ ವಿವಿಧ ಸಂದರ್ಭಗಳಲ್ಲಿ ವಿವಿಧ ಬಗೆಯ ಆಹಾರವನ್ನು ಮಾಡಿಕೊಂಡು ತಿನ್ನುತ್ತಾರೆ. ಹಬ್ಬದ ದಿನಗಳಲ್ಲಿ, ಮದುವೆಗಳಲ್ಲಿ ಹುಟ್ಟಿದ ದಿನಗಳಲ್ಲಿ, ಸ್ಥಳೀಯವಾಗಿ ಆಚರಿಸಿಕೊಳ್ಳುವ ಜಾತ್ರೆಗಳ ಸಮಯದಲ್ಲಿ ವಿವಿಧ ಬಗೆಯ ಅಡುಗೆಗಳನ್ನು ಮಾಡಿಕೊಳ್ಳುತ್ತಾರೆ.

ಯಾವಯಾವಾಗ ಯಾವ ವಿಧವಾದ ಅಡಿಗೆಯನ್ನು ತಿನ್ನುತ್ತಾರೆಂದು ಬರೆಯಿರಿ.

| **ಹಬ್ಬಗಳು/ಮದುವೆಗಳು /ಪ್ರತ್ಯೇಕ ಸಂದರ್ಭಗಳು** | **ಮಾಡುವ ವಿಧವಿಧದ ಅಡಿಗೆಗಳು.** |
|---|---|
| | |

ನಿಮ್ಮ ಸ್ನೇಹಿತರನ್ನು ಕೇಳಿ ಅವರು ಯಾವ ಯಾವ ವಿಧದ ಅಡಿಗೆಗಳನ್ನು ಮಾಡಿಕೊಳ್ಳುತ್ತಾರೆಂದು ಬರೆಯಿರಿ.



ಮಕ್ಕಳೆಲ್ಲರೂ ತಿಂದ ನಂತರ ಪ್ರಾಣಿಗಳನ್ನು ನೋಡುತ್ತಿರುವರು



ಶರತ್ : ಸುಜಾತಾ ! ಅಗೋ ಆ ಪರಿವಾಳಗಳನ್ನು ನೋಡು. ಬೀಜಗಳನ್ನು ತಿನ್ನುತಿವೆ.

ಸುಜಾತ : ಹೌದು, ಪಾರಿವಾಳಗಳು ಒಂದೇ ಸ್ಥಳದಲ್ಲಿ ಸೇರಿ ತಿನ್ನುತ್ತಿವೆ!

SCERT TELANGANA







ರಘು : ಅಲೀ ! ಅಲ್ಲಿ ಆನೆಯನ್ನು ನೋಡು. ಏನು ತಿನ್ನುತ್ತಿದೆಯೋ!

ಅಲೀ : ಅಯ್ಯೋ ! ಆನೆ ದೊಡ್ಡ ದೊಡ್ಡ ಕಬ್ಬಿನ ಜಲ್ಲೆಗಳನ್ನು ಸೊಂಡಿಲಿನಿಂದ ತೆಗೆದುಕೊಂಡು ಬಾಯಲ್ಲಿ ಹಾಕಿಕೊಂಡು ಗಬಗಬ ತಿನ್ನುತ್ತಿದೆ.





ನಿಮಗೆ ತಿಳಿದ ಪ್ರಾಣಿಗಳು ಎಂತಹ ಆಹಾರ ಪದಾರ್ಥಗಳನ್ನು ತಿನ್ನುತ್ತವೆ ಎಂದು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.






| ಪ್ರಾಣಿ/ಪಕ್ಷಿ ಹೆಸರು | ತಿನ್ನುವ ಆಹಾರ |
|---|---|
| ಆಕಳು | ಹುಲ್ಲು. |





ನಮ್ಮ ಸುತ್ತಲೂ ಅನೇಕ ಬಗೆಯ ಪ್ರಾಣಿಗಳು,ಪಕ್ಷಿಗಳು ಇವೆ.ನಮ್ಮ ಹಾಗೆ ಅವುಗಳಿಗೂ ಸಹ ಆಹಾರದ ಅವಶ್ಯಕತೆ ಇದೆ.ಪ್ರಾಣಿಗಳೆಲ್ಲಾ ಒಂದೇ ವಿಧವಾದ ಆಹಾರವನ್ನು ತಿನ್ನುವುದಿಲ್ಲ.ಅವುಗಳಿಗೆ ಬಗೆಬಗೆಯ ಆಹಾರದ ಅಭ್ಯಾಸಗಳು ಇರುತ್ತವೆ.ಪ್ರಾಣಿಗಳು,ಪಕ್ಷಿಗಳು ಬಗೆಬಗೆಯ ಆಹಾರ ಪದಾರ್ಥಗಳನ್ನು ತಿನ್ನುತ್ತವೆ.ಅವು ಕಾಳುಗಳು,ಸಸ್ಯಗಳು,ಮಾಂಸ,ಜೇನುತುಪ್ಪ,ಹಾಲು ಮುಂತಾದ ಆಹಾರವನ್ನು ತಿನ್ನುತ್ತಿರುತ್ತವೆ.

SCERT TELANGANA





ಸೋನಿಯ ಮನೆಯಲ್ಲಿ ಅವಳ ತಾಯಿ, ತಂದೆ, ಅಣ್ಣ ಇರುತ್ತಾರೆ. ಅವರು ಹೇಗೆ ಊಟ ಮಾಡುತ್ತಿದ್ದಾರೆಂದು ನೋಡಿರಿ.



ರಂಗಪ್ಪನ ಮನೆಯಲ್ಲಿ ತಾಯಿ ತಂದೆಯ ಜೊತೆಗೆ, ಮಾವನು ಸಹ ಇರುತ್ತಾನೆ. ಅವರು ಹೇಗೆ ಊಟ ಮಾಡುತ್ತಿದ್ದಾರೆಂದು ನೋಡಿರಿ.



ಮೇಲಿನ ಎರಡೂ ಚಿತ್ರಗಳನ್ನು ನೋಡಿದ್ದೀರಲ್ಲವೇ! ಸೋನಿಯ ಮನೆಯಲ್ಲಿ ಹೇಗೆ ಊಟ ಮಾಡುತ್ತಿರುವರು?

ರಂಗಪ್ಪ ಮನೆಯಲ್ಲಿ ಹೇಗೆ ಊಟ ಮಾಡುತ್ತಿರುವರು?

ಯಾವ ವಿಧವಾದ ಊಟವನ್ನು ಮಾಡುವದು ಒಳ್ಳೆಯದು? ಏತಕ್ಕಾಗಿ?

ಕುಟುಂಬದ ಸದಸ್ಯರೆಲ್ಲರೂ ಯಾವ ಯಾವಾಗ ಕೂಡಿ ತಿನ್ನುತ್ತಾರೆ? ಏತಕ್ಕಾಗಿ ಕೂಡಿ ತಿನ್ನಬೇಕು?



ಹಬ್ಬಕ್ಕೆ ಸೋನಿಯ ಮನೆಗೆ ನೆಂಟರು ಬಂದರು. ಬಂಧುಗಳೆಲ್ಲರಿಗೂ ಒಂದೇ ಸಾರಿ ಊಟಕ್ಕೆ ಏರ್ಪಾಟು ಮಾಡಿದರು ಇವರಿಗೆ ಸೋನಿಯ ಅಣ್ಣ, ಅಪ್ಪ ಬಡಿಸಿದರು. ಆ ಚಿತ್ರವನ್ನು ನೋಡಿರಿ.



> ಮೇಲಿನ ಚಿತ್ರದಲ್ಲಿರವಂತೆ ಯಾವ ಸಂದರ್ಭದಲ್ಲಿ ಹೆಚ್ಚು ಜನರು ಕೂಡಿ ತಿನ್ನುತ್ತಾರೆ?
> ಹೆಚ್ಚುಮಂದಿ ಕೂಡಿ ತಿನ್ನುತ್ತಿರುವಾಗ ನೀವಾದರೆ ಯಾವ ಕೆಲಸಗಳನ್ನು ಮಾಡುತ್ತೀರಿ?

ಸಾಧಾರಣವಾಗಿ ಮದುವೆಗಳು, ಹುಟ್ಟಿದ ಹಬ್ಬದ ಸಮಾರಂಭಗಳು, ಹಬ್ಬಗಳ ಸಮಯದಲ್ಲಿ ಎಲ್ಲರೂ ಕೂಡಿ ತಿನ್ನುತ್ತಾರೆ. ಕೂಡಿ ತಿನ್ನುವುದರಿಂದ ನಾವೆಲ್ಲ ಒಂದೇ ಎನ್ನುವ ಭಾವನೆ ಮೂಡುತ್ತದೆ.



## ಎಲ್ಲರೂ ಎಲ್ಲವನ್ನು ತಿನ್ನಬಲ್ಲಿರಾ?

ಮಹೇಶ ಶಾಲೆಯಿಂದ ಮನೆಗೆ ಬರುವಾಗ ಸುಟ್ಟಿರುವ ಮೆಕ್ಕೆಜೋಳದ ತೆನೆಯೊಂದನ್ನು ಕೊಂಡು ತಂದನು. ಮನೆಗೆ ಬರುತ್ತಲೇ ಜೋಕಾಲಿಯಲ್ಲಿರುವ ತನ್ನ ತಮ್ಮನಿಗೆ ಮೆಕ್ಕೆಜೋಳದ ತೆನೆಯನ್ನು ತಿನ್ನಿಸಲು ಹೋದನು. ಸಣ್ಣಮಕ್ಕಳಿಗೆ ತೆನೆಯನ್ನು ತಿನ್ನಿಸಬಾರದೆಂದು ಹೇಳಿದಳು ಅಮ್ಮ.ಹಾಗಾದರೆ ತಾತನಿಗೆ ಕೊಡುತ್ತೇನೆಂದು ಓಡಿಹೋಗಿ ತಾತನ ಹತ್ತಿರಹೋದನು. ಮೆಕ್ಕೆಜೋಳದ ತೆನೆಯನ್ನು ತಿನ್ನು ತಾತ ಎಂದನು. ತಾತ ನನಗೆ ಬೇಡ, ನಾನು ತಿನ್ನಲಾರೆ ಎಂದನು.

> ತಮ್ಮನಿಗೆ ಮೆಕ್ಕೆಜೋಳದ ತೆನೆಯನ್ನು ತಿನ್ನಸಬೇಡವೆಂದು ಅಮ್ಮ ಏತಕ್ಕಾಗಿ ಹೇಳಿದಳು?
> ತಾತ ಮೆಕ್ಕೆಜೋಳದ ತೆನೆಯನ್ನು ಏತಕ್ಕಾಗಿ ತಿನ್ನಲಾರೆ ಎಂದನು?
> ನಿಮ್ಮ ಮನೆಯಲ್ಲಿ ಮೆಕ್ಕೆಜೋಳದ ತೆನೆಯನ್ನು ಯಾರು ಯಾರು ತಿನ್ನಬಲ್ಲರು?

SCERT TELANGANA



ಚಿಕ್ಕ ಮಕ್ಕಳು, ಮುದುಕರು ಇನ್ನೂ ಯಾವುವನ್ನು ತಿನ್ನಲಾರರು.ಮುದುಕರು ಏನೇನು ತಿನ್ನಬಲ್ಲರು.ಚಿಕ್ಕಮಕ್ಕಳು ಏನೇನು ತಿನ್ನಬಲ್ಲರು.

| | ತಿನ್ನುತ್ತಾರೆ | ತಿನ್ನುವುದಿಲ್ಲ |
|---|---|---|
| ಚಿಕ್ಕ ಮಕ್ಕಳು | | |
| ಮುದುಕರು | | |
| ಇತರರು | | |

ಚಿಕ್ಕಮಕ್ಕಳಿಗೆ ಹಲ್ಲುಗಳು ಇರುವುದಿಲ್ಲ. ಅಗಿದು ತಿನ್ನಲಾರರು. ಅದಕ್ಕಾಗಿ ಹಾಲು ಕುಡಿಸುವರು. ಮುದುಕರು ಗಟ್ಟಿಯಾದ ಆಹಾರವನ್ನು ಅಗಿಯಲಾರರು. ಈ ರೀತಿಯಾಗಿ ವಯಸ್ಸಿಗೆ ತಕ್ಕಂತೆ ಆಹಾರದ ಅಭ್ಯಾಸಗಳಲ್ಲಿ ವ್ಯತ್ಯಾಸಗಳಿರುತ್ತವೆ. ಒಳ್ಳೆಯ ಆಹಾರವನ್ನು ತೆಗೆದುಕೊಳ್ಳುವುದು ಎಷ್ಟು ಮುಖ್ಯವೋ ಒಳ್ಳೆಯ ಅಭ್ಯಾಸಗಳು ಇರುವುದು ಅಷ್ಟೆ ಮುಖ್ಯ. ತಿನ್ನುವ ಮೊದಲು ತಪ್ಪದೇ ಸಾಬೂನುನಿಂದ ಕೈಕಾಲುಗಳನ್ನು ತೊಳೆದುಕೊಳ್ಳಬೇಕು.

## ಕಠಿಣ ಪದಗಳು

1 ಕೂಡಿ ತಿನ್ನುವುದು
2 ಆಹಾರ ಪದಾರ್ಥಗಳು
3 ಆಹಾರದ ಅಭ್ಯಾಸಗಳು
4 ಕೈಕಾಲುಗಳನ್ನು ತೊಳೆದುಕೊಳ್ಳುವುದು

## ನಾವು ಕಲಿತುಕೊಂಡಿರುವುದು

* ಒಂದು ಪ್ರಾಂತದ ಆಹಾರದ ಅಭ್ಯಾಸಗಳು ಅಲ್ಲಿ ಬೆಳೆಯುವ ಬೆಳೆಗಳು, ಸಿಗುವ ಆಹಾರ ಪದಾರ್ಥಗಳ ಮೇಲೆ ಆಧಾರಪಟ್ಟಿರುತ್ತದೆ.
* ಹಬ್ಬಗಳು, ಮದುವೆಗಳ ಸಮಯದಲ್ಲಿ ಪ್ರತ್ಯೇಕವಾದ ಅಡುಗೆಯನ್ನು ಮಾಡಿಕೊಳ್ಳುತ್ತಾರೆ.
* ಪ್ರಾಣಿಗಳಿಗೂ ಪಕ್ಷಿಗಳಿಗೂ ಸಹ ಆಹಾರವು ಅವಶ್ಯ ಇವಕ್ಕೆ ಬೇರೆ ಬೇರೆಯ ಆಹಾರದ ಅಭ್ಯಾಸಗಳು ಇರುತ್ತವೆ
* ಮನೆಯಲ್ಲಿರುವವರೆಲ್ಲರೂ ಕೂಡಿ ತಿನ್ನಬೇಕು. ಇದರಿಂದ ಎಲ್ಲರೂ ಎಲ್ಲಾ ಆಹಾರ ಪದಾರ್ಥಗಳನ್ನು ಅವಶ್ಯಕವಾದಷ್ಟು ತಿನ್ನುವ ಅವಕಾಶವಿರುತ್ತದೆ. ಕೂಡಿ ತಿಂದರೆ ಸಂತೋಷವಾಗುತ್ತದೆ.
* ವಯಸ್ಸಿಗೆ ತಕ್ಕಂತೆ ಆಹಾರದ ಅಭ್ಯಾಸಗಳು ಬದಲಾಗುತ್ತಿರುತ್ತದೆ.
* ತಿನ್ನುವ ಮೊದಲು ಕೈಕಾಲುಗಳನ್ನು ಸಾಬೂನಿನಿಂದ ತೊಳೆದುಕೊಳ್ಳಬೇಕು.





SCERT TELANGANA

## ಇವು ಮಾಡಿರಿ



### ವಿಷಯಾವಗಾಹನೆ

1. ನಿಮ್ಮ ಪ್ರಾಂತ್ಯದಲ್ಲಿ ಯಾವ ಯಾವ ಆಹಾರ ಪದಾರ್ಥಗಳನ್ನು ಹೆಚ್ಚು ಮಂದಿ ತಿನ್ನುತ್ತಾರೆ?
2. ಹುಲ್ಲು ತಿನ್ನುವ ಪ್ರಾಣಿಗಳು, ಕಾಳು ತಿನ್ನುವ ಪ್ರಾಣಿಗಳಿಗೆ ಉದಾಹರಣೆ ಕೊಡಿರಿ.
3. ಸಾಧಾರಣವಾಗಿ ಪ್ರತಿದಿನ ಏನನ್ನು ತಿನ್ನುತ್ತಾರೆ? ಹಬ್ಬದ ದಿನಗಳಲ್ಲಿ ಏನನ್ನು ತಿನ್ನುತ್ತಾರೆ?
4. ನಾಯಿಯ ಆಹಾರದ ಅಭ್ಯಾಸಕ್ಕೂ, ಮೇಕೆಯ ಆಹಾರದ ಅಭ್ಯಾಸಕ್ಕೂ ಇರುವ ವ್ಯತ್ಯಾಸಗಳೇನು?
5. ಎಲ್ಲಾರೂ ಸೇರಿ ಊಟ ಮಾಡುವುದು ಏತಕ್ಕಾಗಿ ಒಳ್ಳೆಯದು?
6. ಈ ಕೆಳಗಿನ ಆಹಾರದ ಅಭ್ಯಾಸಗಳು ನಿಮಗೂ ಇದ್ದರೆ (✓) ಹಾಕಿರಿ.

| | |
|---|---|
| ಆಹಾರವನ್ನು ತಿನ್ನುವ ಮೊದಲಿನಿಂದ, ನಂತರ ಕೈಗಳನ್ನು ಶುಭ್ರವಾಗಿ ತೊಳೆದುಕೊಳ್ಳುತ್ತೇನೆ. | ☐ |
| ತಿನ್ನುವ ಮೊದಲು, ನಂತರ ತಟ್ಟೆಯನ್ನು ಶುಭ್ರವಾಗಿ ತೊಳೆಯುತ್ತೇನೆ. | ☐ |
| ತಿನ್ನುವಾಗ ಆಹಾರ ಪದಾರ್ಥವನ್ನು ನೆಲದ ಮೇಲೆ ಬೀಳಿಸುವುದಿಲ್ಲ. | ☐ |
| ಆಹಾರ ಪದಾರ್ಥಗಳು ಇರುವ ಪಾತ್ರೆಗಳ ಮೇಲೆ ಮುಚ್ಚಳಗಳನ್ನು ಇಡುತ್ತೇನೆ. | ☐ |
| ಆಹಾರ ಪದಾರ್ಥಗಳನ್ನು ವ್ಯರ್ಥ ಮಾಡುವುದಿಲ್ಲ. | ☐ |
| ರಸ್ತೆಯ ಮೇಲೆ, ಅಪರಿಶುಭ್ರವಾದ ಸ್ಥಳದಲ್ಲಿ ಮಾರುವ ಪದಾರ್ಥಗಳನ್ನು ಕೊಳ್ಳುವುದಿಲ್ಲ, ತಿನ್ನುವುದಿಲ್ಲ. | ☐ |
| ಎಲ್ಲರೊಂದಿಗೆ ಸೇರಿ ತಿನ್ನುತ್ತೇನೆ. . | ☐ |



### ಚಿತ್ರ ಬಿಡಿಸಿರಿ. ಬಣ್ಣ ಹಾಕಿರಿ.

1. ಕೆಳಗಿನ ಚಿತ್ರವನ್ನು ನೋಡಿರಿ, ಬಿಡಿಸಿರಿ, ಅದರ ಬಗ್ಗೆ ಬರೆಯಿರಿ.




SCERT TELANGANA





## ಸಮಾಚಾರ ಕೌಶಲ್ಯ-ಪ್ರಾಜೆಕ್ಟ್ ಕೆಲಸ

1. ನಿಮ್ಮ ಸ್ನೇಹಿತರ ಐದು ಮಂದಿಯನ್ನು ಕೇಳಿ ಅವರ ಮನೆಯಲ್ಲಿ ಯಾವ ಯಾವಾಗ ಸೇರಿ ಕುಳಿತು ಊಟಮಾಡುತ್ತಾರೆಂದು ಪಟ್ಟಿಯಲ್ಲಿ (✓) ಹಾಕಿರಿ

| ಕ್ರ.ಸಂ. | ಸೇಹಿತನ ಹೆಸರು | ಯಾವಾಗ ಕೂಡಿ ಊಟ ಮಾಡುತ್ತಾರೆ | | |
|---|---|---|---|---|
| | | ಬೆಳಿಗ್ಗೆ | ಮಧ್ಯಾಹ್ನ | ರಾತ್ರಿ |
| | | | | |

ಯಾರ್‍ಯಾರ ಮನೆಯಲ್ಲಿ ಹೆಚ್ಚುಬಾರಿ ಸೇರಿ ತಿನ್ನುತ್ತಿದ್ದಾರೆ? ಯಾವ ದಿನಗಳಲ್ಲಿ ಸೇರಿ ತಿನ್ನುತ್ತಾರೆ?



## ಪ್ರಶಂಸೆ

1. ನಿಮ್ಮ ತರಗತಿಯಲ್ಲಿ ಯಾರ್‍ಯಾರು ಪ್ರತಿದಿನ ತಿನ್ನುವ ಮೊದಲು ಕೈಕಾಲುಗಳನ್ನು ತೊಳೆದುಕೊಳ್ಳುತ್ತಾರೆ? ಹಾಗೆಯೇ ತಟ್ಟೆಯಲ್ಲಿ ಏನೂ ಉಳಿಸದಂತೆ ಯಾರ್‍ಯಾರು ಶುಭ್ರವಾಗಿ ತಿನ್ನುತ್ತಾರೆ? ತಿಂದ ನಂತರ ಆ ಸ್ಥಳವನ್ನು ಶುಭ್ರವಾಗಿ ಇಡುತ್ತಿದ್ದಾರಾ? ನೀವಾದರೆ ಏನು ಮಾಡುತ್ತೀರಿ?



## ಪ್ರಶ್ನಿಸುವುದು.

1. ಗೋಪಿ ಮಧ್ಯಾಹ್ನ ಪಾಠಶಾಲೆಯಲ್ಲಿ ಕೈಕಾಲುಗಳುನ್ನು ತೊಳೆದುಕೊಳ್ಳದೇ ಊಟ ಮಾಡುವುದಕ್ಕೆ ತಟ್ಟೆಯನ್ನು ತೆಗೆದುಕೊಂಡು ಬಂದನು. ಗೋಪಿಯ ಸ್ನೇಹಿತರು ಗೋಪಿಗೆ ಕೈಕಾಲುಗಳನ್ನು ತೊಳೆದುಕೊಳ್ಳಲು ಹೇಳಿದರು. ಗೋಪಿ ತನ್ನ ಸ್ನೇಹಿತರಿಗೆ ಪ್ರಶ್ನೆಗಳನ್ನು ಕೇಳಿದನು. ಆ ಪ್ರಶ್ನೆಗಳು ಏನಿರಬಹುದು? ಅವು ಸರಿಯಾದುವೇನಾ? ನೀವಾದರೆ ಗೋಪಿಗೆ ಏನು ಹೇಳುವಿರಿ?



## ನಾನು ಇವನ್ನು ಮಾಡಬಲ್ಲೆನೇ?



| | | |
|---|---|---|
| 1. | ಪ್ರಾಂತ್ಯಕ್ಕೆ ತಕ್ಕಂತೆ ಆಹಾರದ ಅಭ್ಯಾಸಗಳು ಬೇರೆಯಾಗಿರುತ್ತವೆಂದು ಹೇಳಬಲ್ಲೆನು. | ಹೌದು/ಇಲ್ಲ |
| 2. | ಪ್ರಾಣಿಗಳ, ಪಕ್ಷಿಗಳ ಆಹಾರದ ಅಭ್ಯಾಸಗಳ ಬಗ್ಗೆ ಹೇಳಬಲ್ಲೆನು. | ಹೌದು/ಇಲ್ಲ |
| 3. | ಮನೆಯವರೆಲ್ಲರೂ ಸೇರಿ ತಿನ್ನುವುದರಿಂದ ಆಗುವ ಪ್ರಯೋಜನಗಳನ್ನು ವಿವರಿಸುವೆನು. | ಹೌದು/ಇಲ್ಲ |
| 4. | ತಿನ್ನುವ ಆಹಾರದ ಪದಾರ್ಥಗಳ ಪಟ್ಟಿಯನ್ನು ತಯಾರುಮಾಡಬಲ್ಲೆನು. | ಹೌದು/ಇಲ್ಲ |
| 5. | ಒಳ್ಳೆಯ ಆಹಾರದ ಅಭ್ಯಾಸಗಳನ್ನು ವಿವರಿಸಬಲ್ಲೆನು, ಪಾಲಿಸಬಲ್ಲೆನು. | ಹೌದು/ಇಲ್ಲ |
| 6. | ಆಹಾರದ ಅಭ್ಯಾಸಗಳನ್ನು ಪ್ರಶ್ನಿಸಬಲ್ಲೆನು, ವಿವರಿಸಬಲ್ಲೆನು. | ಹೌದು/ಇಲ್ಲ |

SCERT TELANGANA






# 9. ನಮ್ಮ ಗ್ರಾಮ




ರಂಗಾಪುರ ಗ್ರಾಮದ ಸುತ್ತಲೂ ಸಣ್ಣ ಸಣ್ಣ ಬೆಟ್ಟಗಳು ಇರುತ್ತವೆ. ಗ್ರಾಮದ ಸಮೀಪದಲ್ಲಿ ನದಿ ಹರಿಯುತ್ತದೆ. ಗ್ರಾಮಕ್ಕೆ ನದಿಯ ನೀರೇ ಆಧಾರ. ಗ್ರಾಮದಲ್ಲಿ ಮನೆಗಳು ಅಕ್ಕಪಕ್ಕದಲ್ಲೇ ಇರುತ್ತವೆ. ಗ್ರಾಮದಲ್ಲಿ ನೀರಿನ ಟ್ಯಾಂಕು ಇದೆ. ನೀರನ್ನು ಕೊಳಾಯಿಗಳ ಮೂಲಕ ಸರಬರಾಜು ಮಾಡುತ್ತಾರೆ. ಗ್ರಾಮದಲ್ಲಿ ಅನೇಕ ಕೆಲಸ ಮಾಡುವವರು ಇದ್ದಾರೆ. ಈಗ ರಂಗಾಪುರ ಗ್ರಾಮದ ಚಿತ್ರವನ್ನು ಪರಿಶೀಲಿಸೋಣವೇ?




SCERT TELANGANA

ಮೇಲಿನ ಚಿತ್ರ ಒಂದು ಗ್ರಾಮಕ್ಕೆ (ಹಳ್ಳಿಗೆ) ಸಂಬಂಧಿಸಿದೆ ಎಂದು ಏಕೆ ಹೇಳಬಹುದೇ?
ಮೇಲಿನ ಚಿತ್ರದ ಆಧಾರವಾಗಿ ಗ್ರಾಮ(ಹಳ್ಳಿ) ಎಂದರೇನು ಹೇಳಿರಿ
ಮೇಲಿನ ಚಿತ್ರದಲ್ಲಿ ಇರುವವುಗಳ ಬಗ್ಗೆ ಮಾತನಾಡಿರಿ.?





ರಂಗಾಪುರ ಗ್ರಾಮ ಹೇಗೆ ಇದೆಯೆಂದು ಅಂತ ಚಿತ್ರದಲ್ಲಿ ನೋಡಿದ್ದೀರಲ್ಲವೇ! ರಂಗಾಪುರ ಗ್ರಾಮದಲ್ಲಿ ಇನ್ನೂ ಏನೇನು ಇವೆ ಎಂದು ಕೆಳಗಿನ ಚಿತ್ರದಲ್ಲಿ ನೋಡಿ ಹೇಳಿರಿ.



ರಂಗಾಪುರ ಗ್ರಾಮದಲ್ಲಿ ಏನೇನು ಇವೆ?

ನಿಮ್ಮ ಗ್ರಾಮದಲ್ಲಿ ಏನೇನು ಇವೆ?



ರಂಗಾಪುರ ಗ್ರಾಮದಲ್ಲಿ ಬೀದಿಗಳು, ವಿವಿಧ ರೀತಿಯ ಮನೆಗಳು, ಶಾಲೆ, ಗುಡಿ, ಮಸೀದಿ, ಚರ್ಚ್, ಗ್ರಾಮ ಪಂಚಾಯಿತಿ, ಪ್ರಾಥಮಿಕ ಆರೋಗ್ಯ ಉಪಕೇಂದ್ರ, ಪಶು ವೈದ್ಯಶಾಲೆ, ಅಂಚೆಕಛೇರಿ, ಇವೆಯಲ್ಲವೇ! ಇವುಗಳ ಬಗ್ಗೆ ನಿಮಗೆ ಗೊತ್ತೇ?

## ಗ್ರಾಮ ಪಂಚಾಯಿತಿ ಕಾರ್ಯಾಲಯ.



ಇದು ರಂಗಾಪುರ ಗ್ರಾಮಪಂಚಾಯಿತಿಯ ಕಾರ್ಯಾಲಯ ಗ್ರಾಮ ಪಂಚಾಯಿತಿಯವರು ಗ್ರಾಮಕ್ಕೆ ಶುದ್ದನೀರನ್ನು ಸರಬರಾಜು ಮಾಡುವುದು, ಬೀದಿಗಳು, ಚರಂಡಿಗಳನ್ನು ಶುಭ್ರ ಮಾಡುವುದು, ಬೀದಿ ದೀಪಗಳನ್ನು ಹಾಕುವುದನ್ನು ಮಾಡುತ್ತಿರುತ್ತಾರೆ.

ನಿಮ್ಮ ಊರಿನ ಪಂಚಾಯಿತಿಯವರು ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ?

SCERT TELANGANA






## ಪೋಸ್ಟಾಫೀಸು (ಅಂಚೆ ಕಛೇರಿ)




ಇದು ಅಂಚೆ ಕಛೇರಿ ಇದರ ಮೂಲಕ ಪತ್ರಗಳನ್ನು ತಲುಪಿಸುವುದು, ಹಣ ಹೂಡಿಸುವುದು. ಜೀವ ವಿಮೆ ಮೊದಲಾದ ಕೆಲಸಗಳನ್ನು ಮಾಡುತ್ತಾರೆ.

> ನಮ್ಮ ಊರಿನಲ್ಲಿ ಪೋಸ್ಟ್ ಬಾಕ್ಸ್ ನೋಡಿದ್ದೀರಾ? ಅದರಲ್ಲಿ ಏನೇನು ಹಾಕುವರು?ಪೋಸ್ಟ್ ಮ್ಯಾನ್ ಯಾವ ಯಾವ ಕೆಲಸಗಳನ್ನು ಮಾಡುತ್ತಾನೆ? ಆತನ ಹೆಸರು ಏನು?



## ಪ್ರಾಥಮಿಕ ಆರೋಗ್ಯ ಕೇಂದ್ರ

ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ಈ ಕೇಂದ್ರದಲ್ಲಿ ವೈದ್ಯರು, ಆರೋಗ್ಯ ಕಾರ್ಯಕರ್ತರು ಇರುತ್ತಾರೆ. ಆರೋಗ್ಯ ಕಾರ್ಯಕರ್ತರು ಪ್ರಜೆಗಳಿಗೆ ಆರೋಗ್ಯ ವಿಷಯದ ಬಗ್ಗೆ ಹೇಳುತ್ತಾ ಇರುತ್ತಾರೆ. ಪಲ್ಸ್ ಪೋಲಿಯೋ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಾರೆ. ಸಣ್ಣ ಖಾಯಿಲೆಗಳಿಗೆ ಮಾತ್ರೆಗಳನ್ನು ಕೊಡುತ್ತಿರುತ್ತಾರೆ.

> ನಿಮ್ಮ ಗ್ರಾಮಗಳಲ್ಲಿ ಪೋಲಿಯೋ ಹನಿಗಳನ್ನು ಯಾರು ಹಾಕುತ್ತಾರೆ?
>
> ನಿಮ್ಮ ಗ್ರಾಮದಲ್ಲಿ ಆರೋಗ್ಯಕೇಂದ್ರ ಇದೆಯಾ? ಅದು ಯಾವ ಯಾವ ಕೆಲಸಗಳನ್ನು ಮಾಡುತ್ತದೆ.

## ಪಶುವೈದ್ಯಶಾಲೆ

ನಮಗೆ ಖಾಯಿಲೆಗಳು ಬಂದಾಗ ಆಸ್ಪತ್ರೆಗೆ ಹೇಗೆ ಹೋಗುತೇವೋ ಹಾಗೆಯೇ ಪಶುಗಳಿಗೆ ರೋಗಗಳು ಬಂದಾಗ ಅವನ್ನು ಪಶುವೈದ್ಯ ಶಾಲೆಗೆ ಕರೆದುಕೊಂಡು ಹೋಗುವುರು.





> ಪಶುಗಳನ್ನು ಯಾವ ಯಾವಾಗ ಆಸ್ಪತ್ರೆಗೆ ಕರೆದುಕೊಂಡು ಹೋಗುವುರೆಂದು ಕೇಳಿ ಬರೆಯಿರಿ.
>
> ಪಶುವೈದ್ಯಶಾಲೆ ಇಲ್ಲದಿದದ್ದರೆ ಏನಾಗುತ್ತದೆ?




## ಬ್ಯಾಂಕು.

ರಂಗಾಪುರ ಗ್ರಾಮದಲ್ಲಿ ಜನಸಂಖ್ಯೆ ಹೆಚ್ಚಾಗಿ ಇರುವುದರಿಂದ ಗ್ರಾಮೀಣ ಬ್ಯಾಂಕು ಸಹ ಇದೆ. ಪ್ರಜೆಗಳು ಹಣವನ್ನು ಬ್ಯಾಂಕ್‌ನಲ್ಲಿ ಹೂಡಿಸುತ್ತಾರೆ. ಜನರ ಅವಶ್ಯಕತೆಗಳಿಗೆ ಬ್ಯಾಂಕುಗಳು ಸಹ ಸಾಲವನ್ನು ಕೊಡುತ್ತವೆ. ಅದನ್ನು ಕಂತುಗಳ ರೂಪದಲ್ಲಿ ಪುನಃ ಕಟ್ಟುತ್ತಾ ಹೋಗುತ್ತಾರೆ.

> ಹಿರಿಯರನ್ನು ಕೇಳಿ ಬ್ಯಾಂಕುಗಳಿಂದ ಇನ್ನು ಏನೇನು ಲಾಭಗಳಿವೆ ಎಂದು ತಿಳಿದುಕೊಂಡು ಹೇಳಿರಿ.






SCERT TELANGANA

### ಪಾಠಶಾಲೆ



ರಂಗಾಪುರ ಗ್ರಾಮದಲ್ಲಿ ಪ್ರಾಥಮಿಕೋನ್ನತ ಪಾಠಶಾಲೆ ಇದೆ. ಇಲ್ಲಿ ವಿದ್ಯಾಭ್ಯಾಸವನ್ನು ಪೂರ್ತಿಮಾಡಿದವರು ಉನ್ನತ ವಿದ್ಯೆಗಾಗಿ ಪಕ್ಕದ ಗ್ರಾಮಕ್ಕೆ ಹೋಗುತ್ತಾರೆ. ಪಾಠಶಾಲೆ ಇಲ್ಲದಿದ್ದರೆ ಏನಾಗುತ್ತದೆ?

ನಿಮ್ಮ ಗ್ರಾಮದಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಎಲ್ಲಿಗೆ ಹೋಗುತ್ತಾರೆ.



### ನೀರಿನ ಟ್ಯಾಂಕು

ನೀರಿನ ಟ್ಯಾಂಕುಗಳ ಮೂಲಕ ನೀರನ್ನು ಕೊಳಾಯಿಗಳಿಗೆ ಬಿಡುತ್ತಾರೆ. ನೀರಿನ ಟ್ಯಾಂಕನ್ನು ವಾರದಲ್ಲಿ ಒಂದು ಸಲ ತೊಳೆಯುತ್ತಾರೆ. ನೀರಿನಲ್ಲಿ ಕ್ಲೋರಿನ್ ಅನ್ನು ಬೆರೆಸಿ ಶುಚಿ ಮಾಡಿ ಕೊಳಾಯಿಗಳಿಗೆ ಬಿಡುತ್ತಾರೆ. ನೀರನ್ನು ವ್ಯರ್ಥಮಾಡಬಾರದು ಕೊಳಾಯಿಗಳಿಂದ ನೀರು ವ್ಯರ್ಥವಾಗದಂತೆ ನೋಡಬೇಕು. ನೀರು ವ್ಯರ್ಥವಾಗುತ್ತಿದ್ದರೆ, ಕೊಳಾಯಿಳಲ್ಲಿ ಸೋರಿಕೆ ಇದ್ದರೆ ತಕ್ಷಣ ಗ್ರಾಮ ಸರ್ಪಂಚ್‌ನಿಗೆ ತಿಳಿಸಬೇಕು.

ನಿಮ್ಮ ಗ್ರಾಮದ್ಲಲಿ ನೀರನ್ನು ಎಲ್ಲಿಂದ ತಂದುಕೊಳ್ಳುತ್ತಿರಾ?
ನೀರಿನ ಟ್ಯಾಂಕ್‌ನ ಉಪಯೋಗ ಏನು?

### ಪ್ರಾರ್ಥನಾ ಮಂದಿರಗಳು

ಕೆಳಗಿನ ಚಿತ್ರ ನೋಡಿರಿ. ಏನೇನು ಇವೆ? ಇವುಗಳಿಗೆ ಯಾರಾರು ಹೋಗುತ್ತಾರೆ? ಯಾವಯಾವಾಗ ಹೋಗುತ್ತಾರೆ?



ಹೀಗೆಯೇ ನಿಮ್ಮ ಗ್ರಾಮದಲ್ಲಿ ಏನೇನು ಇವೆ? ಅವುಗಳಿಗೆ ಯಾರ‍್ಯಾರು ಹೋಗುತ್ತಾರೆ? ಯಾವಾಗ ಹೋಗುತ್ತಾರೆ?







## ರಂಗಾಪುರ ಗ್ರಾಮಕ್ಕೆ ಪ್ರಯಾಣ ಸೌಕರ್ಯಗಳು

ನಾವು ಯಾವುದಾದರೂ ಊರಿಗೆ ಹೋಗಬೇಕಾದರೆ ಬಸ್ಸು,ರೈಲು,ಆಟೋಗಳಲ್ಲಿ ಹೋಗುತ್ತೇವೆ.ಹಾಗಾದರೆ ರಂಗಾಪುರ ಗ್ರಾಮಕ್ಕೆ ಸಾರಿಗೆ ಸೌಕರ್ಯಗಳು ಹೇಗೆ ಇವೆಎಂದು ತಿಳಿದುಕೊಳ್ಳೋಣ!ರಂಗಾಪುರ ಗ್ರಾಮದಲ್ಲಿ ಯಾವ ಯಾವ ವಾಹನಗಳು ಇವೆಎಂದು ಹೇಳಿರಿ.



ರಂಗಾಪುರ ಗ್ರಾಮಕ್ಕೆ ಬೆಳಿಗ್ಗೆ, ಸಾಯಂಕಾಲ ಬಸ್ಸು ಬರುತ್ತದೆ. ಹತ್ತಿರದ ಪ್ರಾಂತ್ಯಗಳಿಗೆ ಆಟೋಗಳ ಮೂಲಕ ಹೋಗುತ್ತಾರೆ. ಊರಿನಲ್ಲಿನ ವ್ಯವಸಾಯದಾರರು ಎತ್ತಿನ ಬಂಡಿಗಳನ್ನು ಹೊಲದ ಕೆಲಸಗಳಿಗೆ ಬಳಸುತ್ತಿರುತ್ತಾರೆ. ಪಾಠಶಾಲೆಯ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಬಸ್ಸಿನಲ್ಲಿ ಪಕ್ಕದ ಗ್ರಾಮಕ್ಕೆ ಹೋಗಿ ಬರುತ್ತಿರುತ್ತಾರೆ.

ನಿಮ್ಮ ಗ್ರಾಮಕ್ಕೆ ಯಾವ ಯಾವ ವಾಹನಗಳು ಬರುತ್ತಿರುತ್ತವೆ?
ನಿಮ್ಮ ಗ್ರಾಮದಲ್ಲಿರುವವರು ಯಾವ ಯಾವ ವಾಹನಗಳಲ್ಲಿ ಪ್ರಯಾಣ ಮಾಡುತ್ತಾರೆ?

ರಂಗಾಪುರ ಗ್ರಾಮದಲ್ಲಿರುವ ಸಾಮಾಜಿಕ ಸಂಸ್ಥೆಗಳು, ಪ್ರಯಾಣ ಸಾಧನಗಳ ಬಗ್ಗೆ ತಿಳಿದುಕೊಂಡಿದ್ದಿರಲ್ಲವೇ!





SCERT TELANGANA

ಹಾಗಾದರೆ ಆ ಗ್ರಾಮದಲ್ಲಿರುವವರು ಯಾವ ಯಾವ ಕೆಲಸಗಳನ್ನು ಮಾಡುತ್ತಾರೆಂದು ಗೊತ್ತೇ? ಹೆಚ್ಚು ಜನ ವ್ಯವಸಾಯವನ್ನು ಮಾಡುತ್ತಾರೆ. ಕೆಲವು ಜನರು ಕೂಲಿ ಕೆಲಸವನ್ನು ಮಾಡುತ್ತಾರೆ. ಇನ್ನೂ ಗ್ರಾಮದಲ್ಲಿ ವಿವಿಧ ಕೆಲಸಗಳನ್ನು ಮಾಡುವವರು ಇದ್ದಾರೆ. ಬಡಗಿ, ಕುಂಬಾರ ಮೊದಲಾದ ವೃತ್ತಿಯವರು ಸಹ ಇದ್ದಾರೆ. ಹಾಗೆಯೇ ಗ್ರಾಮದಲ್ಲಿ ಚೆನ್ನಾಗಿ ಓದಿಕೊಂಡು ಉದ್ಯೋಗ ಮಾಡುವವರು ಸಹ ಇದ್ದಾರೆ. ಇನ್ನು ಸ್ವಲ್ಪ ಮಂದಿ ಸಣ್ಣ ಸಣ್ಣ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರವನ್ನು ಮಾಡುತ್ತಾರೆ. ಶಾಲೆ ವಯಸ್ಸಿನ ಮಕ್ಕಳೆಲ್ಲರೂ ಆ ಊರಿನ ಶಾಲೆಯಲ್ಲಿಯೇ ಓದಿಕೊಳ್ಳುತ್ತಿದ್ದಾರೆ. ದೊಡ್ಡ ಹುಡುಗರು ಪಕ್ಕದ ಊರಿಗೆ ಹೋಗಿ ಉನ್ನತ ವಿದ್ಯೆಯನ್ನು ಅಭ್ಯಸಿಸುತ್ತಿದ್ದಾರೆ. ಗ್ರಾಮದಲ್ಲಿರುವ ಸ್ತ್ರೀಯರೆಲ್ಲರೂ ಸಹ ವಿದ್ಯೆಕಲಿತವರೇ. ಅವರು ಸಹ ಯಾವುದೋ ಒಂದು ಕೆಲಸವನ್ನು ಮಾಡಿ ಹಣ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ.



ನಿಮ್ಮ ಗ್ರಾಮದಲ್ಲಿ ಯಾವ ಯಾವ ಕೆಲಸಗಳನ್ನು ಮಾಡುವವರಿದ್ದಾರೆ?

ರಂಗಾಪುರ ಗ್ರಾಮದಲ್ಲಿ ಏನೇನು ಇವೆಯೆಂದು ತಿಳಿದುಕೊಂಡಿರಲ್ಲವೇ? ಇಂತಹ ಸೌಕರ್ಯಗಳು ಎಲ್ಲಾ ಗ್ರಾಮಗಳಲ್ಲಿ ಇರದೇ ಇರಬಹುದು. ಎಲ್ಲಾ ಸೌಕರ್ಯಗಳು ಇದ್ದರೇ ಮಾತ್ರ ಗ್ರಾಮ ಅಭಿವೃದ್ಧಿಹೊಂದುತ್ತದೆ.

## ಕಠಿಣ ಪದಗಳು

| | | |
|---|---|---|
| 1. ಗ್ರಾಮ | 2. ಗ್ರಾಮಪಂಚಾಯಿತಿ | 3. ಬ್ಯಾಂಕು |
| 4. ಪಶುವೈದ್ಯಶಾಲೆ | 5. ಪ್ರಾಥಮಿಕ ಆರೋಗ್ಯಕೇಂದ್ರ | 6. ಅಂಚೆ ಕಛೇರಿ(ಪೋಸ್ಟಾಫೀಸು) |
| 7. ಆರೋಗ್ಯ ಕಾರ್ಯಕರ್ತ | 8. ಪ್ರಾರ್ಥನ ಮಂದಿರಗಳು | 9. ಸಾರಿಗೆ ಸೌಕರ್ಯಗಳು |
| 10. ಸಾಮಾಜಿಕ ಸಂಸ್ಥೆಗಳು | 11. ಜೀವ ವಿಮೆ | 12. ಪೋಲಿಯೋ ಹನಿಗಳು |

## ನಾವು ಕಲಿತುಕೊಂಡಿರುವುದು

* ಸಾಧಾರಣವಾಗಿ ಗ್ರಾಮದಲ್ಲಿ ಗ್ರಾಮಪಂಚಾಯಿತಿ, ಬ್ಯಾಂಕು, ಪಶುವೈದ್ಯಶಾಲೆ, ಪಾಠಶಾಲೆ, ಪ್ರಾಥಮಿಕ ಆರೋಗ್ಯಕೇಂದ್ರ, ಪೋಸ್ಟ್ ಆಫೀಸ್, ದೇವಾಲಯ, ಮಸೀದಿ, ಚರ್ಚ್ ಇರುತ್ತವೆ.
* ಗ್ರಾಮ ಪಂಚಾಯಿತಿ ಚರಂಡಿಗಳನ್ನು ಶುಭ್ರಮಾಡಿಸುವುದು, ಬೀದಿ ದೀಪಗಳನ್ನು ಹಾಕಿಸುವುದು, ಕಸವನ್ನು ತೆಗೆದು ಹಾಕುವುದು, ಕುಡಿಯುವ ನೀರನ್ನು ಸರಬರಾಜು ಮಾಡುವಂತಹ ಕೆಲಸಗಳನ್ನು ಮಾಡುತ್ತದೆ.
* ಗ್ರಾಮದಲ್ಲಿ ಬ್ಯಾಂಕು, ಪೋಸ್ಟ್ ಆಫೀಸ್, ಪಾಠಶಾಲೆ, ಆರೋಗ್ಯಕೇಂದ್ರ, ಪಶುವೈದ್ಯಶಾಲೆ, ಗ್ರಾಮ ಪಂಚಾಯಿತಿಯಂತಹ ಸಂಸ್ಥೆಗಳು ಇರುವುದರಿಂದ ಎಷ್ಟೋ ಒಳ್ಳೆಯದು ಆಗುತ್ತದೆ.
* ಗ್ರಾಮಗಳಿಗೆ ಸಾರಿಗೆ ಮಾರ್ಗಗಳು ಇರುತ್ತವೆ. ವಿವಿಧ ಬಗೆಯ ಸಾರಿಗೆ ಸಾಧನಗಳು ಬಂದು ಹೋಗುತ್ತಿರುತ್ತವೆ.
* ಗ್ರಾಮದಲ್ಲಿ ವಿವಿಧ ರೀತಿಯ ಕೆಲಸಗಳನ್ನು ಮಾಡುವವರು ಇರುತ್ತಾರೆ.

SCERT TELANGANA





# ಇವು ಮಾಡಿರಿ




## ವಿಷಯಾವಗಾಹನೆ

1. ರಂಗಾಪುರ ಗ್ರಾಮದಲ್ಲಿ ಏನೇನು ಇವೆ?
2. ನಿಮ್ಮ ಊರಿನಲ್ಲಿ/ಬೀದಿಯಲ್ಲಿ ಇರುವ ಪ್ರಾರ್ಥನಾ ಮಂದಿರಗಳ ಹೆಸರುಗಳನ್ನು ಬರೆಯಿರಿ.
3. ನಿಮ್ಮ ಗ್ರಾಮದಲ್ಲಿ ಶಾಲೆ ಇಲ್ಲದಿದ್ದರೆ ಏನಾಗುತ್ತದೆ?
4. ಗ್ರಾಮದಲ್ಲಿ ಬ್ಯಾಂಕು ಇದ್ದರೆ ಆಗುವ ಲಾಭಗಳು ಏನು?
5. ಬ್ಯಾಂಕಿಗೆ, ಅಂಚೆಕಚೇರಿಗೆ(ಪೋಸ್ಟ್ ಆಫೀಸ್) ಮಧ್ಯ ಇರುವ ಹೋಲಿಕೆಗಳು, ವ್ಯತ್ಯಾಸಗಳನ್ನು ಬರೆಯಿರಿ.



## ಚಿತ್ರಗಳನ್ನು ಬಿಡಿಸಿರಿ. ಬಣ್ಣ ಹಾಕಿರಿ.

1. ಪಾಠಶಾಲೆಯ ಚಿತ್ರ ಬಿಡಿಸಿರಿ. ಬಣ್ಣ ಹಾಕಿರಿ.





## ಸಮಾಚಾರ ಕೌಶಲ್ಯ – ಪ್ರಾಜೆಕ್ಟ್ ಕೆಲಸ

1. ರಂಗಾಪುರ ಗ್ರಾಮದಲ್ಲಿ ಏನೇನು ಇವೆಯೆಂದು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ. ಅವು ನಿಮ್ಮ ಗ್ರಾಮದಲ್ಲಿ ಇದ್ದರೆ (✓) ಹಾಕಿರಿ.

| | ರಂಗಾಪುರ ಗ್ರಾಮದಲ್ಲಿ ಇರುವವು | ನಿಮ್ಮ ಗ್ರಾಮದಲ್ಲಿ ಇರುವವು |
|---|---|---|
| 1 | | |
| 2 | | |
| 3 | | |
| 4 | | |
| 5 | | |
| 6 | | |





SCERT TELANGANA

- ರಂಗಾಪುರ ಗ್ರಾಮದಲ್ಲಿ ಇರುವಂತಹವುಗಳಲ್ಲಿ ಯಾವುವು ನಿಮ್ಮ ಊರಿನಲ್ಲೂ ಇವೆ?
- ರಂಗಾಪುರ ಗ್ರಾಮದಲ್ಲಿ ಇದ್ದು ನಿಮ್ಮ ಊರಿನಲ್ಲಿ ಇಲ್ಲದಿರುವುದು ಯಾವುವು?
- ರಂಗಾಪುರ ಗ್ರಾಮದಲ್ಲಿ ಇಲ್ಲದಿರುವುದು ನಿಮ್ಮ ಗ್ರಾಮದಲ್ಲಿ ಇದ್ದರೆ ಅವು ಯಾವವು?

2. ನಿಮ್ಮ ಗ್ರಾಮದಲ್ಲಿರುವ ಸಾಮಾಜಿಕ ಸಂಸ್ಥೆಗಳ ಹೆಸರು, ಅವು ಮಾಡುವ ಕೆಲಸಗಳನ್ನು ತಿಳಿದುಕೊಂಡು ಹೇಳಿರಿ, ಬರೆಯಿರಿ.

| ಕ್ರ.ಸಂ. | ಸಾಮಾಜಿಕ ಸಂಸ್ಥೆಗಳು | ಅವು ಮಾಡುವ ಕೆಲಸಗಳು |
|---|---|---|
| | | |



## ಪ್ರಶಂಸೆ

1. ಗ್ರಾಮದಲ್ಲಿ ಪಾಠಶಾಲೆ, ಬ್ಯಾಂಕು, ಪೋಸ್ಟಾಫೀಸು, ವೈದ್ಯಶಾಲೆ ಮೊದಲಾದವುಗಳು ಇದ್ದರೆ ಏನೇನು ಲಾಭಗಳಿವೆ ಎಂದು ತಿಳಿದುಕೊಂಡಿದ್ದೀರಲ್ಲವೇ! ಅವುಗಳ ಸೇವೆಯ ಬಗ್ಗೆ ನೀನು ಹೇಗೆ ಸ್ಪಂದಿಸುವೆ?



## ಪ್ರಶ್ನಿಸುವುದು.

1. ಕಾರ್ತಿಕ್ ರಂಗಾಪುರಕ್ಕೆ ಹೋದನು. ರಂಗಾಪುರದ ಬಗ್ಗೆ ತಿಳಿದುಕೊಳ್ಳಬೇಕೆಂದುಕೊಂಡನು. ಅದಕ್ಕಾಗಿ ಶಾಲೆಗೆ ಹೋಗಿ ಶಿಕ್ಷಕರನ್ನು ಭೇಟಿಯಾದನು. ಊರಿನ ಬಗ್ಗೆ ಕೇಳಿದನು. ಕಾರ್ತಿಕ್ ಏನೇನು ಪ್ರಶ್ನೆಗಳನ್ನು ಕೇಳಿದನು. ಶಿಕ್ಷಕರು ಏನೇನು ಉತ್ತರಗಳನ್ನು ಹೇಳಿರುತ್ತಾರೆ.



## ನಾನು ಇವನ್ನು ಮಾಡಬಲ್ಲೇನಾ?



1. ಗ್ರಾಮ ಅಂದರೆ ವಿವರಿಸಬಲ್ಲೆನು. ಹೌದು/ಇಲ್ಲ
2. ಗ್ರಾಮದಲ್ಲಿರುವ ಸಾಮಾಜಿಕ ಸಂಸ್ಥೆಗಳು ಅವು ಮಾಡುವ ಕೆಲಸಗಳ ಬಗ್ಗೆ ವಿವರಿಸಬಲ್ಲೆನು. ಹೌದು/ಇಲ್ಲ
3. ಗ್ರಾಮದಲ್ಲಿರುವ ಸಂಸ್ಥೆಗಳ ಉಪಯೋಗಗಳನ್ನು ತಿಳಿದುಕೊಂಡಿದ್ದೇನೆ ಅವುಗಳನ್ನು ಉಪಯೋಗಿಸಿಕೊಳ್ಳಬಲ್ಲೆನು. ಹೌದು/ಇಲ್ಲ
4. ಪಾಠಶಾಲೆಯ ಚಿತ್ರ ಬಿಡಿಸಿ ಬಣ್ಣ ಹಾಕಬಲ್ಲೆನು. ಹೌದು/ಇಲ್ಲ
5. ಗ್ರಾಮದ ಬಗ್ಗೆ ಪ್ರಶ್ನೆಗಳನ್ನು ಕೇಳಬಲ್ಲೆನು. ಹೌದು/ಇಲ್ಲ

SCERT TELANGANA





# 10. ವಿವಿಧ ಮಾದರಿಯ ಮನೆಗಳು



ನಮಗೆಲ್ಲರಿಗೂ ಇರುವುದಕ್ಕೆ ಮನೆ ಅವಶ್ಯಕ. ಬಿಸಿಲು, ಮಳೆ, ಚಳಿ, ಧೂಳು ಮೊದಲಾದವುಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ಮನೆಯಲ್ಲಿ ವಾಸ ಮಾಡುತ್ತೇವೆ. ನಮ್ಮ ಹಾಗೆ ಪಕ್ಷಿಗಳು, ಪ್ರಾಣಿಗಳು ಸಹ ವಾಸ ಸ್ಥಳಗಳನ್ನು ಏರ್ಪಡಿಸಿ ಕೊಳ್ಳುತ್ತವೆ. ಆದರೆ ನಾವು ವಾಸಿಸುವ ಮನೆಗಳೆಲ್ಲಾ ಒಂದೇ ರೀತಿಯಾಗಿವೆಯೇ? ಒಂದು ದಿನ ಸಾಯಂಕಾಲ ಹೊಲದಿಂದ ತಂದೆ ತಾಯಿಯೊಂದಿಗೆ ಸೇರಿ ಸಂತೋಷ, ಸರಳ, ಮನೆಗೆ ಬರುತ್ತಿದ್ದಾರೆ. ಸರಳ, ಸಂತೋಷ್ ರಸ್ತೆಯ ಪಕ್ಕದಲ್ಲಿ ಇರುವ ಬೆಟ್ಟವನ್ನು ಹತ್ತಿದರು. ಬೆಟ್ಟದ ಮೇಲಿಂದ ಗ್ರಾಮದಲ್ಲಿರುವ ಮನೆಗಳನ್ನು ನೋಡಿದರೆ, ಅವು ಹೇಗೆ ಕಾಣಿಸಿವೆಯೋ, ಯಾವ ವಿಧಧ ಮನೆಗಳು ಇವೆಯೋ ನೋಡೋಣವೇ.





ಮನೆಗಳೆಲ್ಲಾ ಒಂದೇ ರೀತಿಯಾಗಿವೆಯೇ? ಯಾವ ವಿಧಧ ಮನೆಗಳು ಇವೆ?
ಗ್ರಾಮದಲ್ಲಿರುವ ಮನೆಗಳೆಲ್ಲಾ ಅಕ್ಕ ಪಕ್ಕದಲ್ಲಿ ಇವೆಯೇ? ಇಲ್ಲವೆ ದೂರ ದೂರವಾಗಿ ಇವೆಯೇ?


ಸರಳಾಲ ಗ್ರಾಮದಲ್ಲಿರುವ ಮನೆಗಳೆಲ್ಲಾ ಹೇಗೆ ಇವೆಯೋ ತಿಳಿದಿದೆ ಅಲ್ಲವೆ!ಗ್ರಾಮದಲ್ಲಿ ವಿವಿಧ ಮನೆಗಳು ಪಕ್ಕ ಪಕ್ಕದಲ್ಲೇ ಇರುವುದನ್ನು ನೋಡಿದ್ದೀರಲ್ಲವೇ!ಅಂದರೆ ನಮ್ಮ ಊರಿನಲ್ಲಿ ಸಹ ಮನೆಗಳು ಇದೇ ರೀತಿಯಾಗಿ ಇವೆಯೇ?ನಿಮ್ಮಊರಿನಲ್ಲಿ ಯಾವ ಯಾವ ಮಾದರಿಯ ಮನೆಗಳು ಇವೆಯೋ ಬರೆಯಿರಿ.ಗ್ರಾಮಗಳಲ್ಲಿ ಮನೆಗಳೆಲ್ಲಾ ಅಕ್ಕ ಪಕ್ಕದಲ್ಲಿಯೇ ಇರುವುದರಿಂದ ಆಗುವ ಲಾಭಗಳೇನು?



## ತಾತ್ಕಾಲಿಕ ನಿವಾಸಗಳು



ಸಂತೋಷ್ ಶಾಲೆಗೆ ಬಂದನು. ಸಂತೋಷ್ ಗಾಬರಿಯಿಂದ ಇರುವುದನ್ನು ಜೋಸೆಫ್ ನೋಡಿದನು. ಏಕೆ ಹಾಗಿರುವೆ? ಎಂದು ಜೋಸೆಫ್ ಕೇಳಿದನು. ರಾತ್ರಿ ಗಾಳಿಮಳೆ ಬಂದಿದೆಯಲ್ಲಾ! ನಮ್ಮ ಗುಡಿಸಲುಗಳೆಲ್ಲಾ ಬಿದ್ದು ಹೋದವು ಎಂದು ಸಂತೋಷ್ ಹೇಳಿದನು. ಹಾಗಾದರೇ ನೀವು ಈಗ ಎಲ್ಲಿ ಇದ್ದೀರಾ ಎಂದು ಜೋಸೆಫ್ ಕೇಳಿದನು. ನಮಗಾಗಿ ಊರ ಹೊರಗಡೆ ಡೇರೆಗಳನ್ನು ಹಾಕಿದ್ದಾರೆ ಎಂದು ಸಂತೋಷ್ ಹೇಳಿದನು. ಎಂದಾದರೂ ನೀವು ಡೇರೆಗಳನ್ನು ನೋಡಿದ್ದೀರಾ? ಅದನ್ನು ಯಾವಾಗ ನೋಡಿದ್ದೀರಿ? ಏಕೆ ಹಾಕಿರುತ್ತಾರೆ? ಆಲೋಚಿಸಿರಿ.



ಊರೂರು ಸಂಚಾರಮಾಡುವವರು., ಸರ್ಕಸ್‌ನವರು ತಾತ್ಕಾಲಿಕ ನಿವಾಸಗಳನ್ನು ಏರ್ಪಡಿಸಿಕೊಳ್ಳುವರು. ಪ್ರವಾಹಗಳು ತುಫಾನ್‌ಗಳು, ಸುನಾಮಿಗಳು, ಭೂಕಂಪಗಳು, ಬೆಂಕಿ ಅಪಘಾತಗಳು ಆದಾಗ ಮನೆ ಕಳೆದುಕೊಂಡವರಿಗೆ ತಾತ್ಕಾಲಿಕ ನಿವಾಸಗಳನ್ನು ಏರ್ಪಾಟುಮಾಡುತ್ತಾರೆ.

ಸಂತೋಷ್ ಅವನ ಮಾವನ ಮದುವೆಗೆ ಪಟ್ಟಣಕ್ಕೆ ಹೋದನು.ರಸ್ತೆಯ ಪಕ್ಕದಲ್ಲಿರುವ ದೊಡ್ಡ ದೊಡ್ಡ ಪೈಪುಗಳನ್ನು ನೋಡಿದನು.ಹೋಗುವ ದಾರಿಯಲ್ಲಿ ಅದರಲ್ಲಿ ಕೆಲವರು ನಿವಾಸ ಮಾಡುತ್ತಿದ್ದಾರೆ. ಅದನ್ನು ನೋಡಿ ಸಂತೋಷನಿಗೆ ಆಶ್ಚರ್ಯ ವಾಯಿತು.ಹೀಗೆ ಪೈಪಿನಲ್ಲೂ ಸಹ ನಿವಾಸ ಇರುತ್ತಾರೆಯೇ?ಎಂದುಕೊಂಡನು.ಪೈಪುಗಳಲ್ಲಿ ಏಕೆ ನಿವಸಿಸುತ್ತಾರೆ?ಎಂದು ಅವನ ಮಾವನನ್ನು ಕೇಳಿದನು.ಅವನ ಮಾವ ಏನು ಹೇಳಿರಬಹುದೆಂದು ಆಲೋಚಿಸಿರಿ.







SCERT TELANGANA




ಡೇರಾಗಳಲ್ಲಿ, ಪೈಪುಗಳಲ್ಲಿ ನಿವಾಸ ಮಾಡುವವರಿಗೆ ಯಾವ ಸೌಕರ್ಯಗಳು ಇರುವುದಿಲ್ಲವೋ ಬರೆಯಿರಿ.
ಡೇರಾಗಳು, ಪೈಪುಗಳಂತಹ ತಾತ್ಕಾಲಿಕ ನಿವಾಸಗಳಲ್ಲಿ ಇರುವವರಿಗೆ ಯಾವ ತೊಂದರೆಗಳು ಇರುತ್ತವೆ?

ಬರಗಾಲ ಬಂದಾಗ, ಊರುಗಳಲ್ಲಿ ಕೆಲಸ ಇಲ್ಲದಿದ್ದಾಗ ಕೆಲವು ಮಂದಿ ಕೆಲಸಕ್ಕೋಸ್ಕರ ಪಟ್ಟಣಗಳಿಗೆ ವಲಸೆ ಹೋಗುತ್ತಿರುತ್ತಾರೆ. ಹೀಗೆ ಪಟ್ಟಣಗಳಿಗೆ ಹೋದವರಿಗೆ ಇರುವದಕ್ಕೆ ಮನೆ ಇರುವುದಿಲ್ಲ. ಇವರು ರಸ್ತೆಯ ಪಕ್ಕದಲ್ಲಿ ಖಾಲಿ ಇರುವ ಪೈಪುಗಳಲ್ಲಾದರೂ, ಖಾಲಿ ಸ್ಥಳದಲ್ಲಿ ಡೇರಾಗಳನ್ನು ಹಾಕಿಕೊಂಡು ಇಲ್ಲವೆ ಗುಡಿಸಲು ಹಾಕಿಕೊಂಡು ತಾತ್ಕಾಲಿಕವಾಗಿ ನಿವಾಸವಿರುತ್ತಾರೆ.



ಸಂತೋಷ್ ಪಟ್ಟಣದಲ್ಲಿ ದೊಡ್ಡ ಭವನವನ್ನು ನೋಡಿದನು. 'ಅಬ್ಬಾ! ಎಷ್ಟು ಎತ್ತರವಾಗಿದೆ! ಇದರಲ್ಲಿ ಯಾರು ಇರುತ್ತಾರೆ' ಎಂದು ಮಾವನನ್ನು ಕೇಳಿದನು. ಪಟ್ಟಣದಲ್ಲಿ ಸ್ಥಳ ಕಡಿಮೆ ಇರುತ್ತದೆ. ಅದಕ್ಕಾಗಿ ಇರುವ ಸ್ಥಳದಲ್ಲೇ ಹೆಚ್ಚು ಕುಟುಂಬಗಳು ನಿವಾಸ ಇರುವದಕ್ಕೆ ಇಂತಹ ದೊಡ್ಡ ದೊಡ್ಡ ಭವನಗಳು ಕಟ್ಟುತ್ತಾರೆ. ಇವುಗಳನ್ನು ಅಪಾರ್ಟ್‌ಮೆಂಟ್‌ಗಳೆಂದು ಕರೆಯುತ್ತಾರೆಂದು ಮಾವನು ಸಂತೋಷನಿಗೆ ಹೇಳಿದನು.




ಇಂತಹವುಗಳನ್ನು ನೀವು ಎಂದಾದರೂ ನೋಡಿದ್ದೀರಾ?

* ಅಪಾರ್ಟ್‌ಮೆಂಟುಗಳು ನಗರಗಳಲ್ಲಿ ಹೆಚ್ಚಾಗಿ ಇರುತ್ತವೆ. ಸಾಧಾರಣವಾಗಿ ಒಂದು ಕುಟುಂಬ ಒಂದು ಮನೆಯಲ್ಲಿ ಇರುತ್ತದೆ. ಇದಕ್ಕೆ ಅನುಗುಣವಾಗಿ ಅಪಾರ್ಟುಮೆಂಟುಗಳನ್ನು ಕಟ್ಟುತ್ತಾರೆ. ಒಂದು ಕುಟುಂಬ ನಿವಾಸ ಇರುವ ಸ್ಥಳವನ್ನು ಪ್ಲಾಟ್ ಎನ್ನುತ್ತಾರೆ. ಒಂದು ಅಪಾರ್ಟ್‌ವೆಂಟ್‌ನಲ್ಲಿ ಸುಮಾರು 10 ರಿಂದ 30 ಕುಟುಂಬಗಳ ವರಗೆ ನಿವಾಸ ಇರುವದಕ್ಕೆ ಪ್ಲಾಟ್‌ಗಳು ಇರುತ್ತವೆ. ದೊಡ್ಡ ನಗರಗಳಲ್ಲಿ 100 ರವರೆಗೂ ಪ್ಲಾಟ್‌ಗಳು ಇರುವ ಅಪಾರ್ಟ್‌ಮೆಂಟ್‌ಗಳು ಸಹ ಇರುತ್ತವೆ.

SCERT TELANGANA





ಡೇರಾಗಳು, ಪೈಪುಗಳು, ಅಪಾರ್ಟ್‌ಮೆಂಟ್‌ಗಳ ಬಗ್ಗೆ ತಿಳಿದುಕೊಂಡಿದ್ದೀರಲ್ಲವೇ! ಈ ಕೆಳಗಿನ ಚಿತ್ರಗಳನ್ನು ನೋಡಿರಿ. ಇವುಗಳಲ್ಲಿ ನಿಮ್ಮ ಮನೆ ಯಾವ ಮಾದರಿಯದೆಂದು ಹೇಳಿರಿ.





ಹಾಗಾದರೆ ನಿಮ್ಮ ಸ್ನೇಹಿತರು ಇರುವ ಮನೆಗಳು ಯಾವ ಮಾದರಿಯವು ನಿಮಗೆ ಗೊತ್ತಾ? ನಿಮ್ಮ ಸ್ನೇಹಿತರನ್ನು ಕೇಳಿರಿ. ಎಂತಹ ಮನೆಗಳಲ್ಲಿ ವಾಸಿಸುತ್ತಾರೆಂದು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಕ್ರ.ಸಂ. | ಸ್ನೇಹಿತನ ಹೆಸರು. | ಮನೆಯ ವಿಧ |
|---|---|---|
| 1 | | |
| 2 | | |
| 3 | | |
| 4 | | |
| 5 | | |

ನಿಮ್ಮ ಹಾಗೆ ನಿಮ್ಮ ಸ್ನೇಹಿತರು ಸಹ ಪಟ್ಟಿಯನ್ನು ತಯಾರು ಮಾಡಿದ್ದಾರೆ ಅಲ್ಲವೇ! ಅವರನ್ನು ಕೇಳಿ ನಿಮ್ಮ ತರಗತಿಯಲ್ಲಿ ಎಷ್ಟು ಮಂದಿ ಯಾವ ರೀತಿಯ ಮನೆಗಳಲ್ಲಿ ವಾಸಿಸುತ್ತಾರೆಂದು ತಿಳಿದುಕೊಳ್ಳಿರಿ. ಹೆಚ್ಚು ಮಂದಿ ಯಾವ ರೀತಿಯ ಮನೆಗಳಲ್ಲಿ ವಾಸಿಸುತ್ತಾರೆಂದು ಹೇಳಿರಿ

**ನಿಮ್ಮಗೆ ಗೊತ್ತೇ?**



ಇದು ಕಟ್ಟಿಗೆಯಿಂದ ಮಾಡಿದ ಮನೆ .ಭೂಕಂಪಗಳು ಬರುವ ಪ್ರಾಂತಗಳಲ್ಲಿ ಇರುತ್ತವೆ.



ಇದು ಹಡಗು ಮನೆ. ಕಾಶ್ಮೀರ್, ಕೇರಳ ರಾಷ್ಟ್ರಗಳಲ್ಲಿ ಇಂತಹ ಮನೆಗಳು ಇವೆ.



ಇದು 'ಇಗ್ಲೂ' ಹಿಮ ಪ್ರಾಂತ್ಯಗಳಲ್ಲಿ ಇರುತ್ತವೆ. ಇದನ್ನು ಮಂಜುಗಡ್ಡೆಯಿಂದ ಕಟ್ಟಿಕೊಳ್ಳುತ್ತಾರೆ.

SCERT TELANGANA







## ಮನೆಯ ಮೇಲ್ಛಾವಣಿಗಳು

ಮನೆಯ ಬಗ್ಗೆ ತಿಳಿದುಕೊಂಡಿದ್ದೀರಿ ಅಲ್ಲವೇ!

ಮನೆಯ ಮೇಲ್ಛಾವಣಿ ಅಂದರೆ ನಿಮಗೆ ಗೊತ್ತೇ ! ಮನೆಯ ಮೇಲೆ ಇರುವ ಭಾಗವನ್ನು ಮನೆಯ ಮೇಲ್ಛಾವಣಿ ಎನ್ನುವರು. ಕೆಲವು ಮನೆಗಳ ಮೇಲ್ಛಾವಣಿ ಚಿತ್ರಗಳು ಕೆಳಗಿನಂತಿವೆ ನೋಡಿರಿ.



ಎಲ್ಲಾ ಮನೆಗಳ ಮೇಲ್ಛಾವಣಿಗಳು ಒಂದೇ ಮಾದರಿಯಾಗಿವೆಯೇ? ಕೆಲವು ಓರೆಯಾಗಿ ಇವೆ ಅಲ್ಲವೆ! ಮತ್ತೆ ಕೆಲವು ಛಾವಣಿಗಳು ಸಮತಟ್ಟಾಗಿ ಇರುತ್ತವೆ. ಹಾಗಾದರೆ ನಿಮ್ಮ ಗ್ರಾಮ/ಬೀದಿಗಳಲ್ಲಿರುವ ಮನೆಗಳ ಮೇಲ್ಛಾವಣಿಗಳು ಹೆಚ್ಚಾಗಿ ಯಾವ ರೀತಿ ಇವೆಯೆಂದು ಹೇಳಿರಿ.


**ಮಾಡಿ ನೋಡಿರಿ.** ಮನೆಯ ಮೇಲ್ಛಾವಣೆಗಳು ಏಕೆ ಓರೆಯಾಗಿರುತ್ತವೆಂದು ನಿಮಗೆ ಗೊತ್ತಾ ?




ಮೂರು ರೆಕ್ಕೆಗಳು ಇಲ್ಲವೆ ಹಲಗೆಗಳು ಇಲ್ಲವೆ ದಪ್ಪವಾಗಿರುವ ಗಟ್ಟಿಯಾದ ರಟ್ಟನ್ನು ತೆಗೆದುಕೊಳ್ಳಬೇಕು. ಒಂದನ್ನು ನೆಲದ ಮೇಲೆ ಇಡಿರಿ. ಎರಡನೆಯದನ್ನು ಒಂದು ಇಟ್ಟಿಗೆಗೆ ಆನಿಸಿಡಿರಿ. ಮೂರನೆಯದನ್ನು ಎರಡು ಇಟ್ಟಿಗೆಗಳ ಮೇಲೆ ಆನಿಸಿಡಿರಿ. ಹೀಗೆ ಇಟ್ಟಾಗ ಯಾವುದು ಹೆಚ್ಚಾಗಿ ಓರೆಯಾಗಿರುತ್ತದೆ.



ನೆಲದ ಮೇಲೆ ಇಟ್ಟಿರುವ ತಗಡು



ಒಂದು ಇಟ್ಟಿಗೆಗೆ ಆನಿಸಿ ಇಟ್ಟಿರುವ ತಗಡು.



ಎರಡು ಇಟ್ಟಿಗೆಗಳಿಗೆ ಆನಿಸಿ ಇಟ್ಟಿರುವ ತಗಡು.

SCERT TELANGANA



ಈಗ ಗ್ಲಾಸಿನಲ್ಲಿ ನೀರನ್ನು ತೆಗೆದುಕೊಂಡ್ಡು ಮೊದಲನೆಯದರ ಮೇಲೆ ಸುರಿಯಿರಿ. ನಂತರ ಎರಡನೆಯದರ ಮೇಲೆ ಸುರಿಯಿರಿ. ನಂತರ ಮೂರನೆಯದರ ಮೇಲೆ ಸುರಿಯಿರಿ. ಯಾವುದರ ಮೇಲೆ ಸುರಿದ ನೀರು ಬೇಗನೆ ಕೆಳಗೆ ಹೋಯಿತು.?

**ಏಕೆಂದು ಹೇಳಿರಿ.**

ಮೇಲ್ಛಾವಣೆಗಳು ಓರೆಯಾಗಿರುವದರಿಂದ ನೀರು ವೇಗವಾಗಿ ಕೆಳಕ್ಕೆ ಬೀಳುತ್ತವೆ. ಅದಕ್ಕಾಗಿಯೇ ಮನೆಯ ಮೇಲ್ಛಾವಣೆಗಳನ್ನು ಓರೆಯಾಗಿ ಕಟ್ಟುತ್ತಾರೆ. ಇದರಿಂದ ಮಳೆಗಾಲದಲ್ಲಿ ಮಳೆ ಬಂದಾಗ ಮನೆಯ ಮೇಲ್ಛಾವಣಿಯ ಮೇಲೆ ಬಿದ್ದ ನೀರು ಜಾರಿ ಕೆಳಕ್ಕೆ ಬೀಳುತ್ತವೆ.

ಭವನಗಳ ಮೇಲ್ಛಾವಣೆಗಳು ಓರೆಯಾಗಿ ಇರವುದಿಲ್ಲವಲ್ಲಾ! ಮಳೆಯ ನೀರು ಕೆಳಗೆ ಹೇಗೆ ಹೋಗುತ್ತವೆ ?

ಭವನಗಳು, ಅಪಾರ್ಟ್‌ಮೆಂಟ್‌ಗಳ ಮೇಲ್ಛಾವಣೆಗಳು ಸಮತಟ್ಟಾಗಿ ಕಂಡರೂ ಸಹ ಸ್ವಲ್ಪ ಇಳಿಜಾರಾಗಿ ಇರುತ್ತವೆ. ಅವುಗಳ ಮೇಲೆ ಬೀಳುವ ನೀರು ಯಾವದೋ ಒಂದು ಮೂಲೆಯ ಕಡೆಗೆ ಹೋಗುವಂತೆ ಏರ್ಪಾಟು ಮಾಡಿರುತ್ತಾರೆ. ಅಲ್ಲಿಂದ ಪೈಪುಗಳ ಮೂಲಕ ನೀರು ಕೆಳಕ್ಕೆ ಹೋಗುತ್ತವೆ.

ನಾವು ವಾಸಿಸುವ ಮನೆಗಳು ವಿವಿಧ ರೀತಿಗಳಲ್ಲಿ ಇರುತ್ತವೆ, ಅವುಗಳಲ್ಲಿ ಹಂಚಿನ ಮನೆ, ಗುಡಿಸಲುಗಳು, ಡಾಬಾಗಳು, ತಗಡಿನ ಮನೆಗಳು ಹೆಚ್ಚಾಗಿ ಕಾಣಿಸುತ್ತವೆ. ಇವು ಶಾಶ್ವತ ನಿವಾಸಗಳು, ಡೇರಾಗಳು, ಗುಡಾರಗಳು, ಪೈಪುಗಳಂತಹ ತಾತ್ಕಾಲಿಕ ನಿವಾಸಗಳಲ್ಲಿ ಸಹ ಕೆಲವು ಮಂದಿ ವಾಸಿಸುತ್ತಾರೆ. ಆದರೆ ಪಟ್ಟಣಗಳಲ್ಲಿ ಅಪಾರ್ಟ್‌ಮೆಂಟುಗಳು ಸಹ ಇರುತ್ತವೆ.

**ಮುಖ್ಯ ಪದಗಳು**

| | | |
|---|---|---|
| 1 ಮನೆಯ ಪ್ರಕಾರಗಳು | 2 ಸಂಚಾರ | 3 ಅಪಾರ್ಟ್‌ಮೆಂಟ್ |
| 4. ಪ್ಲಾಟ್ | 5 . ಓರಿಯಾಗಿ (ಇಳಿಜಾರು) | 6. ಮನೆಯ ಮೇಲ್ಛಾವಣೆ |
| 7. ಇಗ್ಲೂ | 8 . ಹಡಗಿನ ಮನೆ | 9. ತಾತ್ಕಾಲಿಕ ನಿವಾಸ |

**ನಾವು ಕಲಿತು ಕೊಂಡಿರುವುದು**

- ಗುಡಿಸಲು, ಹೆಂಚಿನ ಮನೆ , ತಗಡಿನ ಮನೆ, ಡಾಬ ಮನೆ, ಬಹು ಅಂತಸ್ತಿನ ಮಹಡಿಗಳಂತಹ ವಿವಿಧ ಪ್ರಕಾರದ ಮನೆಗಳು ಇರುತ್ತವೆ.
- ಪ್ರವಾಹಗಳು, ತುಫಾನ್‌ಗಳು ಬಂದಾಗ ತಾತ್ಕಾಲಿಕ ನಿವಾಸಗಳನ್ನು ಏರ್ಪಾಟು ಮಾಡುತ್ತಾರೆ. ಸಂಚಾರ ಜೀವನ ಮಾಡುವವರು, ವಲಸೆ ಹೋಗುವವರು ಡೇರಾಗಳಂತಹ ತಾತ್ಕಾಲಿಕ ನಿವಾಸಗಳಲ್ಲಿ ಇರುತ್ತಾರೆ.
- ನಗರಗಳಲ್ಲಿ ಪಟ್ಟಣಗಳಲ್ಲಿ ಅಪಾರ್ಟ್‌ಮೆಂಟ್‌ಗಳು ಇರುವಂತೆ ಕೆಲವು ಪ್ರಾಂತ್ಯಗಳಲ್ಲಿ ಮಂಜುಗಡ್ಡೆಯಿಂದ ಕಟ್ಟಿದ ಮನೆಗಳು, ಕಟ್ಟಿಗೆಯಿಂದ ಕಟ್ಟಿದ ಮನೆಗಳು, ಹಡಗಿನ ಮನೆಗಳು ಸಹ ಇರುತ್ತವೆ.
- ಮನೆಯ ಮೇಲ್ಛಾವಣೆಗಳು ಇಳಿಜಾರಾಗಿ ಇರುವದರಿಂದ ಮಳೆಯ ನೀರು ವೇಗವಾಗಿ ಕೆಳಕ್ಕೆ ಜಾರಿ ಬೀಳುತ್ತದೆ.

SCERT TELANGANA





## ಇವು ಮಾಡಿರಿ



### ವಿಷಯಾವಗಾಹನೆ

1. ಕೆಳಗಿನ ಮನೆಗಳಲ್ಲಿ ಯಾವುವು ತಾತ್ಕಾಲಿಕ ನಿವಾಸಗಳು, ಏಕೆ?

   ಡೇರಾಗಳು, ಅಪಾರ್ಟ್ಮೆಂಟುಗಳು, ತಗಡಿನ ಷೆಡ್, ಪೈಪುಗಳಲ್ಲಿ ನಿವಾಸ.

2. ನಿಮ್ಮ ನಿವಾಸ ಪ್ರಾಂತ್ಯದಲ್ಲಿರುವ ನಾಲ್ಕು ಮಾದರಿಯ ಮನೆಗಳನ್ನು ಹೇಳಿರಿ.
3. ಮನೆಯ ಮೇಲ್ಛಾವಣಿಗಳು ಓರೆಯಾಗಿರುತ್ತವೆ. ಏತಕ್ಕಾಗಿ ?
4. ಕೆಳಗಿರುವ ಎರಡು ಮನೆಗಳಿಗೆ ಇರುವ ಹೋಲಿಕೆ, ವ್ಯತ್ಯಾಸಗಳನ್ನು ಹೇಳಿರಿ. ಬರೆಯಿರಿ.








### ಚಿತ್ರ ಬಿಡಿಸಿರಿ ಬಣ್ಣ ಹಾಕಿರಿ.

1. ಕೆಳಗಿನ ಚಿತ್ರ ಬಿಡಿಸಿರಿ. ಬಣ್ಣ ಹಾಕಿರಿ.



2. ನಿಮ್ಮ ಮನೆಯ ಚಿತ್ರ ಬಿಡಿಸಿ ಬಣ್ಣ ಹಾಕಿರಿ. ನಿಮ್ಮ ಮನೆಯನ್ನು ಕುರಿತು ಬರೆಯಿರಿ.

SCERT TELANGANA





## ಸಮಾಚಾರ ಕೌಶಲ್ಯ –ಪ್ರಾಜೆಕ್ಟ್ ಕೆಲಸ

1. ನಿಮ್ಮ ಮನೆಯ ಸುತ್ತಮುತ್ತ ಇರುವ ಕೆಲವು ಮನೆಗಳನ್ನು ನೋಡಿರಿ. ಅವುಗಳ ಮೇಲ್ಛಾವಣಿಗಳು ಹೇಗೆ ಇವೆಯೆಂದು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ

| ಕ್ರ.ಸಂ. | ಮನೆಯ ವಿಧ | ಮನೆಯ ಮೇಲ್ಛಾವಣಿ | |
|---|---|---|---|
| | | ಸಮತಟ್ಟಾಗಿ | ಓರೆಯಾಗಿ |
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |

1) ಯಾವ ವಿಧವಾದ ಮನೆಗಳು ಹೆಚ್ಚಾಗಿ ಇವೆ? ..........................

2) ಮನೆಯ ಮೇಲ್ಛಾವಣಿಗಳು ಹೇಗೆ ಇವೆ? ........................

2. ಬೆಂಡು, ಕಾಗದ, ರಟ್ಟು, ಕಡ್ಡಿಗಳು, ಹುಲ್ಲನ್ನು ಉಪಯೋಗಿಸಿ ಮನೆಯ ಮಾದರಿಯನ್ನು ತಯಾರು ಮಾಡಿರಿ



## ಪ್ರಶಂಸೆ

1. ಗುಡಾರಗಳು, ಡೇರಾಗಳು, ಪೈಪುಗಳಲ್ಲಿ ನಿವಾಸವಾಗಿರುವವರಿಗೆ ನಾವು ಎಂತಹ ಸಹಾಯವನ್ನು ಮಾಡಬಹುದು? ನೀವು ಅವರಿಗೆ ಎಂತಹ ಸಹಾಯವನ್ನು ಮಾಡಬಲ್ಲಿರಿ?



## ಪ್ರಶ್ನಿಸುವದು.

1. ಸಂತೋಷ್ ಹೈದರಾಬಾದ್‌ನಲ್ಲಿ ಅಪಾರ್ಟ್‌ಮೆಂಟುಗಳಲ್ಲಿ, ಪೈಪುಗಳಲ್ಲಿ ವಾಸವಾಗಿ ಇರುವವರನ್ನು ನೋಡಿದ್ದಾನಲ್ಲವೆ! ಅವರ ಬಗ್ಗೆ ಸಂತೋಷ್ ತನ್ನ ಮಾವನಿಗೆ ಹಲವಾರು ವಿಧಧ ಪ್ರಶ್ನೆಗಳನ್ನು ಕೇಳಿದನು. ಆ ಪ್ರಶ್ನೆಗಳು ಯಾವುವಿರಬಹುದು? ನೀವಾದರೆ ಎಂತಹ ಪ್ರಶ್ನೆಗಳನ್ನು ಕೇಳುವಿರಿ?




## ನಾನು ಇವನ್ನು ಮಾಡಬಲ್ಲೆನೇ ?

| | | |
|---|---|---|
| 1 | ವಿವಿಧ ಬಗೆಯ ಮನೆಗಳನ್ನು ಕುರಿತು ವಿವರಿಸಬಲ್ಲೆನು | ಹೌದು / ಇಲ್ಲ |
| 2 | ಸಮತಟ್ಟಾಗಿರುವ ಮೇಲ್ಛಾವಣಿಗೂ, ಓರೆಯಾಗಿರುವ ಮೇಲ್ಛಾವಣಿಗೂ ಇರುವ ವ್ಯತ್ಯಾಸಗಳನ್ನು ಹೇಳಬಲ್ಲೆನು. | ಹೌದು / ಇಲ್ಲ |
| 3 | ವಿವಿಧ ಬಗೆಯ ಮನೆಗಳನ್ನು ಬಿಡಿಸಿ, ಬಣ್ಣ ಹಾಕಬಲ್ಲೆನು. | ಹೌದು / ಇಲ್ಲ |
| 4 | ವಿವಿಧ ಬಗೆಯ ಮನೆಗಳ ಕುರಿತು ವಿವರಿಸಬಲ್ಲೆನು. | ಹೌದು / ಇಲ್ಲ |
| 5 | ವಿವಿಧ ಬಗೆಯ ಮನೆಗಳ ಬಗ್ಗೆ ಪ್ರಶ್ನಿಸಬಲ್ಲೆನು. | ಹೌದು / ಇಲ್ಲ |

SCERT TELANGANA





# 11 ಶುಭ್ರವಾದ ಮನೆಯೇ ಸುಂದರವಾದ ಮನೆ



ಒಂದು ದಿನ ರಂಗಯ್ಯ ತನ್ನ ಸ್ನೇಹಿತ ಕೇಶವ್‌ನನ್ನು ಭೇಟಿಯಾಗುವುದಕ್ಕಾಗಿ ತನ್ನ ಮಗ ಮುರಳಿಯ ಜೊತೆಗೆ ಸೇರಿ ಇಂದ್ರವಲ್ಲಿ ಗ್ರಾಮಕ್ಕೆ ಹೊದನು. ಅದು ಒಂದು ಆದಿವಾಸಿ ಗ್ರಾಮ. ಆ ಊರಿನಲ್ಲಿ ರಂಗಯ್ಯಗೆ ತಿಳಿದವವರು ಬಹಳ ಜನ ಇದ್ದಾರೆ. ದಾರಿ ಉದ್ದಕ್ಕೂ ಎಲ್ಲರನ್ನೂ ಮಾತನಾಡಿಸುತ್ತಾ ಕೇಶವ್ ಮನೆಗೆ ಹೋದನು. " ಮುರಳಿ ! ಇದೇ ಕೇಶವ್ ಮಾವನ ಮನೆ".

ಮಾವನ ಮನೆ ಎಷ್ಟು ಚೆನ್ನಾಗಿದೆ! " ಎಂದು ಮುರಳಿ ಅಂದನು. ಹಾಗಾದರೆ ಕೇಶವ್ ಅವರ ಮನೆ ಹೇಗಿದೆಯೋ ನೋಡೋಣ ?



ಮಾವನ ಮನೆ ಎಷ್ಟು ಚೆನ್ನಾಗಿದೆ ಎಂದು ಮುರಳಿ ಏಕೆ ಎಂದನು ?

ಮನೆ ಗೋಡೆಗಳ ಮೇಲೆ ಏನು ಕಾಣಿಸುತ್ತಿವೆ ?

ನಿಮ್ಮ ಮನೆ ಸಹ ಇದೇ ರೀತಿ ಇದೆಯೇ ?ವ್ಯತ್ಯಾಸವೇನು ?






ತೆಲಂಗಾಣ ಸರಕಾರದ ಉಚಿತ ವಿತರಣೆ 2020-21

SCERT TELANGANA



ರಂಗಯ್ಯ , ಮುರಳಿ ನಾಲ್ಕು ದಿನಗಳ ನಂತರ ಮರಳಿ ಅವರ ಊರಿಗೆ ಬಂದರು.ಪಾಠಶಾಲೆಯಲ್ಲಿ ಮುರಳಿಗೆ ಅವರ ತರಗತಿಯಲ್ಲಿ ಹೊಸದಾಗಿ ಸೇರಿದ ಜಹಂಗೀರ್ ಜೊತೆ ಒಳ್ಳೆಯ ಸ್ನೆಹ ಕುದುರಿತು.



ಜಹಂಗೀರ್ , ಮುರಳಿಯನ್ನು ಅವರ ಮನೆಗೆ ಕರೆದೊಯ್ದನು. ಮನೆ ಮುಂದೆ ಹೂಗಿಡಗಳನ್ನು ನೋಡಿ ಮುರಳಿ ಈ ಗಿಡಗಳು ಎಷ್ಟು ಚೆನ್ನಾಗಿವೆ! ಎಂದನು. ನಮ್ಮ ಮನೆ ಸುತ್ತಲೂ ಇನ್ನು ಬಹಳ ಗಿಡಗಳು ಇವೆ ಎಂದನು ಜಹಂಗೀರ್



ಜಹಂಗೀರ್ ಮನೆ ಮುಂದೆ ಎನೇನಿವೆ ?
ಚಪ್ಪಲಿಗಳು ಎಲ್ಲಿ ಇವೆ ?

ಜಹಾಂಗೀರ್, ಮುರಳಿ ಇಬ್ಬರು ಮನೆಯೊಳಗೆ ಹೋದರು. ಜಹಂಗೀರ್‌ನ ಮನೆ ನೋಡಿ ಮುರಳಿಗೆ ಬಹಳ ಆನಂದವಾಯಿತು. ' ನಿಮ್ಮ ಮನೆ ಬಹಳ ಚೆನ್ನಾಗಿದೆ" ಎಂದನು. ಮುರಳಿ ಹೀಗೆ ಏಕೆ ಹೇಳಿರಬಹುದು?



ಮನೆಯಲ್ಲಿ ಪುಸ್ತಕಗಳು ಎಲ್ಲಿ ಇವೆ ? ಹೇಗಿವೆ ?
ಬಟ್ಟೆಗಳು ಎಲ್ಲಿ ಇವೆ ?
ಮನೆ ಗೋಡೆಗಳು ಹೇಗಿವೆ ?







ಭಾನುವಾರದ ದಿನ ಮುರಳಿ ತನ್ನ ಅಕ್ಕ ಸರಿತಳ ಜೊತೆ ಸೇರಿ ವಿಜಯ್ ಮನೆಗೆ ಹೋದನು. ವಿಜಯ್ ಮನೆ ನೋಡಿರಿ



ವಿಜಯ್‌ನ ಮನೆ ಮುಂದೆ ಬಾಗಿಲಿನಲ್ಲಿ ಎಸೆದ ಪ್ಲಾಸ್ಟಿಕ್ ಚೀಲಗಳು, ತುಂಡು ಕಾಗದಗಳು ಕಾಣಿಸಿದವು. ಮುರಳಿ, ಸರಿತ ಇಬ್ಬರೂ ವಿಜಯ್ ಮನೆಯೊಳಗೆ ಹೋದರು. ಅವರಿಗೆ ವಿಜಯ್ ಅವರ ಮನೆಯೊಳಗೆ ಹೀಗೆ ಕಾಣಿಸಿತು



ವಿಜಯ್ ಮನೆ ಹೇಗಿದೆ ನೋಡಿದ್ದೀರಲ್ಲವೇ ! ಮನೆ ಹೀಗೆ ಇರುವುದೇ ! ಆಲೋಚಿಸಿರಿ ?

SCERT TELANGANA





ವಿಜಯ್ ಮನೆಯಹಿಂದೆ ತೆಗೆದುಹಾಕ ಬೇಕಾದವವು ಯಾವುವು ಹೇಳಿ ಬರೆಯಿರಿ?

ಮನೆ ಮುಂದೆ ಸ್ಥಳವನ್ನು ಹೇಗೆ ಶುಭ್ರವಾಗಿಟ್ಟು ಕೊಳ್ಳಬಹುದೋ ಹೇಳಿರಿ?

ಚಪ್ಪಲಿಗಳು ಎಲ್ಲಿವೆ ? ಹೇಗೆ ಜೋಡಿಸಿಕೊಳ್ಳಬೇಕು?

ಮನೆಯಲ್ಲಿ ನೊಣಗಳು, ಸೊಳ್ಳೆಗಳು ಏಕೆ ಮುಸುರಿಕೊಂಡಿವೆ?

ಬಟ್ಟೆಗಳು ಎಲ್ಲಿ ಇವೆ ? ಬಟ್ಟೆಗಳನ್ನು ಹೇಗೆ ಇಟ್ಟುಕೊಳ್ಳಬೇಕು?

ಪುಸ್ತಕಗಳು ಆಟದ ವಸ್ತುಗಳು ಹೇಗಿವೆ ? ನೀವಾಗಿದ್ದರೆ ಹೇಗೆ ಇಟ್ಟುಕೊಳ್ಳುತ್ತಿದ್ದಿರಿ?

ಜಹಂಗೀರ್, ವಿಜಯ್ ಇಬ್ಬರ ಮನೆಗಳಲ್ಲಿ ನಿಮಗೆ ಯಾರ ಮನೆ ಇಷ್ಟವಾಗಿದೆ? ಏಕೆ?



ಮುರಳಿ ಅವರ ತಂದೆ,ತಾಯಿ,ಅಕ್ಕ ಎಲ್ಲರೂ ಸೇರಿ ಸಂಬಂಧಿಕರ ಮನೆಗೆ ಮದುವೆಗಾಗಿ ಊರಿಗೆ ಹೋದರು. ವಾರದ ನಂತರ ಮರಳಿ ಬಂದರು. ಅವರದು ಒಂದೇ ಕೋಣೆ ಇರುವ ಚಿಕ್ಕ ಮನೆ. ಮನೆಗೆ ಬರುವುದರೊಳಗೆ ಮನೆ ಮುಂದೆ ಗಾಳಿಗೆ ಬಂದ ಕಸ ಕಡ್ಡಿ ಕಾಣಿಸಿತು. ನೆಲವೆಲ್ಲಾ ಧೂಳಿನಿಂದ ತುಂಬಿತ್ತು. ಪೊರಕೆಯಿಂದ ಕಸ ಹೊಡೆದು, ಬಾಗಿಲಿನಲ್ಲಿದ್ದ ಕಸವನ್ನು ಕಸದ ತೊಟ್ಟಿಯಲ್ಲಿ ಹಾಕಿದರು. ನೀರಿನಿಂದ ಕೋಣೆಯನ್ನು ತೊಳೆದರು. ಎಲ್ಲರೂ ಸೇರಿ ಮನೆಯನ್ನು ಶುಭ್ರಗೊಳಿಸಲು ಪ್ರಾರಂಭಿಸಿದರು. ಸರಿತ, ಮುರಳಿ ಸೇರಿ ಕೋಣೆಯಲ್ಲಿನ ಪುಸ್ತಕಗಳನ್ನು ಸರಿಯಾಗಿ ಅಲಮಾರಿನಲ್ಲಿ ಜೋಡಿಸಿಟ್ಟರು.

ಗಿಡಗಳಿಗೆ ನೀರು ಹಾಕಿದರು. ಸರಿತ ಟೆಲಿವಿಜನ್ ಮೇಲಿದ್ದ ದೂಳನ್ನು ಒರಿಸಿ ಇಟ್ಟಳು. ಮುರಳಿ ಅವರ ತಂದೆ, ತಾಯಿ ಅಡಿಗೆ ಸಾಮಾನುಗಳನ್ನು ಜೋಡಿಸಿದರು. ಅವರು ಹೇಗೆ ಜೋಡಿಸಿಕೊಂಡರೋ ಕೆಳಗಿನ ಚಿತ್ರದಲ್ಲಿ ನೋಡಿರಿ.



SCERT TELANGANA







ಮುರಳಿ, ಸರಿತಳಹಾಗೆ ನೀವು ಸಹ ನಿಮ್ಮ ಮನೆಕೆಲಸಗಳು ಮಾಡುತ್ತೀರೇ?

ನಿಮ್ಮ ಮನೆಯನ್ನು ಶುಭ್ರವಾಗಿ ಇಟ್ಟುಕೊಳ್ಳುವಿರಾ?

ಓದಿದ ನಂತರ ನಿಮ್ಮ ಪುಸ್ತಕಗಳನ್ನು , ಪೆನ್ನುಗಳನ್ನು , ಪೆನ್ಸಿಲುಗಳನ್ನು , ಎಲ್ಲಿ ಇಡುವಿರಿ?

ನಿಮ್ಮ ಬಟ್ಟೆಗಳನ್ನು ನೀವೇ ಜೋಡಿಸಿಕೊಳ್ಳುತ್ತೀರಾ ? ಇಲ್ಲವಾದರೆ ಯಾರು ಜೋಡಿಸುತ್ತಾರೆ?

ಮನೆಯಲ್ಲಿ ಹರಿದುಹಾಕಿದ ಕಾಗದಗಳು , ಹೆಚ್ಚಾಗಿ ಬಿದ್ದಿರುವ ಧೂಳು ಕಂಡರೆ ನೀನು ಏನು ಮಾಡುತ್ತೀರಿ?

ಕೆಲವು ಮನೆಗಳು ನೋಡಲು ಆಕರ್ಷಣೆವಾಗಿರುತ್ತವೆ. ಕೆಲವರ ಮನೆಗಳು ನೋಡಿದರೆ ಮತ್ತಷ್ಟು ಉತ್ತಮವಾಗಿ ಜೋಡಿಸಿಕೊಳ್ಳಬಹುದು ಎಂದು ಅನಿಸುತ್ತದೆ. ಮತ್ತೆ ಕೆಲವುಮಂದಿ ಮನೆಗಳು ನೋಡಿದಾಕ್ಷಣ ಮಲಿನವಾಗಿವೆ (ಹೊಲಸು) ಎನಿಸಿತ್ತದೆ. ಗುಡಿಸಲು , ಹಂಚಿನ ಮನೆ , ಡಾಬಾಮನೆ ಯಾವುದಾದರೂ ಸರಿಯೇ! ಮನೆಯಲ್ಲಿ ವಸ್ತುಗಳನ್ನು ಅನುಕೂಲವಾಗುವಂತೆ ಹೊಂದಿಸಿಕೊಂಡರೆ ಶುಭ್ರವಾಗಿ , ಸೌಕರ್ಯವಾಗಿ ಇರುತ್ತವೆ. ಆಹ್ಲಾದಕರವಾಗಿ ಇರುತ್ತದೆ.

ನಮ್ಮ ಮನೆಗಳಲ್ಲಿ ಪ್ರತಿದಿನ ಸೇರಿಕೊಳ್ಳುವ ಧೂಳು , ಕಸಕಡ್ಡಿ , ವ್ಯರ್ಥಪದಾರ್ಥಗಳನ್ನು ಹೊರಗೆ ಎಸೆಯದೇ ಹಾಗೆಯೇ ಬಿಟ್ಟರೆ ಏನಾಗುತ್ತದೆ ?



ಪ್ರತಿ ಮನೆಯಲ್ಲಿ ಸ್ವಲ್ಪವಾದರೂ ಕಸ ಇರುತ್ತದೆ. ನೀವೇ ಕಸವನ್ನು ಗುಡಿಸಿ ಶುಭ್ರಮಾಡಿಕೊಳ್ಳಬೇಕು.ನಮ್ಮ ಮನೆಯಲ್ಲಿ ಇರುವ ಧೂಳು , ಕಸ , ವ್ಯರ್ಥಪದಾರ್ಥಗಳನ್ನು ಎಲ್ಲಿ ಹಾಕಿದರೆ ಚೆನ್ನಾಗಿರುತ್ತದೆ ಹೇಳಿರಿ. ಕೆಳಗಿನ ಚಿತ್ರಗಳನ್ನು ಪರಿಶೀಲಿಸಿರಿ.







ಚಿತ್ರದಲ್ಲಿ ಕಸವನ್ನು ಯಾವಕಡೆ ಹಾಕುತ್ತಿದ್ದಾರೆ ?
ಕಸವನ್ನು ಎಲ್ಲಿ ಹಾಕಬೇಕು ?
ನಿಮ್ಮ ಮನೆ ಕಸವನ್ನು ಎಲ್ಲಿ ಹಾಕುತ್ತೀರಿ ?
ನಿಮ್ಮ ಬೀದಿಯಲ್ಲಿ ಕಸವನ್ನು ದಿನವೂ ಯಾವವೇಳೆ, ಯಾರು ತೆಗೆದು ಹಾಕುತ್ತಾರೆ ?

SCERT TELANGANA



ಮನೆಯಲ್ಲಿ ಶೇಖರಣೆಯಾದ ಕಸ , ವ್ಯರ್ಥಪದಾರ್ಥಗಳನ್ನು ಹಾಗೆಯೇ ಬಿಟ್ಟರೆ ದುರ್ವಾಸನೆ ಬರುತ್ತದೆ. ನೊಣ , ಸೊಳ್ಳೆಗಳು ಬರುತ್ತವೆ. ಅಂತಹ ಮನೆ ನೋಡಲು ಅಪರಿಶುಭ್ರವಾಗಿ ಇರುತ್ತದೆ. ನಮಗೆ ತೊಂದರೆ ಅನಾರೋಗ್ಯವನ್ನು ಕಲ್ಪಿಸುತ್ತವೆ. ಆದ್ದರಿಂದ ವ್ಯರ್ಥಪದಾರ್ಥಗಳನ್ನು ತಕ್ಷಣವೇ ತೊಲಗಿಸಬೇಕು. ಮನೆಯನ್ನು ಶುಭ್ರವಾಗಿ ಇಟ್ಟುಕೊಳ್ಳಬೇಕು.

## ಮುಖ್ಯ ಪದಗಳು

1 . ಅಂದವಾದ ಮನೆ

2. ವಸ್ತುಗಳನ್ನು ಹೊಂದಿಸಿಡುವುದು.

3 . ಮನೆಯನ್ನು ಶುಭ್ರ ಪಡಿಸಿಕೊಳ್ಳುವುದು.

4. ಮನೆಯಲ್ಲಿನ ವ್ಯರ್ಥಪದಾರ್ಥಗಳು.

## ನಾವು ಕಲಿತಿರುವುದು

- ಮನೆಯನ್ನು ಶುಭ್ರವಾಗಿ ಇಡುವುದು. ಮನೆಯಲ್ಲಿ ವಸ್ತುಗಳನ್ನು ಸರಿಯಾಗಿ ಜೋಡಿಸಿ ಕೊಳ್ಳುವುದರಿಂದ ಮನೆ ಅಂದವಾಗಿ ಇರುತ್ತದೆ.
- ಮನೆಯಲ್ಲಿ ವಸ್ತುಗಳು ಚೆಲಾಪಿಲ್ಲಿಯಾಗಿ ಎಸೆದರೆ ಮನೆ ಅಪರಿಶುಭ್ರವಾಗಿ ಇರುವುದಲ್ಲದೆ ನಮಗೆ ಅಸೌಕರ್ಯವಾಗಿಯೂ ಕೂಡಾ ಇರುತ್ತದೆ.
- ಮನೆಯನ್ನು ಶುಭ್ರವಾಗಿ ಇಡುವುದಕ್ಕೆ ಮನೆಯಲ್ಲಿನ ಕಸವನ್ನು ಕಸದ ತೊಟ್ಟಿಯಲ್ಲಿ ಹಾಕಬೇಕು.
- ನಾವು ಮನೆಯನ್ನು ಶುಭ್ರವಾಗಿ ಇಡಲು ಹಲವು ಕೆಲಸಗಳಲ್ಲಿ ಸಹಾಯ ಮಾಡಬೇಕು.

## ಇವು ಮಾಡಿರಿ



### ವಿಷಯಾವಗಾಹನೆ

1 . ಮನೆಯು ಹೇಗೆ ಅಪರಿಶುಭ್ರವಾಗುತ್ತದೆ ?

2 . ನಿಮ್ಮ ಮನೆಯನ್ನು ಶುಭ್ರವಾಗಿ ಇಡಲು ನೀವು ಮಾಡಿದ ನಾಲ್ಕು ಕೆಲಸಗಳನ್ನು ಹೇಳಿರಿ.ಬರೆಯಿರಿ.

3 . ನಿಮ್ಮ ಮನೆ ಅಂದವಾಗಿ ಶುಭ್ರವಾಗಿ ಇರಬೇಕೆಂದರೆ ಪ್ರತಿದಿನ ನೀವು ಏನು ಮಾಡುತ್ತಿರಿ '✓' ಹಾಕಿರಿ.

- ♦ ಪುಸ್ತಕಗಳನ್ನು ಜೋಡಿಸಿಕೊಳ್ಳುತ್ತೇನೆ. ☐
- ♦ ನಿದ್ರೆಯಿಂದ ಎದ್ದಾಗ ಬೆಡ್‌ಷೀಟ್ ತೆಗೆಯುತ್ತೇನೆ. ☐
- ♦ ಚಪ್ಪಲಿಯನ್ನು ಪ್ರತಿದಿನ ಅವು ಇರುವ ಸ್ಥಾನದಲ್ಲಿ ಇಡುತ್ತೇನೆ. ☐
- ♦ ಧೂಳಿನಿಂದ ಇರುವ ನೆಲವನ್ನು ಗುಡಿಸಿ /ಒರಿಸಿ ಶುಭ್ರ ಮಾಡುತ್ತೇನೆ. ☐
- ♦ ಗೋಡೆಗಳ ಮೂಲೆಯಲ್ಲಿ ಶೇಖರಣೆಯಾದ ಬೂಜನ್ನು ತೊಲಗಿಸುತ್ತೇನೆ. ☐
- ♦ ಗಿಡಗಳಿಗೆ ಪ್ರತಿದಿನ ನೀರು ಹಾಕುತ್ತೇನೆ. ☐
- ♦ ಮನೆಯಲ್ಲಿ ಶೇಖರಣೆಯಾದ ಕಸವನ್ನು ಕಸದ ತೊಟ್ಟಿಯಲ್ಲಿ ಹಾಕುತ್ತೇನೆ. ☐
- ♦ ಪ್ಲಾಸ್ಟಿಕ್ ಚೀಲಗಳನ್ನು ಉಪಯೋಗಿಸುವುದಿಲ್ಲ. ☐

4. ಮನೆಯಲ್ಲಿನ ಕಸವನ್ನು , ಧೂಳನ್ನು ಆಗಿಂದಾಗಲೇ ದೂರ ಹಾಕಬೇಕು. ಇಲ್ಲವಾದರೆ ಏನಾಗುತ್ತದೆ?

5. ಶುಭ್ರವಾದ ಮನೆಯೇ ಅಂದವಾದ ಮನೆ. ಏಕೆ ?

SCERT TELANGANA







## ಚಿತ್ರವನ್ನು ಬಿಡಿಸಿ. ಬಣ್ಣವನ್ನು ಹಾಕಿರಿ.

1 . ಪಾಠವನ್ನು ನೋಡಿ ಅದರಲ್ಲಿನ ಅಂದವಾದ ಮನೆಯ ಚಿತ್ರವನ್ನು ಬಿಡಿಸಿ.ಬಣ್ಣವನ್ನು ಹಾಕಿರಿ.



## ಸಮಾಚಾರ ಕೌಶಲ್ಯ – ಪ್ರಾಜೆಕ್ಟ್ ಕೆಲಸ.

1 . ನಿಮ್ಮ ಸ್ನೇಹಿತರ ಮನೆಗೆ ಹೋಗಿರಿ , ಅವರ ಮನೆಗಳು ಹೇಗೆ ಇವೆಯೋ ನೋಡಿ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| | ಸ್ನೇಹಿತನ ಹೆಸರು | ಮನೆ ಶುಭ್ರವಾಗಿದೆಯೇ? ಇಲ್ಲವೇ? | ಏಕೆ ? |
|---|---|---|---|
| 1 | | | |
| 2 | | | |
| 3 | | | |
| 4 | | | |

ಯಾರ ಯಾರ ಮನೆಗಳು ಶುಭ್ರವಾಗಿವೆ? ಏಕೆ? ಯಾರ ಯಾರ ಮನೆಗಳು ಶುಭ್ರವಾಗಿಲ್ಲ? ಏಕೆ? ಮನೆ ಶುಭ್ರವಾಗಿ ಇರಬೇಕೆಂದರೆ ನೀನೇನು ಮಾಡಬೇಕು ?



## ಪ್ರಶಂಸೆ

1 . ರವಿ ಸಾಯಂಕಾಲ ಪಾಠಶಾಲೆಯಿಂದ ಮನೆಗೆ ಬಂದನು. ಮನೆಯ ಮುಂದೆ ಚೆಲ್ಲಾಪಿಲ್ಲಿಯಾಗಿ ಚಪ್ಪಲಿಗಳಿವೆ.ಒಣಗಲು ಹಾಕಿದ ಬಟ್ಟೆಗಳು ಕೆಳಗೆ ಬಿದ್ದಿವೆ. ಇವು ಯಾವುವನ್ನು ಹಿಡಿಸಿಕೊಳ್ಳದೇ ತನ್ನ ಪುಸ್ತಕಗಳ ಚೀಲವನ್ನು ಮನೆಯಲ್ಲಿ ಹಾಕಿ ಆಡಿಕೊಳ್ಳಲು ಹೊರಗೆ ಹೋದನು. ಹೀಗೆ ಮಾಡುವುದು ಸರಿಯಾದ ಕೆಲಸವೇ ? ನೀವಾದರೆ ಏನು ಮಾಡುವಿರಿ ?



## ಪ್ರಶ್ನಿಸುವುದು.

1 . ಮುರಳಿ , ಸರಿತ , ವಿಜಯ್ ಮನೆಗೆ ಹೋದರು. ಅವರ ಮನೆ ಶುಭ್ರವಾಗಿಲ್ಲ. ಶುಭ್ರವಾಗಿಲ್ಲದೆ ಇದ್ದ ಮನೆಯನ್ನು ಕುರಿತು ಮುರಳಿ, ಸರಿತ, ವಿಜಯ್‌ನಿಗೆ ಯಾವ ಯಾವ ಪ್ರಶ್ನೆಗಳು ಕೇಳಿರುತ್ತಾರೆ. ವಿಜಯ್ ಏನು ಉತ್ತರವನ್ನು ಹೇಳಿರುತ್ತಾನೆ.





### ನಾನಿವು ಮಾಡಬಲ್ಲೆನೇ?

| | |
|---|---|
| 1. ಪರಿಶುಭ್ರವಾದ ಮನೆಗೆ ಅಶುಭ್ರವಾದ ಮನೆಗೆ ಇರುವ ವ್ಯತ್ಯಾಸ ಹೇಳಬಲ್ಲೆನು. | ಹೌದು/ಇಲ್ಲ |
| 2. ಮನೆಯನ್ನು ಶುಭ್ರವಾಗಿ ಇಡುವುದಕ್ಕೆ ನಾನು ಸಹ ಸಹಾಯ ಮಾಡುತ್ತೇನೆ. | ಹೌದು/ಇಲ್ಲ |
| 3. ಯಾರ ಯಾರ ಮನೆಗಳು ಪರಿಶುಭ್ರವಾಗಿ ಇವೆ ಏಕೆ ?ಪಟ್ಟಿ ತಯಾರು ಮಾಡಿ ವಿವರಿಸುತ್ತೇನೆ. | ಹೌದು/ಇಲ್ಲ |
| 4. ಅಂದವಾದ ಮನೆಯ ಚಿತ್ರ ಬಿಡಿಸಬಲ್ಲೆನು. | ಹೌದು/ಇಲ್ಲ |
| 5. ಅಶುಭ್ರವಾದ ಮನೆಗಳನ್ನು ಕುರಿತು ಪ್ರಶೆಗಳನ್ನು ಕೇಳಬಲ್ಲೆವು. | ಹೌದು/ಇಲ್ಲ |

SCERT TELANGANA



# 12.ಮಣ್ಣಿನಿಂದ ಮಾಡಿದ ಮಾಣಿಕ್ಯಗಳು.



ಗಣೇಶನ ಹಬ್ಬ ಬಂದಿದೆ. ಗೌತಮಿ ಅವರ ಮನೆಯಲ್ಲಿ ಗಣಪತಿ ಪ್ರದರ್ಶನ ಏರ್ಪಡಿಸಬೇಕೆಂದುಕೊಂಡಳು. ಅದಕ್ಕಾಗಿ ಗೌತಮಿ ಅಜ್ಜನನ್ನು ಗಣಪತಿ ಕೊಳ್ಳೋಣವೇ ಎಂದು ಕೇಳಿದಳು. ಅಜ್ಜ, ಗೌತಮಿ ಸೇರಿ ಗಣಪತಿ ಕೊಂಡುಕೊಳ್ಳಲು ಬಜಾರಿಗೆ ಹೋದರು. ದಾರಿಯಲ್ಲಿ ಒಂದುಕಡೆ ಬಣ್ಣ ಬಣ್ಣದ ಮಣ್ಣಿನಿಂದ ಮಾಡಿದ ಗಣಪತಿ ಮೂರ್ತಿಗಳು ಕಂಡವು.

ಗೌತಮಿ : ಅಜ್ಜ ! ಈ ಟೆಲಿಫೋನು. ರಿಮೋಟ್ ಗೊಂಬೆಗಳನ್ನು ನೋಡಿರಿ. ಎಷ್ಟು ಚೆನ್ನಾಗಿವೆಯೋ!

ಅಜ್ಜ : ಅವು ಪ್ಲಾಸ್ಟಿಕ್‌ನಿಂದ ಮಾಡಿದ ಗೊಂಬೆಗಳು.





ಗೌತಮಿ: ಅಜ್ಜ ಈ ಆನೆ ಗೊಂಬೆಗಳು ನೋಡಿರಿ. ಎಷ್ಟು ನುಣುಪಾಗಿ ಇವೆಯೋ!

ಅಜ್ಜ : ಇವು ಕಟ್ಟಿಗೆ ಗೊಂಬೆಗಳು. ನಮ್ಮ ರಾಜ್ಯದಲ್ಲಿ ನಿರ್ಮಲ್, ಈ ಗೊಂಬೆಗಳಿಗೆ ಪ್ರಸಿದ್ಧಿ ಹೊಂದಿವೆ



ಗೌತಮಿ: ಅಜ್ಜ ಈಗೊಂಬೆಗಳು ನೋಡಿರಿ. ಎಷ್ಟು ಚೆನ್ನಾಗಿವೆ! ಇವು ಕೊಳ್ಳೋಣವೇ! ತಾತ.

ಅಜ್ಜ : ಇವು ಮಣ್ಣಿನಿಂದ ಮಾಡಿದ ಗೊಂಬೆಗಳು. ಇವು ಎಲ್ಲಕ್ಕಿಂತಲೂ ಕಡಿಮೆ ಬೆಲೆ. ಪರಿಸರಕ್ಕೆ ಯಾವ ರೀತಿಯ ಹಾನಿ ಮಾಡುವುದಿಲ್ಲ.

ಗೌತಮಿಗೆ ಆ ಗೊಂಬೆಗಳು ಬಹಳ ಇಷ್ಟವಾಗಿವೆ. ಅವುಗಳನ್ನು ಕೊಂಡು ಮುಂದಕ್ಕೆ ಸಾಗಿದರು. ಸ್ವಲ್ಪ ಮುಂದಕ್ಕೆ ಹೋದಾಗ ಅಲ್ಲಿ ಹಣತೆಗಳು ವಿವಿದ ಬಣ್ಣ ಬಣ್ಣ ಆಕಾರದಲ್ಲಿ ಕಂಡವು. ಅಜ್ಜ! ಅವನ್ನು ಸಹ ಕೊಳ್ಳೋಣವೇ ಎಂದಳು ಗೌತಮಿ. ಈ ಹಣತೆಗಳು ಸಹ ಮಣ್ಣಿನಿಂದ ಮಾಡಿರುವವೇ,ಗೊತ್ತೇ! ಎಂದನುಅಜ್ಜ .ಗೌತಮಿಗೆ ಅಶ್ಚರ್ಯವಾಯಿತು.



SCERT TELANGANA





## ನಿಮಗೆ ಗೊತ್ತೇ?



SCERT TELANGANA

ವಿನಾಯಕ ಚವಿತಿಹಬ್ಬಕೆ ವಿನಾಯಕನ ಮೂರ್ತಿಯನ್ನು ಮಣ್ಣಿನಿಂದ ಇಲ್ಲವೇ. ಪ್ಲಾಸ್ಟರ್ ಆಫ್ ಪಾರಿಸ್‌ಯಿಂದ ಮಾಡುತ್ತಾರೆ. ಆದರೆ ಮಣ್ಣಿನಿಂದ ಮಾಡಿದ ಮುರ್ತಿಯನ್ನು ನಾವು ಬಳೆಸಬೇಕು. ಏಕೆಂದರೆ ಮಣ್ಣಿನ ಮೂರ್ತ್ತಿಯನ್ನು ನೀರಿನಲ್ಲಿ ಹಾಕಿದಾಗಿ ನೀರಿನಲ್ಲಿ ಕರೆಗಿಹೊಗುತ್ತದೆ. ನೀರು ಕಲುಷಿತ ಆಗದಂತೆ ಇರುತ್ತದೆ.



ಮಣ್ಣಿನ ಗೊಂಬೆಗಳಲ್ಲದೆ ಇನ್ನು ಏನೇನು ಯಾವುದರಿಂದ ಗೊಂಬೆಗಳನ್ನು ಮಾಡುತ್ತಾರೆ ಹೇಳಿರಿ.

ಕೆಳಗಿನ ಗೊಂಬೆಗಳನ್ನು ನೋಡಿರಿ. ಇವುಗಳಿಗೆ ಏನೆಂದು ಕರೆಯುವರು? ಇವು ಯಾವುದರಿಂದ ತಯಾರು ಮಾಡಿದ್ದಾರೆ ಗೊತ್ತೇ? ಯಾವುದಕ್ಕೆ ಉಪಯೋಗಿಸುತ್ತಾರೆ ಹೇಳಿರಿ.



ಇಂತಹ ಮಣ್ಣಿನಿಂದ ಮಾಡಿದ ವಸ್ತುಗಳು ನಿಮ್ಮ ಮನೆಯಲ್ಲಿ ಸಹ ಇವೆಯೇ ಆವುಗಳ ಹೆಸರು ತಿಳಿದುಕೊಂಡು ಹೇಳಿರಿ.

ನಾವು ಮಣ್ಣಿನಿಂದ ಮಾಡುವ ವಸ್ತುಗಳ ಬಗ್ಗೆ ತಿಳಿದುಕೊಂಡಿ ವಲ್ಲವೇ!ಮಡಿಕೆಗಳು, ಹೂಜಿಗಳು, ಕುಂಡಗಳು(pots), ಬಾನೆಗಳು ಅಂತಹವುಗಳಲ್ಲಿ ನೀರನ್ನು ತುಂಬಿಕೊಂಡು ಬಳಸಿಕೊಳ್ಳುತ್ತೇವೆ. ಬೇಸಿಗೆ ಕಾಲದಲ್ಲಿ ಇವುಗಳಲ್ಲಿನ ನೀರು ತಣ್ಣಗೆ ಇರುತ್ತದೆ. ನಮ್ಮ ರಾಜ್ಯದಲ್ಲಿ ಆದಿಲಾಬಾದ್ ಜಿಲ್ಲೆಯಲ್ಲಿ ತಯಾರಾಗುವ ಕುಂಡಗಳು ಪ್ರಸಿದ್ಧವಾದವು ಆದರೆ ಮಣ್ಣಿನ ಪಾತ್ರೆಯಲ್ಲಿ ಭತ್ತ ಜೋಳಗಳಂತಹ ಧಾನ್ಯಗಳನ್ನು ಕೂಡಾ ಸಂಗ್ರಹಿಸಿಹಿಡುತ್ತಾರೆ. ದನ(ಹಸು)ಗಳು ನೀರು ಕುಡಿಯುವುದಕ್ಕೆ ದೊಡ್ಡ ಮಣ್ಣಿನ ತೊಟ್ಟಿಗಳನ್ನು ಉಪಯೋಗಿಸುತ್ತಾರೆ. ದೀಪಾವಳಿ ಹಬ್ಬದಂದು ಮಣ್ಣಿನಿಂದ ಮಾಡಿದ ಹಣತೆಯಲ್ಲಿ ದೀಪಗಳು ಹಚ್ಚುತ್ತಾರೆ. ಮನೆಮನೆಗಳಲ್ಲಿ ದೀಪಗಳು ಬಣ್ಣ ಬಣ್ಣದ ಲೋಹದಿಂದ ಮಾಡಿದ ಹಣತೆಗಳಲ್ಲಿ ಹಚ್ಚುತ್ತಾರೆ. ಹೂವಿನ ಹೂಜಿಗಳಲ್ಲಿ ಮಣ್ಣನು ತುಂಬಿ ಸಣ್ಣಸಣ್ಣ ಗಿಡಗಳನ್ನು ಬೆಳೆಸುತ್ತಾರೆ. ಈ ಹೂವಿನಹೂಜಿಗಳು ಸಹ ಮಣ್ಣಿನಿಂದ ಮಾಡಿರುವವೆ.

SCERT TELANGANA







ಇಂತಹ ಮಣ್ಣಿನ ಪಾತ್ರೆಗಳು, ಮಡಿಕೆಗಳು ಹೇಗೆ ತಯಾರು ಮಾಡುತ್ತಾರೋ ನಿಮಗೆ ಗೊತ್ತೇ? ರಾಜಯ್ಯ ಮಣ್ಣನ್ನು ತಂದು ಗಡಿಗೆಗಳು ತಯಾರಿಸುತ್ತಾನೆ. ರಾಜಯ್ಯ ಹೇಗೆ ತಯಾರಿಸುತ್ತಾನೋ ಕೆಳಗಿನ ಚಿತ್ರಗಳನ್ನು ನೋಡೋಣ!



ಮಡಿಕೆಗಳು ಮಾಡುವುದಕ್ಕೆ ರಾಜಯ್ಯ ಜೇಡಿಮಣ್ಣನ್ನು ತರುತ್ತಾನೆ.



ಜೇಡಿ ಮಣ್ಣಿನಲ್ಲಿ ನೀರುಹಾಕಿ ನೆನೆಸಿ ಕಾಲಿನಿಂದ ಬಹಳಹೊತ್ತು ತುಳಿದು ಮೆತ್ತಗೆ ಮಾಡುತ್ತಾನೆ.




ಮೆತ್ತಗಾದ ಮಣ್ಣಿನ ಮುದ್ದೆಯನ್ನು ತೆಗೆದು ಕೊಂಡು ಕುಂಬಾರ ಸಾರೆ ಮೇಲೆ ಇಟ್ಟು ತಿರುವುತ್ತಾನೆ. ಕೈಯಲ್ಲಿ ಗಡಿಗೆ ಆಕಾರವನ್ನು ತಯಾರಿಸುತ್ತಾರೆ.



ಸಾರೆ ಮೇಲೆ ತಯಾರದ ಮಡಿಕೆಗಳನ್ನು ಸರಿಯಾದ ಆಕಾರ ಬರುವಂತೆ ಚೆಕ್ಕೆಯಿಂದ ಮಾಡಿದ ಸಲಕರಣೆಯಿಂದ ಹೊಡೆಯುತ್ತಾನೆ.



ತಯಾರಾದ ಗಡಿಗೆಗಳನ್ನು ಮೊದಲು ನೆರಳಿನಲ್ಲಿ ಒಣಗಿಸಿ ಕೊನೆಗೆ ಬಿಸಿಲಿನಲ್ಲಿ ಒಣಗಿಸುತ್ತಾರೆ.




ಬಿಸಿಲಿಗೆ ಒಣಗಿದ ಗಡಿಗೆಗಳನ್ನು ಆಳಿಗೆಯಲ್ಲಿ ಇಟ್ಟು ಸುಡುತ್ತಾನೆ.

SCERT TELANGANA



ಹೀಗೆ ತಯಾರಾದ ಮಡಿಕೆಗಳು, ಹೂಜಿಗಳು, ಕುಂಡಗಳು, ತೊಟ್ಟಿಗಳು ಮೊದಲಾದವುಗಳನ್ನು ಸಂತೆಯಲ್ಲಿ ಇಲ್ಲವೆ ಬಜಾರಿನಲ್ಲಿ ಮಾರುತ್ತಾರೆ. ಮಡಿಕೆಗಳನ್ನು ಖರೀದಿಸುವಾಗ ಅವುಗಳ ಮೇಲೆ ಬೆರಳಿನಿಂದ ಹೊಡೆದಾಗ ಟಂಗ್,ಟಂಗ್ ಎಂದು ಶಬ್ದ ಬಂದರೇನೆ ಖರೀದಿಸುತ್ತಾರೆ. ಹಾಗೆ ಏಕೆ ಮಾಡುತ್ತಾರೋ ಆಲೋಚಿಸಿರಿ.



ಮಣ್ಣಿನ ಪಾತ್ರೆಗಳು ಬಹಳ ಶ್ರೇಷ್ಠವಾದವು. ನಮ್ಮ ಪೂರ್ವಿಕರು ಮಣ್ಣಿನ ಪಾತ್ರೆಗಳನ್ನೇ ಅಧಿಕವಾಗಿ(ಹೆಚ್ಚಾಗಿ) ಬಳಸುತ್ತಿದರು. ಇವುಗಳ ಬೆಲೆ ಸಹ ಬಹಳ ಕಡಿಮೆ.



ಮಣ್ಣಿನಿಂದ ವಿವಿಧ ರೀತಿಯ ವಸ್ತುಗಳು ತಯಾರಿಸುತ್ತಾರೆ. ಅವುಗಳನ್ನು ನಾವು ಉಪಯೋಗಿಸಿಕೊಳ್ಳುತ್ತೇವೆ. ಗೌತಮಿ ಒಂದು ಸಾರಿ ಅವರ ಸಂಬಂಧಿಕರ ಮನೆಗೆ ಹೋಗಿದ್ದಳು. ಅವರ ಮನೆಯಲ್ಲಿ ವಿವಿಧ ವಸ್ತುಗಳನ್ನು ನೋಡಿದಳು. ಆ ವಸ್ತುಗಳು ಪ್ಲಾಸ್ಟಿಕ್, ಅಲ್ಯೂಮಿನಿಯಂ, ಮಣ್ಣು, ಕಬ್ಬಿಣ, ಸ್ಟೀಲ್, ಕಟ್ಟಿಗೆ ಮೊದಲಾದವುಗಳಿಂದ ತಯಾರಿಸಿರುವವು. ಅವಳು ಯಾವ ಯಾವ ವಸ್ತುಗಳನ್ನು ನೋಡಿರುತ್ತಾಳೆ? ಅವು ಯಾವುದರಿಂದ ತಯಾರಾಗಿವೆಯೋ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಕ್ರ ಸಂಖ್ಯ | ನೋಡಿದ ವಸ್ತುಗಳು | ಅವುಯಾವುದರಿಂದ ತಯಾರಾಗಿವೆ "✓" ಹಾಕಿರಿ | | | | | |
|---|---|---|---|---|---|---|---|
| | | ಸ್ಟೀಲ್ | ಪ್ಲಾಸ್ಟಿಕ್ | ಅಲ್ಯೂ ಮಿನಿಯಂ | ಮಣ್ಣು | ಕಟ್ಟಿಗೆ | ಕಬ್ಬಿಣ |
| 1. | ಬಕೆಟ್ | | ✓ | | | | |
| | | | | | | | |
| | | | | | | | |
| | | | | | | | |
| | | | | | | | |

ಮನೆಗಳಲ್ಲಿ ಯಾವುದರಿಂದ ತಯಾರುಮಾಡಿದ ಪಾತ್ರೆಗಳು ಹೆಚ್ಚಾಗಿ ಬಳಸುತ್ತಿದ್ದಾರೆ?
ಮನೆಗಳಲ್ಲಿ ಯಾವುದರಿಂದ ತಯಾರುಮಾಡಿದ ಪಾತ್ರೆಗಳು ಕಡಿಮೆ ಬಳಸುತ್ತಿದ್ದಾರೆ?
ಮಣ್ಣಿನ ಪಾತ್ರೆಗಳ ಬಳಕೆ ಏಕೆ ಕಡಿಮೆಯಾಗಿವೆ?

SCERT TELANGANA





## ಅಬ್ಬೊ ಎಷ್ಟು ಚೆನ್ನಾಗಿವೆಯೋ!

ಗೌತಮಿ ಅವರ ಬಂಧುಗಳ ಮನೆಯಲ್ಲಿ ವಿವಿಧರೀತಿಯು ತರಕಾರಿಗಳನ್ನು,ಹಣ್ಣುಗಳನ್ನು ನೋಡಿದಳು. ಎಷ್ಟು ಚೆನ್ನಾಗಿವೆ ಎಂದು ಕೊಂಡಳು. ಅವುಗಳನ್ನು ತೆಗೆದುಕೊಂಡು ನೋಡಿದಳು, ಅಶ್ಚರ್ಯಪಟ್ಟಳು.

ಏಕೆ ಗೊತ್ತೇ! ಅವೆಲ್ಲವೂ ಮಣ್ಣಿನಿಂದ ಮಾಡಿ ಬಣ್ಣಹಾಕಿರುವವು. ಆ ಗೊಂಬೆಗಳನ್ನು ನೀವು ನೋಡಿರಿ. ಇವುಗಳನ್ನು ನೀವೂ ಸಹ ತಯಾರಿಸಬಹುದು. ಜೇಡಿಮಣ್ಣನ್ನು ನೀರಿನಲ್ಲಿ ಬೆರೆಸಿರಿ. ಮೆತ್ತಗೆ, ಮುದ್ದೆಯಂತೆ ಮಾಡಿರಿ. ಅದರಿಂದ ತರಕಾರಿಗಳು, ಹಣ್ಣಿನ ಗೊಂಬೆಗಳನ್ನು ತಯಾರಿಸಿ ಬಣ್ಣ ಹಾಕಿರಿ.



### ಮುಖ್ಯ ಪದಗಳು

| | | |
|---|---|---|
| 1. ಕಟ್ಟಿಗೆಯ ಬೊಂಬೆಗಳು | 2. ಮಣ್ಣಿನ ಗೊಂಬೆಗಳು | 3. ಮಣ್ಣಿನ ಪಾತ್ರೆಗಳು |
| 4. ಜೇಡಿ ಮಣ್ಣು | 5. ಕುಂಬಾರ ಸಾರೆ(ಚಕ್ರ) | 6. ಚೆಕ್ಕೆ(ಸಲಪ) |

### ನಾವುಕಲಿತು ಕೊಂಡಿರುವವು

- ಮಣ್ಣಿನಿಂದ ಮಡಿಕೆಗಳು, ಕುಂಡಿಗಳು, ಹೂಜಿಗಳು, ಹೂಕುಂಡಗಳು. ಹಣತೆಗಳು ಮೊದಲಾದವು ತಯಾರಿಸುತ್ತಾರೆ.
- ಗೊಂಬೆಗಳ ಪ್ರದರ್ಶನದಲ್ಲಿ ಮಣ್ಣಿನಿಂದ ತಯಾರಿಸಿದ ಗೊಂಬೆಗಳನ್ನು ಸಹ ಇಡುತ್ತಾರೆ.
- ವಿನಾಯಕ ಚೌತಿ ಹಬ್ಬದಂದು ಮಣ್ಣಿನಿಂದ ಮಾಡಿದ ಗಣಪತಿ ವಿಗ್ರಹಗಳನ್ನು ಇಡಬೇಕು.
- ಜೇಡಿಮಣ್ಣಿನಿಂದ ಕುಂಬಾರಚಕ್ರವನ್ನು (ಸಾರೆ) ಉಪಯೋಗಿಸಿ ಗಡಿಗೆಗಳನ್ನು ತಯಾರಿಸುತ್ತಾರೆ.
- ನಮ್ಮ ಪೂರ್ವಿಕರು ಮಣ್ಣಿನ ಪಾತ್ರೆಗಳನ್ನೇ ಹೆಚ್ಚಾಗಿ ಬಳಸುವವರು.
- ಇತ್ತೀಚಿನ ಕಾಲದಲ್ಲಿ ಮಣ್ಣಿನ ಪಾತ್ರೆಗಳು ಬಳಕೆ ಕಡಿಮೆಯಾಗಿದೆ.

### ಇವು ಮಾಡಿರಿ.



#### ವಿಷಯಾವಗಾಹನೆ

1. ಮಣ್ಣಿನಿಂದ ತಯಾರಿಸಿದ ವಸ್ತುಗಳಿಗೆ ಮೂರು ಉದಾಹರಣೆಗಳು ಹೇಳಿರಿ, ಬರೆಯಿರಿ.
2. ಸ್ಟಿಲ್ ಪಾತ್ರೆಗಳಿಗೂ, ಮಣ್ಣಿನಪಾತ್ರೆಗಳಿಗೂ ಇರುವ ವ್ಯತ್ಯಾಸಗಳನ್ನು ಹೇಳಿರಿ, ಬರೆಯಿರಿ.
3. ನಿಮ್ಮ ಮನೆಯಲ್ಲಿ ಮಣ್ಣಿನಿಂದ ತಯಾರಿಸಿದ ವಸ್ತುಗಳು ಏನೇನಿವೆ? ಅವುಗಳನ್ನು ಯಾವುದಕ್ಕೆ ಉಪಯೋಗಿಸುತ್ತೀರಿ?





SCERT TELANGANA



## ಚಿತ್ರಗಳನ್ನು ಬಿಡಿಸಿ. ಬಣ್ಣವನ್ನುಹಾಕಿರಿ.

1. ಕೆಳಗಿನ ಚಿತ್ರಗಳನ್ನು ಬಿಡಿಸಿ, ಬಣ್ಣವನ್ನು ಹಾಕಿರಿ.







## ಸಮಾಚಾರ ಕೌಶಲ್ಯ-ಪ್ರಾಜೆಕ್ಟ್ ಕೆಲಸ

1. ಸಂತೆಗೆ/ ಬಜಾರಿಗೆ ಹೋಗಿ ಮಣ್ಣಿನಿಂದ ತಯಾರಿಸಿದ ಯಾವ ಯಾವ ವಸ್ತುಗಳು ಮಾರುತ್ತಿದ್ದಾರೋ ಅವುಗಳ ಪಟ್ಟಿಯನ್ನು ತಯಾರಿಸಿರಿ. ಹಾಗೇಯೇ ಅವುಗಳ ಬೆಲೆ ಎಷ್ಟು ತಿಳಿದುಕೊಂಡು ಬರೆಯಿರಿ.

2 ಮಣ್ಣಿನಿಂದ ವಿವಿಧ ತರಕಾರಿಗಳು, ಹಣ್ಣುಗಳ ಮಾದರಿಗಳನ್ನು ತಯಾರಿಸಿರಿ. ಅವುಗಳಿಗೆ ಬಣ್ಣವನ್ನು ಹಾಕಿರಿ.



## ಪ್ರಶಂಸೆ

1. ಮಣ್ಣಿನಿಂದ ವಿವಿಧ ರೀತಿಯ ವಸ್ತುಗಳು, ಗೊಂಬೆಗಳನ್ನು ತಯಾರಿಸುತ್ತಾರೆಂದು ತಿಳಿದುಕೊಂಡಿದ್ದೀರಿ ಅಲ್ಲವೇ! ಹೀಗೆ ಮಣ್ಣಿನಿಂದ ಮಾಡಿದ ವಸ್ತುಗಳು ಬಳುಸುವುದರಿಂದ ಆಗುವ ಉಪಯೋಗ ಗಳೇನು?ಮಣ್ಣಿನಿಂದ ವಸ್ತುಗಳು ತಯಾರಿಸುವ ರಾಜಯ್ಯನಂತಹವರು ಕಂಡರೆ ನೀವು ಹೇಗೆ ಅಭಿನಂದಿಸುತ್ತೀರಿ?



## ಪ್ರಶ್ನಿಸುವುದು.

1. ನಿಮ್ಮ ತರಗತಿ ಕೋಣೆಗೆ ಮಣ್ಣಿನಿಂದ ಗಡಿಗೆ ಮಾಡುವ ರಾಜಯ್ಯ, ಗೊಂಬೆಗಳು ಮಾಡುವ ಸೀತಮ್ಮ ಬಂದರೆ ನೀವು ಅವರನ್ನು ಯಾವ ಯಾವ ಪ್ರಶ್ನೆಗಳು ಕೇಳುವಿರಿ?.





## ನಾನಿವು ಮಾಡಬಲ್ಲೆನಾ?

| | | |
|---|---|---|
| 1. | ಮಣ್ಣಿನ ಪಾತ್ರೆಗಳಿಗೆ, ಇತರ ಪಾತ್ರೆಗಳಿಗೂ ಹೋಲಿಕೆಗಳು, ವ್ಯತ್ಯಾಸಗಳನ್ನುಹೇಳಬಲ್ಲೆನು. | ಹೌದು/ಅಲ್ಲ |
| 2. | ಮಣ್ಣಿನಿಂದ ಗಡಿಗೆಗಳನ್ನು ಹೇಗೆ ತಯಾರಿಸುತ್ತಾರೆಂದು ವಿವರಿಸಬಲ್ಲೆನು. | ಹೌದು/ಅಲ್ಲ |
| 3. | ಮಣ್ಣಿನಿಂದ ವಿವಿದ ತರಕಾರಿಗಳು, ಹಣ್ಣಿನ ಗೊಂಬೆಗಳುನ್ನು ತಯಾರಿಸಬಲ್ಲೆನು | ಹೌದು/ಅಲ್ಲ |
| 4. | ಮಣ್ಣಿನ ಪಾತ್ರೆಯ ಮೇಲೆ ಗೊಂಬೆಗಳನ್ನು ಬಿಡಿಸಿ ಬಣ್ಣವನ್ನು ಹಾಕಬಲ್ಲೆನು | ಹೌದು/ಅಲ್ಲ |
| 5. | ಮಣ್ಣಿನಿಂದ ಯಾವ ಯಾವ ವಸ್ತುಗಳು ತಯಾರಿಸುತಾರೆಂದು ವಿವರಿಸಬಲ್ಲೆನು. | ಹೌದು/ಅಲ್ಲ |
| 6. | ಮಣ್ಣಿನ ಪಾತ್ರೆಯಮೇಲಿನ ಗೊಂಬೆಗಳ ಕುರಿತು ಪ್ರಶ್ನೆಗಳು ಕೇಳಬಲ್ಲೆನು. | ಹೌದು/ಅಲ್ಲ |

SCERT TELANGANA





# 13– ಬಣ್ಣ– ಬಣ್ಣದ ಬಟ್ಟೆಗಳು



ತಂದೆ ತಾಯಿಯರ ಜೊತೆ ಸೇರಿ ಲಕ್ಷ್ಮಿ ಹಬ್ಬಕ್ಕಾಗಿ ಬಟ್ಟೆಗಳು ಕೊಳ್ಳಲು ಬಜಾರಿಗೆ ಹೋದಳು. ಅವರು ಅಲ್ಲಿ ಬಟ್ಟೆಯ ಅಂಗಡಿಯಲ್ಲಿ ವಿಧವಿಧವಾದ ಬಟ್ಟೆಗಳನ್ನು ನೋಡಿದರು. ಲಕ್ಷ್ಮಿಯ ತಂದೆ ತಾಯಿ ಅವಳಿಗೆ,ಅವಳ ಅಣ್ಣನಿಗೂ ಸಹ ಬಟ್ಟೆಗಳು ಕೊಂಡರು.ಲಕ್ಷ್ಮಿಯ ತಂದೆ ತಾಯಿ ಯಾರು ಯಾರಿಗೆ ಯಾವ ಯಾವ ಬಟ್ಟೆಗಳು ಕೊಂಡಿದ್ದಾರೋ ಊಹಿಸಿರಿ.ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಲಕ್ಷ್ಮಿಗಾಗಿ ಕೊಂಡವು | ಲಕ್ಷ್ಮಿ ಅವರ ಅಣ್ಣನಿಗೆ ಕೊಂಡವು | ತಾಯಿಗಾಗಿ ಕೊಂಡವು | ತಂದೆಗಾಗಿ ಕೊಂಡವು |
|---|---|---|---|
| | | | |

SCERT TELANGANA



ಲಕ್ಷ್ಮಿ, ಅವಳ ಅಣ್ಣ ಸಣ್ಣ ಮಕ್ಕಳಲ್ಲವೇ! ಅವಳ ತಂದೆ ತಾಯಿಯರು ದೊಡ್ಡವರಲ್ಲವೇ! ಇವರೆಲ್ಲ ಒಂದೇ ರೀತಿಯ ಬಟ್ಟೆಗಳನ್ನು ಕೊಂಡರೇ? ಬೇರೆ ಬೇರೆ ಬಟ್ಟೆಗಳು ಕೊಂಡರೇ? ಕೆಳಗಿನ ಚಿತ್ರಗಳನ್ನು ನೋಡಿರಿ. ಇವುಗಳಲ್ಲಿ ಯಾವುವು ಮಕ್ಕಳು ಹಾಕಿಕೊಳ್ಳುವವು? ಯಾವುವು ದೊಡ್ಡವರು ಹಾಕಿಕೊಳ್ಳುವವು? ಹೇಳಿರಿ.








ಚಿಕ್ಕ ಮಕ್ಕಳು ಧರಿಸುವ ಬಟ್ಟೆಗಳು, ದೊಡ್ಡವರು ಧರಿಸುವ ಬಟ್ಟೆಗಳು ಬೇರೆ ಬೇರೆಯಾಗಿ ಇರುತ್ತವೆಯಲ್ಲವೇ! ಮತ್ತೆ ನಿಮ್ಮ ಮನೆಯಲ್ಲಿ ಚಿಕ್ಕ ಮಕ್ಕಳು, ಸ್ತ್ರೀಯರು, ಪುರುಷರು ಧರಿಸುವ ಬಟ್ಟೆಗಳು ಯಾವುವು? ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಚಿಕ್ಕ ಮಕ್ಕಳು ಧರಿಸುವ ಬಟ್ಟೆಗಳು | ಪುರುಷರು ಧರಿಸುವ ಬಟ್ಟೆಗಳು | ಸ್ತ್ರೀಯರು ಧರಿಸುವ ಬಟ್ಟೆಗಳು |
|---|---|---|
| | | |

ಮೇಲಿನವುಗಳಲ್ಲಿ ನಿನಗೆ ಯಾವ ಬಟ್ಟೆಗಳೆಂದರೆ ಇಷ್ಟ? ಏಕೆ?



ಲಕ್ಷ್ಮಿ ಹೊಸ ಗೌನು ಹಾಕಿಕೊಂಡು ಮೇರಿಯ ಅವರ ಮನೆಗೆ ಹೋದಳು. ಈ ಗೌನು ಚೆನ್ನಾಗಿದೆ , ಎಲ್ಲಿಯದು? ಎಂದು ಮೇರಿ ಕೇಳಿದಳು. ಅವಳ ತಂದೆ ಷಾಪಿನಲ್ಲಿ ಕೊಂಡಿದ್ದಾನೆಂದು ಲಕ್ಷ್ಮಿ ಹೇಳಿದಳು.ಮೇರಿಯವರ ತಂದೆಯುಸಹ ಕ್ರಿಸ್‌ಮಸ್ ಹಬ್ಬಕ್ಕಾಗಿ ಮೇರಿಗೆ ಬಟ್ಟೆತಂದು ಗೌನು ಹೊಲಿಸಿದ್ದಾನೆ ಎಂದು ಹೇಳಿದಳು. ಲಕ್ಷ್ಮಿ ಸಿದ್ಧಪಡಿಸಿರುವ ಗೌನು ಧರಿಸಿದ್ದಾಳಲ್ಲವೆ! ಮೇರಿಗೆ ಅವಳ ತಂದೆ ಬಟ್ಟೆ ಖರೀದಿಸಿ ಹೊಲಿಸಿದ್ದಾನಲ್ಲ ! ಹೀಗೆ ಯಾವ ಯಾವ ಬಟ್ಟೆಗಳನ್ನು ನಾವು ಹೊಲಿಸಿಕೊಂಡು ಧರಿಸು ತ್ತೇವೆ? ಯಾವನ್ನು ಸಿದ್ಧಉಡುಪುಗಳನ್ನಾಗಿ ಕೊಳ್ಳುತ್ತೇವೆ ?

ನೀವಾದರೆ ಯಾವ ಯಾವ ಉಡುಪುಗಳನ್ನು ಹೊಲಿಸಿಕೊಳ್ಳುತ್ತೀರಿ?
ಹೊಲಿಸದಂತೆ ನೇರವಾಗಿ ಖರೀದಿಸಿ ಉಪಯೋಗಿಸುವ ಸಿದ್ಧಉಡುಪುಗಳು ಯಾವುವು?


ನಮ್ಮ ಶರೀರವನ್ನು ಬಿಸಿಲು , ಮಳೆ, ಚಳಿ, ವಾತಾವರಣಗಳಿಂದ ಕಾಪಾಡಿಕೊಳ್ಳುವುದಕ್ಕೆ ಬಟ್ಟೆಗಳು ಧರಿಸಿಕೊಳ್ಳುತ್ತೇವೆ. ಚಳಿಗಾಲದಲ್ಲಿ ಚಳಿಯಿಂದ ಕಾಪಾಡಿಕೊಳ್ಳುವುದಕ್ಕೆ, ಮಳೆಗಾಲದಲ್ಲಿ ನೆನೆಯದಂತೆ ಇರಬೇಕೆಂದು ಪ್ರತ್ಯೇಕವಾದ ಉಡುಪುಗಳು ಧರಿಸುತ್ತೇವೆ. ಕೆಳಗಿನ ಚಿತ್ರಗಳು ನೋಡಿರಿ. ಅವು ಯಾವ ಸಂಧರ್ಭದಲ್ಲಿ ಧರಿಸುವರೋ ಹೇಳಿರಿ.





SCERT TELANGANA







ಎಲ್ಲರೂ ಬಟ್ಟೆಗಳು ಧರಿಸುತ್ತಾರೆ. ಅದು ಒಂದು ಮೂಲಭೂತ ಅವಶ್ಯಕತೆಯುಳ್ಳ ವಸ್ತು ವಿವಿಧ ಪ್ರಾಂತ್ಯದವರು, ವಿವಿಧ ಮತದವರು ಅವರ ಸಂಪ್ರದಾಯದಂತೆ ವಿವಿಧ ರೀತಿಯ ಉಡುಪುಗಳು ಧರಿಸುತ್ತಾರೆ. ಕೆಳಗಿನ ಚಿತ್ರಗಳನ್ನು ನೋಡಿರಿ . ಇವುಗಳನ್ನು ಯಾರು ಧರಿಸುತ್ತಾರೆ? ಅವುಗಳ ವಿಶೇಷತೆ ಏನೆಂದು ಹೇಳಿರಿ ?





ಸಾಧಾರಣವಾಗಿ ಹಬ್ಬಗಳು, ಮದುವೆಗಳ ಸಂದರ್ಭಗಳಲ್ಲಿ ಪ್ರತ್ಯೇಕವಾದ ಉಡುಪುಗಳನ್ನು ಧರಿಸುತ್ತಾರೆ.ನೀವು ಸಹ ಹಬ್ಬಗಳಿದ್ದಾಗ ಇಲ್ಲವೆ ಶುಭಕಾರ್ಯಗಳಿದ್ದಾಗ ಇಲ್ಲವೇ ಹುಟ್ಟಿದ ದಿನದಂತಹ ಸಂದರ್ಭಗಳಲ್ಲಿ ಎಂತಹ ಉಡುಪುಗಳು ಧರಿಸುತ್ತೀರಿ ? ನಿಮ್ಮ ಸ್ನೇಹಿತರು ಸಹ ನಿಮ್ಮಹಾಗೇ ಧರಿಸಿಕೊಳ್ಳುತ್ತಾರೆಯೆ?

ಶಾಲೆಗೆ ಹೋಗುವ ಮಕ್ಕಳು ಶಾಲೆಗೆ ಪ್ರತ್ಯೇಕವಾದ ಬಟ್ಟೆಗಳು, ಅಂದರೆ ಯೂನಿಫಾರಂ (ಸಮವಸ್ತ್ರಗಳು)ಧರಿಸಿಕೊಳ್ಳುತ್ತಾರಲ್ಲವೇ! ಅದೇ ರೀತಿ ವಿವಿಧ ವೃತ್ತಿಯವರು ಸಹ ಕೆಲಸಗಳು ಮಾಡುವಾಗ ಪ್ರತ್ಯೇಕವಾದ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾರೆ. ಪೋಲಿಸರು, ಡಾಕ್ಟರುಗಳು, ನರ್ಸುಗಳು, ವಕೀಲರು, ವಿಮಾನ ನಡೆಸುವ ಪೈಲೆಟ್‌ಗಳು, ದೊಡ್ಡ-ದೊಡ್ಡ ಹೋಟೆಲ್‌ಗಳಲ್ಲಿ ಅಡಿಗೆ ಮಾಡುವವರು ಪ್ರತ್ಯೇಕವಾದ ಉಡುಪುಗಳು ಧರಿಸುತ್ತಾರೆ. ಕೆಳಗಿನ ಚಿತ್ರಗಳು ನೋಡಿರಿ. ಇವುಗಳನ್ನು ಯಾವ ಯಾವ ವೃತ್ತಿಯವರು ಧರಿಸುತ್ತಾರೋ ಹೇಳಿರಿ.








SCERT TELANGANA





ಬಸ್ಸುಗಳು ನಡೆಸುವ ಡ್ರೈವರುಗಳು, ಕಂಡಕ್ಟರುಗಳು, ಕ್ಲೀನರುಗಳು, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು,ಬ್ಯಾಂಕುಗಳು, ದೊಡ್ಡ ದೊಡ್ಡ ಕಂಪನಿಗಳಲ್ಲಿ ಕೆಲಸ ಮಾಡುವ ಸೆಕ್ಯುರಿಟಿ ಗಾರ್ಡುಗಳು ಮೊದಲಾದವರು ಸಹ ಕೆಲಸಮಾಡುವ ಸಮಯದಲ್ಲಿ ಪ್ರತ್ಯೇಕವಾದ ಉಡುಪುಗಳನ್ನು ಧರಿಸುತ್ತಾರೆ. ನಮ್ಮ ದೇಶದ ಪರವಾಗಿ ವಿವಿಧ ಆಟಗಳ ಸ್ಪರ್ಧೆಗಳು, ಕ್ರೀಡೆಗಳಲ್ಲಿ ಪಾಲ್ಗೊಳ್ಳುವವರೂ ಸಹ ಆಟವಾಡುವಾಗ ಪ್ರತ್ಯೇಕವಾದ ವಸ್ತ್ರಗಳು ಧರಿಸಿಕೊಳ್ಳುತ್ತಾರೆ.

ಹಾಗಾದರೆ ನಿಮ್ಮ ಪ್ರಾಂತ್ಯದಲ್ಲಿ ಇಂತಹ ಯಾವ ಯಾವ ಕೆಲಸಮಾಡುವವರಿದ್ದಾರೆ ?
ಅವರು ಧರಿಸುವ ಉಡುಪುಗಳು ಯಾವುವು ?

ನಾವು ವಿವಿಧ ವಸ್ತ್ರಗಳು ಧರಿಸುಕೊಳ್ಳುತ್ತೇವೆಂದು ತಿಳಿದಿದ್ದೀರಲ್ಲವೇ ! ನಾವು ಉಡುಪುಗಳು ಧರಿಸುವುದು ಎಷ್ಟು ಮುಖ್ಯವೋ ಶುಭ್ರವಾಗಿರುವವನ್ನು ಧರಿಸುವುದು ಅದಕ್ಕಿಂತ ಮುಖ್ಯ. ತಪ್ಪದಂತೆ ಪ್ರತಿದಿನ ಬೆಳಿಗ್ಗೆ ಸ್ನಾನ ಮಾಡಿದ ನಂತರ ಒಗೆದ ಉಡುಪುಗಳು ಧರಿಸಿಕೊಳ್ಳಬೇಕು. ನಾವು ಬಳಸುವ ಕರವಸ್ತ್ರ, ಟವಲ್ ಅಂತಹವುಗಳನ್ನು ಸಹ ಪ್ರತಿದಿನ ಒಗೆದು ಬಳಸಬೇಕು.

**ನಿಮಗೆ ಗೋತ್ತೇ ?**

ನೂಲು ಬಟ್ಟೆಗಳನ್ನು ಹತ್ತಿ ದಾರದಿಂದ ನೇಯುತ್ತಾರೆ.ರೇಷ್ಮೆ ಹುಳುಗಳಿಂದ ಬರುವ ದಾರದಿಂದ ರೇಷ್ಮೆ ಬಟ್ಟೆಗಳು ನೇಯುತ್ತಾರೆ.




## ಹಿಂದೆ ಎಂತಹ ಬಟ್ಟೆಗಳು ಹಾಕಿಕೊಳ್ಳುತ್ತಿದ್ದರು. !

ಈಗ ನಾವು ವಿವಿಧ ರೀತಿಯ ಬಟ್ಟೆಗಳು ಧರಿಸಿಕೊಳ್ಳುತ್ತೇವೆ. ಇವುಗಳಲ್ಲಿ ಕೆಲವು ಹೊಲಿಸಿ ಕೊಂಡಿರುವವು, ಆದರೆ ಮತ್ತೆ ಕೆಲವು ನೇರವಾಗಿ ತಯಾರಾಗಿರುವವು. ಅವುಗಳನ್ನೇ ಸಿದ್ದಉಡುಪುಗಳು ಕೊಳ್ಳುತ್ತೇವೆ. ಹಿಂದೆ ಅಂದರೆ ನಮ್ಮ ಅಜ್ಜ,ಅಜ್ಜಿಯವರು ಚಿಕ್ಕವರಾಗಿದ್ದಾಗ ಎಂತಹ ಉಡುಪುಗಳು ಧರಿಸುತ್ತಿದ್ದರು ? ಅದೇ ರೀತಿ ತಂದೆ ತಾಯಿಯರು ಚಿಕ್ಕವರಾಗಿದ್ದಾಗ ಯಾವ ಯಾವ ಉಡುಪುಗಳು ಧರಿಸಿಕೊಳ್ಳುತ್ತಿದ್ದರು? ಆದರೆ ಈಗ ಚಿಕ್ಕ ಮಕ್ಕಳು ಧರಿಸಿಕೊಳ್ಳುತ್ತಿರುವ ಉಡುಪುಗಳ ಹಾಗೆ ಇವೆಯೇ? ತಿಳಿದುಕೊಂಡು ಪಟ್ಟಿಯಲ್ಲಿ ಬರೆಯಿರಿ.

| ತಂದೆತಾಯಿಯರು ಚಿಕ್ಕವರಿದ್ದಾಗ ಧರಿಸಿದ ಉಡುಪುಗಳು | ಅಜ್ಜ ಅಜ್ಜಿಯವರು ಚಿಕ್ಕವರಿದ್ದಾಗ ಧರಿಸಿದ ಉಡುಪುಗಳು | ಈಗ ಚಿಕ್ಕಮಕ್ಕಳು ಧರಿಸಿಕೊಳ್ಳುತ್ತಿರುವ ಉಡುಪುಗಳು |
|---|---|---|
| | | |

SCERT TELANGANA








## ನಾವು ಡಿಜೈನ್ ಹಾಕೋಣವೇ !

ಯಾವ ಬಟ್ಟೆಯಾದರೂ ಅವುಗಳ ಮೇಲೆ ಇರುವ ಡಿಜೈನ್‌ಗಳಿಂದ ಅಂದವಾಗಿ ಕಾಣಿಸುತ್ತವೆ.ಇವುಗಳನ್ನು ಹಿಡಿದು ಇಷ್ಟವಾದವುಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಈ ಕೆಳಗಿನ ಚಿತ್ರಗಳು ನೋಡಿರಿ, ಅವು ಹೇಗಿವೆ ? ಅವುಗಳಲ್ಲಿ ನಿಮಗೆ ಯಾವುದು ಇಷ್ಟವಾಗಿದೆ ? ಏಕೆ ಹೇಳಿರಿ.












ಹೀಗೆ ನಾವು ಸಹ ಡಿಜೈನ್ ಹಾಕಬಹುದು ! ನಿಮಗೆ ಗೊತ್ತೇ ?



## ಡಿಜೈನ್‌ಗಳು ಹಾಕೋಣವೇ?

ನಿಮ್ಮ ಹತ್ತಿರದಲ್ಲಿರುವ ಟೈಲರ್ ಹತ್ತಿರ ಹೋಗಿ ತುಂಡು ಬಟ್ಟೆಗಳು ಸಂಗ್ರಹಿಸಿರಿ. ಒಂದು ಬೆಂಡೆಕಾಯಿಯನ್ನು ತೆಗೆದುಕೊಳ್ಳಿರಿ, ಅದನ್ನು ಅಡ್ಡವಾಗಿ ಕೊಯ್ಯಿರಿ ತುಂಡನ್ನು ಬಣ್ಣದಲ್ಲಿ ಇಲ್ಲವೇ ಇಂಕಿನಲ್ಲಿ ಅದ್ದಿ, ಬಿಳಿಕಾಗದದ ಮೇಲೆ ಇಲ್ಲವೇ ಬಟ್ಟೆಯ ಮೇಲೆ ಮುದ್ರಿಸಿರಿ. ನಿಮಗೆ ಇಷ್ಟವಾದ ಡಿಜೈನ್ ಹಾಕಿಕೊಳ್ಳಿರಿ.



ಹೀಗೆ ಬೆಂಡೆಕಾಯಿ ತುಂಡುಗಳ ಜೊತೆಗೆ ಆಲೂಗಡ್ಡೆ ತುಂಡುಗಳು ಇಲ್ಲವೆ ಕೈಹೆಬ್ಬೆರಳು, ಪಾದಮುದ್ರೆಗಳು ಮೊದಲಾದವುಗಳನ್ನು ಬಣ್ಣದಲ್ಲಿ ಅದ್ದಿ ವಿವಿಧ ರೀತಿಯ ಡಿಜೈನ್ ಹಾಕಬಹುದು.

### ಮುಖ್ಯ ಪದಗಳು

1. ಬಟ್ಟೆಗಳ ಅವಶ್ಯಕತೆ
2. ವಿಧವಿಧ ಬಟ್ಟೆಗಳು
3. ವೃತ್ತಿಯ ಆಧಾರವಾಗಿರುವ ಬಟ್ಟೆಗಳು
4. ವಾತಾವರಣಕ್ಕೆ ತಕ್ಕ ಬಟ್ಟೆಗಳು
5. ಶುಭ್ರವಾದ ಬಟ್ಟೆಗಳು
6. ಡಿಜೈನ್‌ಗಳು
7. ಸಿದ್ದ ಉಡುಪುಗಳು
8. ಹೊಲಿಸುವ ಬಟ್ಟೆಗಳು
9. ಸಮವಸ್ತ್ರ(ಯೂನಿಫಾರಂ)

SCERT TELANGANA



## ನಾವು ಕಲಿತುಕೊಂಡಿರುವವು

- ಉಡುಪುಗಳು ನಮಗೆ ಪ್ರಾಥಮಿಕ ಬೇಡಿಕೆ , ಮಕ್ಕಳು, ದೊಡ್ಡವರು, ಸ್ತ್ರೀಯರು, ಪುರುಷರು ವಿವಿಧ ರೀತಿಯ ಉಡುಪುಗಳು ಧರಿಸುತ್ತಾರೆ,
- ಕೆಲವು ಜನ ರೆಡಿಮೇಡ್ ಬಟ್ಟೆಗಳು ಕೊಂಡರೆ, ಮತ್ತೆ ಕೆಲವರು ಬಟ್ಟೆ ಕೊಂಡು ಹೊಲಿಸಿಕೊಳ್ಳುತ್ತಾರೆ.
- ಸಂಪ್ರದಾಯವನ್ನು ಹಿಡಿದು ಹಬ್ಬಗಳು, ಮದುವೆಗಳಂತಹ ಸಂಧರ್ಭಗಳಲ್ಲಿ ಪ್ರತ್ಯೇಕ ಉಡುಪುಗಳು ಧರಿಸುತ್ತಾರೆ.
- ವಿವಿಧ ವೃತ್ತಿಯವರು ಕೆಲಸಮಾಡುವಾಗ ಆ ವೃತ್ತಿಗೆ ಸಂಬಂಧಿಸಿದ ಪ್ರತ್ಯೇಕ ಉಡುಪುಗಳು ಧರಿಸುತ್ತಾರೆ.
- ವಾತಾವರಣಕ್ಕೆ ಹೊಂದಿಕೊಂಡು ಕಾಲಕ್ಕನುಗುಣವಾಗಿ ವಿವಿಧ ರೀತಿಯ ಉಡುಪುಗಳು ಧರಿಸುತ್ತಾರೆ.
- ಬಟ್ಟೆಗಳ ಮೇಲೆ ಬಣ್ಣಗಳಿಂದ ವಿವಿಧ ರೀತಿಯ ಡಿಜೈನಗಳು ಹಾಕುತ್ತಾರೆ.

## ಇವನ್ನು ಮಾಡಿರಿ



### ವಿಷಯಾವಗಾಹನೆ

1. ನಾವು ಬಟ್ಟೆಗಳು ಏಕೆ ಧರಿಸಬೇಕು ?
2. ಮಕ್ಕಳು ,ಹೆಂಗಸರು, ಗಂಡಸರು, ಧರಿಸುವ ಬಟ್ಟೆಗಳಿಗೆ ಮೂರು ಉದಾಹರಣೆಗಳು ಬರೆಯಿರಿ,
3. ವಿವಿಧ ವೃತ್ತಿಯವರು ಧರಿಸುವ ಪ್ರತ್ಯೇಕವಾದ ಉಡುಪುಗಳು ಹೆಸರಿಸಿರಿ ?
4. ಸ್ತ್ರೀ ಪುರುಷರ ಬಟ್ಟೆಗಳಿಗೆ ಹೋಲಿಕೆ, ವ್ಯತ್ಯಾಸಗಳು ಬರೆಯಿರಿ.
5. ಹೊಲಿಸಿಕೊಂಡ ಬಟ್ಟೆಗಳು, ಸಿದ್ದ ಉಡುಪುಗಳಲ್ಲಿ ನಿಮಗೆ ಯಾವುವು ಇಷ್ಟವಾದವು? ಏಕೆ ? ಮೂರು ಕಾರಣಗಳನ್ನು ಹೇಳಿರಿ ಬರೆಯಿರಿ.
6. ನಾವು ಶುಭ್ರವಾದ ಬಟ್ಟೆಗಳು ಧರಿಸಿಕೊಳ್ಳಬೇಕಲ್ಲವೇ ! ಏಕೆ ?




### ಚಿತ್ರಗಳು ಬಿಡಿಸಿ, ಬಣ್ಣಗಳು ಹಾಕಿರಿ.

1 ಕೆಳಗಿನ ಡಿಜೈನ್‌ನನ್ನು ನೋಡಿರಿ,ನೀವು ಬಿಡಿಸಿ, ನಿಮಗೆ ಇಷ್ಟವಾದ ಬಣ್ಣಗಳು ಹಾಕಿರಿ



SCERT TELANGANA





2. ನಿಮಗೆ ಇಷ್ಟವಾದ ಉಡುಪುಗಳ ಚಿತ್ರಗಳನ್ನು ಬಿಡಿಸಿ . ಬಣ್ಣಗಳನ್ನು ಹಾಕಿರಿ .

3 ಸೀರೆಗಳ ಮೇಲೆ ವಿವಿಧ ರೀತಿಯ ಡಿಜೈನಗಳು ಇರುತ್ತವೆಯಲ್ಲವೇ ! ನೀವು ಸಹ ನಿಮ್ಮ ಮನೆಯಲ್ಲಿ ಸೀರೆಗಳನ್ನು ನೋಡಿ ನಿಮಗೆ ಇಷ್ಟವಾದ ಡಿಜೈನ್‌ನನ್ನು ನೋಟ್ ಪುಸ್ತಕದಲ್ಲಿ ಬಿಡಿಸಿರಿ.



## ಸಮಾಚಾರ ಕೌಶಲ್ಯ – ಪ್ರಾಜೆಕ್ಟ ಕೆಲಸ

1 . ನಿಮ್ಮ ಸ್ನೇಹಿತರನ್ನು ಕೇಳಿ ಹಬ್ಬಗಳಿಗೆ ಅವರು ಕೊಂಡ ಬಟ್ಟೆಗಳ ವಿವರಗಳು ಸಂಗ್ರಹಿಸಿ , ಪಟ್ಟಿಯಲ್ಲಿ ಬರೆಯಿರಿ.

| ಕ್ರ.ಸಂ. | ಸ್ನೇಹಿತನ ಹೆಸರು | ಹಬ್ಬದ ಹೆಸರು | ಯಾವ ಬಟ್ಟೆಗಳು ಖರೀದಿಸಿದ್ದಾರೆ? | ಸಿದ್ದ ಉಡುಪುಗಳೇ? ಹೊಲೆಸಿಕೊಂಡಬಟ್ಟೆಗಳೇ? |
|---|---|---|---|---|
| | | | | |

- ಹೆಚ್ಚು ಜನ ಕೊಂಡ ಬಟ್ಟೆಗಳಾವುವು ? ಯಾವ ಯಾವ ಹಬ್ಬಗಳಿಗೆ ಖರೀದಿಸಿದ್ದಾರೆ ?
- ಹೆಚ್ಚು ಜನ ರೆಡಿಮೇಡ್ ಬಟ್ಟೆ ಕೊಂಡಿದ್ದಾರೆಯೇ ? ಬಟ್ಟೆಗಳು ಕೊಂಡು ಹೊಲಿಸಿಕೊಂಡಿದ್ದಾರೆಯೇ?

2. ನಿಮಗೆ ಇಷ್ಟವಾದ ಡಿಜೈನ್‌ಗಳಿರುವ ತುಂಡು ಬಟ್ಟೆಯನ್ನು ಸಂಗ್ರಹಿಸಿರಿ. ಅವುಗಳನ್ನು ಚಾರ್ಟುಗಳ ಮೇಲೆ ಅಂಟಿಸಿ ಪ್ರದರ್ಶಿಸಿರಿ.

3. ವಿವಿಧ ಪ್ರಾಂತಗಳಲ್ಲಿಯವರು ಧರಿಸುವ ಬಟ್ಟೆಗಳ ಚಿತ್ರಗಳನ್ನು ವಾರ್ತಾ ಪತ್ರಿಕೆಗಳಿಂದ ಸೇಕರಿಸಿ, ಚಾರ್ಟುಗಳ ಮೇಲೆ ಅಂಟಿಸಿರಿ.



## ಪ್ರಶಂಸೆ.

1. ಕೆಲವು ಜನರಿಗೆ ಧರಿಸಿಕೊಳ್ಳಲು ಬಟ್ಟೆಗಳಿರುವುದಿಲ್ಲ. ಹಾಗೆಯೇ ಅಗ್ನಿ ಪ್ರಮಾದಗಳು, ಪ್ರವಾಹಗಳು, ಭೂಕಂಪಗಳು, ತುಫಾನುಗಳು ಮೊದಲಾದವುಗಳಿಂದ ಸಹ ಎಲ್ಲಾ ಕಳೆದುಕೊಂಡವರಿಗೆ ಸಹ ಬಟ್ಟೆಗಳು ಇರುವುದಿಲ್ಲ. ಅಂತಹವರಿಗೆ ನಾವು ಹೇಗೆ ಸಹಾಯ ಮಾಡಬಹುದು ?



## ಪ್ರಶ್ನಿಸುವುದು

1. ಬಟ್ಟೆಗಳು ಕೊಳ್ಳುವುದಕ್ಕೆ ಲಕ್ಷ್ಮಿ ಅವರ ತಂದೆ ತಾಯಿಯ ಜೊತೆ ಅಂಗಡಿಗೆ ಹೋದಳಲ್ಲವೇ ? ಲಕ್ಷ್ಮಿ ಅವರ ತಂದೆ ತಾಯಿಯರು ಅಂಗಡಿಯವವರನ್ನು ಏನೇನು ಪ್ರಶ್ನೆಗಳು ಕೇಳಿರುತ್ತಾರೆ ? ನಾವು ಬಟ್ಟೆಗಳು ಕೊಳ್ಳುವಾಗ ಏಕೆ ಪ್ರಶ್ನಿಸಬೇಕು?





## ನಾನಿವು ಮಾಡಬಲ್ಲೆನೇ

| | | |
|---|---|---|
| 1. | ಬಟ್ಟೆಗಳ ಅವಶ್ಯಕತೆಗಳನ್ನು ವಿವರಿಸಬಲ್ಲೆನು. | ಹೌದು/ ಅಲ್ಲ |
| 2 | ವಿವಿಧ ರೀತಿಯ ಬಟ್ಟೆಗಳಿಗೆ ಸಂಬಂಧಿಸಿದ ವಿವರಗಳು ಪಟ್ಟಿಯಲ್ಲಿ ಬರೆಯಬಲ್ಲೆನು. | ಹೌದು/ ಅಲ್ಲ |
| 3. | ವಿವಿಧ ವೃತ್ತಿಯವರು ಧರಿಸುವ ಬಟ್ಟೆಗಳನ್ನು ಗುರ್ತಿಸಬಲ್ಲೆನು. | ಹೌದು/ ಅಲ್ಲ |
| 4. | ಶುಭ್ರವಾದ ಬಟ್ಟೆಗಳು ಧರಿಸುವುದು ಅವಶ್ಯಕವೆಂದು ತಿಳಿದುಕೊಂಡಿದ್ದೇನೆ . | ಹೌದು/ಅಲ್ಲ |
| 5. | ವಿವಿಧ ರೀತಿಯ ಡಿಜೈನ್‌ಗಳ ಚಿತ್ರಗಳು ಬಿಡಿಸಬಲ್ಲೆನು. | ಹೌದು/ ಅಲ್ಲ |
| 6. | ವಿವಿಧ ರೀತಿಯ ಬಟ್ಟೆಗಳ ಕುರಿತು ಪ್ರಶ್ನೆಗಳು ಕೇಳಬಲ್ಲೆನು. | ಹೌದು/ ಅಲ್ಲ |






SCERT TELANGANA

# 14. ಯಾವುವು ಎಲ್ಲೆಲ್ಲಿ

ಬಿಂದು ಮೂರನೇ ತರಗತಿ ಓದುತ್ತಿದ್ದಾಳೆ. ಬಿಂದು ಜೊತೆಗೆ ರಾಜು, ರಮ, ಸತೀಶ್ ಹೀಗೆ ಬಹಳ ಮಂದಿ ತರಗತಿಯಲ್ಲಿ ಮಕ್ಕಳಿದ್ದಾರೆ. ಅವರೆಲ್ಲಾ ಸಾಲಾಗಿ ಬೆಂಚುಗಳ ಮೇಲೆ ಕುಳಿತ್ತಿದ್ದಾರೆ. ಅವರ ತರಗತಿ ಕೋಣೆಯನ್ನು ನೋಡೋಣವೇ!







SCERT TELANGANA

- ಮುಂದಿನ ಸಾಲಿನಲ್ಲಿ ಕುಳಿತಿರುವವರು ಯಾರು?
- ಹಿಂದಿನ ಸಾಲಿನಲ್ಲಿ ಕುಳಿತಿರುವವರು ಯಾರು?
- ಮಧ್ಯದ ಸಾಲಿನಲ್ಲಿ ಯಾರು ಯಾರಿದ್ದಾರೆ?
- ಕೆಳಗಿನ ಪಟ್ಟಿಯಲ್ಲಿನ ಹೆಸರುಗಳನ್ನು ಓದಿರಿ. ಇವರಿಗೆ ಮುಂದೆ, ಹಿಂದೆ, ಬಲಕ್ಕೆ, ಎಡಗಡೆ ಪಕ್ಕದಲ್ಲಿ ಯಾರುಯಾರಿದ್ದಾರೋ ಪಟ್ಟಿಯಲ್ಲಿ ಬರೆಯಿರಿ

| ವಿದ್ಯಾರ್ಥಿ ಹೆಸರು | ಮುಂದೆ | ಹಿಂದೆ | ಬಲಗಡೆ | ಎಡಗಡೆ |
|---|---|---|---|---|
| ಬಿಂದು | | | | |
| ಮೇರಿ | | | | |
| ಇಸ್ಮಾಯಿಲ್ | | | | |
| ರಹೀಂ | | | | |




ಬಿಂದು ಅವರ ತರಗತಿ ಕೋಣೆ ನೋಡಿದ್ದೀರಲ್ಲವೇ! ಯಾರುಯಾರು ಎಲ್ಲಿ ಕುಳಿತ್ತಿದ್ದಾರೋ ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿರಿ. ಕೆಳಗಿನ ಚಿತ್ರದಲ್ಲಿ ಬರೆಯಿರಿ.



SCERT TELANGANA



ಬಿಂದು ಅವರ ತರಗತಿ ಕೋಣೆ ಹೇಗಿದೆಯೋ! ಯಾರುಯಾರು ಎಲ್ಲೆಲ್ಲಿ ಕುಳಿತ್ತಿದ್ದಾರೋ ಬರೆದಿದ್ದೀರಲ್ಲವೇ! ಹಾಗಾದರೆ ನಿಮ್ಮ ತರಗತಿ ಕೋಣೆಯಲ್ಲಿ ಎಷ್ಟು ವಿದ್ಯಾರ್ಥಿಗಳು ಇದ್ದಾರೆ? ಯಾರುಯಾರು ಎಲ್ಲೆಲ್ಲಿ ಕುಳಿತುಕೊಳ್ಳುವರೋ ತೋರಿಸಬಲ್ಲಿರೇ? ಕೆಳಗಿನ ಚದರವನ್ನು ನಿಮ್ಮ ತರಗತಿ ಕೋಣೆ ಎಂದು ತಿಳಿಯಿರಿ. ಬಿಂದು ಅವರ ತರಗತಿ ಕೋಣೆಯಂತೆಯೇ ನಿಮ್ಮ ತರಗತಿ ಕೋಣೆಯಲ್ಲಿ




- ಕಪ್ಪು ಹಲಿಗೆ ಎಲ್ಲಿ ಇದೆ?
- ಕುರ್ಚಿ ಎಲ್ಲಿ ಇದೆ ?
- ಟೇಬಲ್ ಎಲ್ಲಿ ಇದೆ ?
- ಮುಂದಿನ ಸಾಲಿನಲ್ಲಿ ಯಾರು ಯಾರು ಕುಳಿತುಕೊಳ್ಳುತ್ತಾರೆ? ಅವರ ಹೆಸರುಗಳು ಬರೆಯಿರಿ.
- ಉಳಿದ ಸಾಲುಗಳಲ್ಲಿ ಯಾರು ಯಾರು ಕುಳಿತುಕೊಳ್ಳುತ್ತಾರೋ ಅವರ ಹೆಸರುಗಳನ್ನು ಬರೆಯಿರಿ.


ನಿಮ್ಮ ತರಗತಿ ಕೋಣೆಯಲ್ಲಿ ಯಾರುಯಾರು ಯಾವಕಡೆ ಕುಳಿತುಕೊಳ್ಳುತ್ತಾರೋ ಚಿತ್ರ ಪಟದಲ್ಲಿ ನೋಡಿದ್ದೀರಲ್ಲವೇ! ಬಿಂದು ಅವರ ಶಾಲೆಯನ್ನು ನೋಡೋಣವೇ?



SCERT TELANGANA



ಬಿಂದು ಅವರ ಶಾಲೆಯನ್ನು ಹೀಗೂ ಬಿಡಿಸಬಹುದು ಗೊತ್ತೇ? ಆ ಶಾಲೆ ಚಿತ್ರಪಟವನ್ನು ನೋಡಿರಿ.



SCERT TELANGANA



ಬಿಂದು ಅವರ ಶಾಲೆಯಲ್ಲಿ ಕೆಳಗೆ ಏಳು ಕೋಣೆಗಳು, ಮೇಲೆ ಸಹ ಏಳು ಕೋಣೆಗಳು ಇವೆ. ಅದೇರೀತಿ ಖಾಲಿ ಸ್ಥಳದಲ್ಲಿ ಎಂಟು ತೆಂಗಿನ ಮರಗಳು ಇವೆ. ಆ ಶಾಲೆ ಚಿತ್ರವನ್ನು ಮೇಲೆ ತೋರಿಸಿದ ವಿಧವಾಗಿ ಗುರ್ತುಗಳಲ್ಲಿ ಬಿಡಿಸಬಹುದು. ಹಾಗಾದರೆ ನಿಮ್ಮ ಶಾಲೆಯಲ್ಲಿ ಎಷ್ಟು ಕೋಣೆಗಳು ಇವೆ ? ಖಾಲಿ ಸ್ಥಳದಲ್ಲಿ ಯಾವ ಯಾವ ಗಿಡಗಳಿವೆ? ಎಷ್ಟು ಇವೆ?

ನೀವು ನಿಮ್ಮ ಶಾಲೆ ಚಿತ್ರಪಟವನ್ನು ಸಹ ಮೇಲೆ ತೋರಿಸಿದ ಹಾಗೆ ಬಿಳಿ ಹಾಳೆಯ ಮೇಲೆ ಬಿಡಿಸಿರಿ.


ನೀವು ಚಿತ್ರವನ್ನು ಬಿಡಿಸುವ ಮೊದಲು ಗಿಡಗಳಿಗಾಗಿ ಒಂದು ಗುರ್ತನ್ನು ಏರ್ಪಡಿಸಿಕೊಳ್ಳಬೇಕು.

ಕೋಣೆಗಳಿಗೆ ಬಾಗಿಲುಗಳು ಯಾವಕಡೆ ಇವೆಯೋ ನೋಡಿ ಮೇಲೆ ತೋರಿಸಿದ ಹಾಗೆ ಬಿಡಿಸಬೇಕು.

ಶಾಲೆಗೆ ರಕ್ಷಣಾ ಗೋಡೆ, ಶಾಲೆಗೇಟು, ಧ್ವಜದಕಟ್ಟೆ ಮುಂತಾದವು ಯಾವ ಕಡೆ ಇವೆಯೋ ನೋಡಿ ಚಿತ್ರದಲ್ಲಿ ಗುರ್ತುಗಳಿಂದ ತೋರಿಸಬೇಕು.



ಬಿಂದು ಪ್ರತಿದಿನ ಶಾಲೆಗೆ ನಡೆದು ಬರುತ್ತಾಳೆ. ಬಿಂದು ಅವರ ಊರಿನಲ್ಲಿ ಏನೇನಿವೆ ಗೊತ್ತೇ? ಅದೇ ರೀತಿ ಬಿಂದು ಮನೆಯಿಂದ ಶಾಲೆಗೆ ಬರುವಾಗ ದಾರಿಯಲ್ಲಿ ಏನೇನು ಬರುತ್ತವೆ? ಕೆಳಗಿನ ಚಿತ್ರವನ್ನು ನೋಡಿರಿ. ನಿಮ್ಮ ಸ್ನೇಹಿತರ ಜೊತೆ ಸೇರಿ ಚರ್ಚಿಸಿರಿ.





- ಶಾಲೆಗೆ ಯಾರ ಮನೆ ಹತ್ತಿರದಲ್ಲಿದೆ? ಬಿಂದುಮನೆಯೇ ಅಥವಾ ರೇಖಳದೇ?
- ಬಿಂದು ಪಾರ್ಕ್‌ನ ಮಾರ್ಗದಲ್ಲಿ ಪಾಠಶಾಲೆಗೆ ಹೋಗುವ ದಾರಿಯಲ್ಲಿ ಏನೇನಿವೆ?
- ಬಿಂದು ಶಾಲೆಗೆ ಯಾವ ಯಾವ ಮಾರ್ಗವಾಗಿ ಹೋಗಬಹುದು ಗೆರೆ ಎಳೆದು ತೋರಿಸಿರಿ.

ಒಂದು ಪ್ರಾಂತದಲ್ಲಿ ಇರುವ ಮನೆ,ಪಾಠಶಾಲೆ, ಆಸ್ಪತ್ರೆ, ತೋಟ ಕೊಳವೆಬಾವಿ ಮೊದಲಾದವುಗಳನ್ನು ಅವು ಇರುವ ಹಾಗೆಯೇ ಚಿತ್ರದಲ್ಲಿ ತೋರಿಸಲು ಆಗುವುದಿಲ್ಲ. ಇಂತಹವುಗಳನ್ನು ಗುರ್ತುಗಳಿಂದ ಸೂಚಿಸುತ್ತಾರೆ.



ಕೆಳಗಿನ ಗುರ್ತುಗಳನ್ನು ಉಪಯೋಗಿಸಿರಿ. ಬಿಂದು ಅವರ ಊರಿನ ಚಿತ್ರಪಟದಲ್ಲಿ ಯಾವುವು ಎಲ್ಲಿ ಇವೆಯೋ ಗುರ್ತುಗಳಿಂದ ತೋರಿಸಿರಿ.




SCERT TELANGANA

ಬಿಂದು ಅವರ ಊರಿನ ಚಿತ್ರಪಟ ನೋಡಿರುವಿರಿ! ಇದರಲ್ಲಿ ಗುರ್ತುಗಳಿಂದ ತೋರಿಸಿದ್ದಾರೆ. ಹಾಗಾದರೆ ನಿಮ್ಮ ಊರು/ಬೀಧಿಯಿಂದ ನಿಮ್ಮ ಶಾಲೆಗೆ ಬರುವ ದಾರಿಯನ್ನು ಬಿಡಿಸಬಲ್ಲಿರಾ? ಇದಕ್ಕಾಗಿ ಕೆಳಗಿನಂತೆ ಮಾಡಿರಿ.

- ಮೊದಲು ನಿಮ್ಮ ಶಾಲೆಯನ್ನು ಮಧ್ಯದಲ್ಲಿ ಗುರ್ತಿಸಿರಿ. ಅದಕ್ಕೆ ಗುರ್ತು S ಹಾಕಿರಿ.
- ನಿಮ್ಮ ಶಾಲೆಯಿಂದ ನಿಮ್ಮ ಮನೆ ಯಾವಕಡೆ ಇದೆಯೋ ಗುರ್ತಿಸಿರಿ. ಅದಕ್ಕೆ ಗುರ್ತು ಹಾಕಿರಿ.
- ಅದೇರೀತಿ ನಿಮ್ಮ ಸ್ನೇಹಿತರ ಮನೆಗಳು ಸಹ ಯಾವ ಕಡೆ ಇವೆಯೋ ಗುರ್ತಿಸಿರಿ.ಅವುಗಳಿಗೂ ಗುರ್ತುಗಳು ಹಾಕಿರಿ.
- ಈಗ ನಿಮ್ಮ ಮನೆಯಿಂದ ನಿಮ್ಮ ಶಾಲೆಗೆ ರಸ್ತೆ / ದಾರಿಯನ್ನು ಬಿಡಿಸಿರಿ.
- ಅದೇರೀತಿ ನಿಮ್ಮ ಸ್ನೇಹಿತರ ಮನೆಗಳಿಂದ ಸಹ ಶಾಲೆಗೆ ರಸ್ತೆ /ದಾರಿಯನ್ನು ಬಿಡಿಸಿರಿ.

- ಈಗ ನಿಮ್ಮ ಮನೆಯಿಂದ ಶಾಲೆಗೆ ಬರುವ ದಾರಿಯಲ್ಲಿ ಎಡಗಡೆ, ಬಲಗಡೆ ಏನೇನಿವೆ ನೋಡಿರಿ. ಒಂದು ವೇಳೆ ಗಿಡ ಇದ್ದರೆ  ಗುರ್ತು ಇಡಿರಿ. ಗುಡಿ ಇದ್ದರೆ  ಹಾಕಿರಿ. ಮಸೀದಿ ಇದ್ದರೆ  ಗುರ್ತು ಹಾಕಿರಿ. ಚರ್ಚ್ ಇದ್ದರೆ  ಗುರ್ತು ಹಾಕಬೇಕು. ಪೋಸ್ಟಾಫೀಸ್ PO ಇದ್ದರೆ ಗುರ್ತು ಹಾಕಿರಿ. ಆಸ್ಪತ್ರೆ ಇದ್ದರೆ D ಗುರ್ತು ಇಡಬೇಕು. ಪಾರ್ಕ್ ಇದ್ದರೆ  ಇರಿಸಿರಿ.

ನಿಮ್ಮ ಶಾಲೆಯಿಂದ ನಿಮ್ಮ ಮನೆಗೆ ಹೋಗುವ ದಾರಿಯನ್ನು ಚಿತ್ರಪಟದಲ್ಲಿ ನೋಡಿದ್ದೀರಲ್ಲವೇ! ಹೀಗೆ ನಿಮ್ಮ ಗ್ರಾಮದ ಚಿತ್ರಪಟವನ್ನು ಬಿಡಿಸಬಹುದು. ಅದೇರೀತಿ ನಿಮ್ಮ ಊರಿನ ಬಗ್ಗೆಯಾದರೂ, ಯಾವ ಪ್ರಾಂತದ ಬಗ್ಗೆಯಾದರೂ ಗುರ್ತುಗಳು ಉಪಯೋಗಿಸಿ ಚಿತ್ರಪಟಗಳು ಎಳೆಯಬಹುದು.

## ಮುಖ್ಯ ಪದಗಳು

1. ಚಿತ್ರಪಟ
2. ಪ್ರಾಂತ್ಯ
3. ಗುರ್ತುಗಳು
4. ಮುಂದೆ ಹಿಂದೆ
5. ಮಾರ್ಗ

## ನಾವು ಕಲಿತುಕೊಂಡಿರುವವು

- ತರಗತಿ ಕೋಣೆ, ಶಾಲೆ, ಬೀಧಿ, ಗ್ರಾಮ. ಹೀಗೆ ಎಲ್ಲಾ ಚಿತ್ರಪಟಗಳು ಬಿಡಿಸಬಹುದು.
- ಚಿತ್ರಪಟದಲ್ಲಿ ಪಾಠಶಾಲೆ, ಆಸ್ಪತ್ರೆ, ಪಾರ್ಕ್ ಅಂತವುಗಳನ್ನು ಚಿಹ್ನೆಗಳಿಂದ ಸೂಚಿಸುತ್ತಾರೆ.
- ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದಕ್ಕೆ ಚಿಹ್ನೆಗಳು ಉಪಯೋಗವಾಗುತ್ತವೆ.

## ಇವು ಮಾಡಿರಿ



### ವಿಷಯಾವಗಾಹನೆ

1. ನಿಮ್ಮ ಮನೆಯಿಂದ ಪಾಠಶಾಲೆಗೆ ಹೋಗುತ್ತಿದ್ದರೆ ಯಾವುವು ಯಾವಕಡೆ ಇವೆ?

ಬಲಗಡೆಯಲ್ಲಿ ..................................

ಎಡಗಡೆಯಲ್ಲಿ ..................................

2. ನಿಮ್ಮ ಮನೆಗೆ ಯಾವ ಕಡೆಯಲ್ಲಿ ಯಾರ ಮನೆ ಇದೆಯೋ ಹೇಳಿರಿ.

| ಬಲಗಡೆಯಲ್ಲಿ | ಎಡಗಡೆಯಲ್ಲಿ | ಮುಂದೆ | ಹಿಂದೆ |
|---|---|---|---|
| | | | |




SCERT TELANGANA







## ಚಿತ್ರ ಕೌಶಲ್ಯ




1. ಪಟವನ್ನು ನೋಡಿರಿ.

- ಗುರ್ತುಗಳ ಆಧಾರವಾಗಿ ರಾಮು ಅವರ ಊರಿನಲ್ಲಿ ಏನು ಇವೆಯೋ ಹೇಳಿರಿ.
- ರಾಮು ಮನೆಯಿಂದ ಆಸ್ಪತ್ರೆಗೆ ಹೋಗುವ ದಾರಿಯನ್ನು ಬಿಡಿಸಿರಿ.
- ರಾಮು ಮನೆಯಿಂದ ಶಾಲೆಗೆ ಹೋಗುವ ದಾರಿಗಳನ್ನು ತೋರಿಸಿರಿ.

3 ನಿಮ್ಮ ಮನೆಯಿಂದ ಪಾಠಶಾಲೆಗೆ ಹೋಗುವ ದಾರಿಯನ್ನು ತೋರಿಸುವ ಚಿತ್ರ ಬಿಡಿಸಿರಿ.



## ಸಮಾಚಾರ ಕೌಶಲ್ಯ –ಪ್ರಾಜೆಕ್ಟ್ ಕೆಲಸ

1 ನಿಮ್ಮ ಗ್ರಾಮದಲ್ಲಿ/ಬೀಧಿಯಲ್ಲಿ ಏನೇನಿವೆಯೋ ವಿವರಗಳು ಶೇಖರಿಸಿರಿ.( ಪೋಸ್ಟಾಫೀಸ್, ಶಾಲೆ, ಗುಡಿ, ಬ್ಯಾಂಕ್, ನ್ಯಾಯಬೆಲೆ ಅಂಗಡಿ, ವೈದ್ಯಶಾಲೆ ಮೊದಲಾದವು) ಒಂದೊಂದಕ್ಕೆ ಒಂದೊಂದು ಗುರ್ತನ್ನು ಇಟ್ಟುಕೊಳ್ಳಿ. ನಿಮ್ಮ ಗ್ರಾಮದಲ್ಲಿನ ಬೀಧಿಗಳನ್ನು, ರಸ್ತೆಗಳನ್ನು ಬಿಡಿಸಿರಿ. ಗ್ರಾಮದಲ್ಲಿ ಯಾವುವು ಎಲೆಲ್ಲಿವೆಯೋ ಗುರ್ತುಗಳಿಂದ ಚಿತ್ರದಲ್ಲಿ ತೋರಿಸಿರಿ. ಗ್ರಾಮ ಪಟ ತಯಾರು ಮಾಡಿರಿ.



## ಪ್ರಶ್ನಿಸುವುದು.

1 ಬಿಂದು ಅವರ ಸ್ನೇಹಿತರೆಲ್ಲಾ ಊರಿನ ಪಟ ಬಿಡಿಸಬೇಕೆಂದು ಇಷ್ಟಪಟ್ಟರು. ಇದಕ್ಕಾಗಿ ಅವರೆಲ್ಲರೂ ಅವರ ಶಿಕ್ಷಕರ ಹತ್ತಿರ ಹೋದರು. ಅವರನ್ನು ವಿವಿಧ ರೀತಿಯ ಪ್ರಶ್ನೆಗಳು ಕೇಳಿದರು. ಅದೇ ರೀತಿ ನೀವು ಸಹ ನಿಮ್ಮ ಊರು/ಬೀದಿ ಚಿತ್ರ ಪಟ ಬಿಡಿಸುವುದಕ್ಕೆ ನಿಮ್ಮ ಶಿಕ್ಷಕರನ್ನು ಯಾವಯಾವ ಪ್ರಶ್ನೆಗಳು ಕೇಳುತ್ತಿರಿ ? ಅವುಗಳನ್ನು ಬರೆಯಿರಿ.



## ನಾನಿವು ಮಾಡಬಲ್ಲೆನಾ



| | | |
|---|---|---|
| 1 | ನಾನು ಚಿತ್ರ ಪಟವನ್ನು ಓದಬಲ್ಲೆನು. | ಹೌದು/ಅಲ್ಲ |
| 2 | ಪಟದಲ್ಲಿ ಸೂಚಿಸುವ ಗುರ್ತುಗಳನ್ನು ಅರ್ಥ ಮಾಡಿಕೊಳ್ಳಬಲ್ಲೆನು. | ಹೌದು/ಅಲ್ಲ |
| 3 | ಮನೆಯಿಂದ ಶಾಲೆಗೆ ದಾರಿಯನ್ನು ಬಿಡಿಸಬಲ್ಲೆನು. | ಹೌದು/ಅಲ್ಲ |
| 4 | ತರಗತಿ, ಶಾಲೆ ಪಟಗಳು ಬಿಡಿಸಬಲ್ಲೆನು. | ಹೌದು/ಅಲ್ಲ |
| 5 | ಗ್ರಾಮಪಟ ಬಿಡಿಸುವುದಕ್ಕೆ ಪ್ರಶ್ನೆಗಳು ಕೇಳಬಲ್ಲೆನು. | ಹೌದು/ಅಲ್ಲ |






SCERT TELANGANA

# 15. ನೀರು – ನಮ್ಮ ಅವಶ್ಯಕತೆಗಳು





**ತರಗತಿಯಲ್ಲಿ ಮಕ್ಕಳೆಲ್ಲರು ಸೇರಿ ಈ ಹಾಡು ಹಾಡುತ್ತಿದ್ದಾರೆ. ನೀವು ಹಾಡಿರಿ. ಹಾಡಿನ ಬಗ್ಗೆ ಮಾತನಾಡಿರಿ.**

ಚಿಟ ಪಟ ಹನಿಗಳ ಮಳೆ –ಸುಂದರವಾಗಿ ಬೀಳುವ ಮಳೆ
ನೆಲವೆಲ್ಲಾ ನೆನೆಸುವ ಮಳೆ –ಆನಂದಮಯವಾಗಿ ಸುರಿಯುವುದೇ?
ಕಪ್ಪು ಮೊಡಗಳಿಂದ ಆಕಾಶದಲ್ಲಿ ಕದಲುವ ಈ ಮಳೆ
ಗಾಳಿ ತರಂಗಗಳ ಸಹಾಯದಿಂದ ಬೀಳುವ ಈ ಮಳೆ
ಜಲಜಲ ಗಲಗಲವಾಗಿ ಒಡುತ್ತಾ ಶಬ್ದಮಾಡುವ ಈ ಮಳೆ
ಕೆರೆಗಳು, ಬಾವಿಗಳು, ತುಂಬಿಸುವ ಈ ಮಳೆ
ಎಲ್ಲರ ದಾಹ ತೀರಿಸಲು ಇಳಿದು ಬರುವ ಈ ಮಳೆ
ಜೀವರಾಶಿಗಳಿಗೆಲ್ಲಾ ಜೀವ ಈ ಮಳೆ
ಹಸಿರು ಬೆಳೆಗಳನ್ನು ನಗೆಸುತ್ತಾ ಓಡುವ ಈ ಮಳೆ
ಪರಿಸರವನ್ನು ಹಚ್ಚು ಹಸಿರಾಗಿ ತುಂಬುವ ಈ ಮಳೆ

ಮಳೆ ನೀರು ಯಾವ ಯಾವ ಕಡೆ ಸೇರುತ್ತದೆ?
ನೀರು ಯಾವ ಯಾವ ಕಡೆ ಸಿಗುತ್ತದೆ ?

SCERT TELANGANA






ಕೊಳಗಳು, ಹಳ್ಳಗಳು, ಕಾಲುವೆಗಳು, ಬಾವಿಗಳು, ಕೆರೆಗಳು, ನದಿಗಳಿಂದ ಮುಂತಾದ ಸಂಪನ್ಮೂಲದಿಂದ ನಮಗೆ ನೀರು ಸಿಗುತ್ತದೆ. ಸಾಧಾರಣವಾಗಿ ನಾವು ಬಾವಿಗಳು, ಕೊಳಾಯಿಗಳು, ಕೈಪಂಪು, ಕಾಲುವೆಗಳಿಂದ ನೀರನ್ನು ತಂದುಕೊಂಡು ಪಾತ್ರೆಯಲ್ಲಿ ಸಂಗ್ರಹಿಸಿ ನಿತ್ಯವಸರಗಳಿಗಾಗಿ ಬಳಸುತ್ತೇವೆ.



ಸಲೀಂ ಅವರ ಮನೆಯಲ್ಲಿ ನೀರು ಸಂಗ್ರಹಿಸಿ ಇಡುವುದಕ್ಕಾಗಿ ಪಾತ್ರೆಗಳು ಉಪಯೋಗಿಸುತ್ತಾರೆ. ಅವುಗಳನ್ನು ನೋಡಿರಿ.



ಚಿತ್ರದಲ್ಲಿ ತೋರಿಸಿದ ಪಾತ್ರೆಗಳಲ್ಲಿ ನೀರು ಪೂರ್ತಿಯಾಗಿ ತುಂಬಿಸಿದರೆ

| |
|---|
| ಯಾವುದರಲ್ಲಿ ನೀರು ಹೆಚ್ಚಾಗಿ ಹಿಡಿದಿದೆ ? |
| ನಿಮ್ಮ ಮನೆಯಲ್ಲಿ ಯಾವ ಯಾವ ಪಾತ್ರೆಯಲ್ಲಿ ನೀರು ಸಂಗ್ರಹಿಸಿಡುತ್ತೀರಿ ? |

ನಾವು ಮನೆಗಳಲ್ಲಿ ನೀರನ್ನು ಸಂಗ್ರಹಿಸಿ ಇಡುವುದಕ್ಕಾಗಿ ಬಿಂದಿಗೆಗಳು, ಪಾತ್ರೆಗಳು, ಬಕೆಟ್ಟುಗಳು, ಸಿಮೆಂಟ್ ತೊಟ್ಟಿಗಳು ಮೊದಲಾದವು ಉಪಯೊಗಿಸುತ್ತೇವೆ.

## ನಮಗೆ ನೀರು ಏಕೆ ಅವಶ್ಯಕ?



ನಾವು ಪ್ರತಿದಿನ ನಿದ್ರೆಯಿಂದ ಎದ್ದಾಗಿನಿಂದ ರಾತ್ರಿ ನಿದ್ರೆಹೋಗುವವರೆಗೆ ನೀರನ್ನು ಅನೇಕ ಅವಸರಗಳಿಗೆ ಉಪಯೋಗಿಸಿಕೊಳ್ಳುತ್ತೇವೆ. ಕೆಳಗಿನ ಚಿತ್ರಗಳನ್ನು ನೋಡಿರಿ. ಅವರು ಏನು ಮಾಡುತ್ತಿದ್ದಾರೆ ?







SCERT TELANGANA



ನೀರು ಇನ್ನು ಯಾವಯಾವ ಕೆಲಸಗಳಿಗೆ ಉಪಯೋಗಿಸುತ್ತೇವೆಯೋ ನಿಮ್ಮ ಸ್ನೆಹಿತರೊಂದಿಗೆ ಚರ್ಚಿಸಿ ಬರೆಯಿರಿ.
ಯಾವ ಯಾವ ಕೆಲಸಗಳಿಗೆ ನೀರು ಹೆಚ್ಚಾಗಿ ಬೇಕು ! ಯಾವ ಯಾವ ಕೆಲಸಗಳಿಗೆ ನೀರು ಕಡಿಮೆ ಬೇಕು?

### ಸಸ್ಯಗಳು ಉಳಿಯಲು ನೀರು ಅವಶ್ಯಕವೇ?

ನಮಗೆ ನೀರು ಅವಶ್ಯಕ ಎಂದು ತಿಳಿದುಕೊಂಡಿದ್ದೀರಲ್ಲವೇ ! ನಮ್ಮಂತಯೇ ಬೇರೆಯಾವುವಕ್ಕೆ ನೀರು ಅವಶ್ಯವೋ ಗೊತ್ತೇ? ನಮ್ಮಂತಯೇ ಗಿಡಗಳಿಗೆ ಸಹ ನೀರು ಅವಶ್ಯಕವೇ? ಅಲೋಚಿಸಿರಿ. ಇದಕ್ಕಾಗಿ ಕೆಳಗಿನ ವಿಧವಾಗಿ ಮಾಡಿರಿ.




### ಮಾಡಿ ನೋಡಿರಿ. ಏನು ನಡೆದಿದೆಯೋ ಹೇಳಿರಿ.

ಎರಡು ಸಸ್ಯಗಳನ್ನು ತೆಗೆದುಕೊಳ್ಳಿರಿ. ಒಂದಕ್ಕೆ ಪ್ರತಿದಿನ ನೀರು ಹಾಕಿರಿ. ಎರಡನೆಯದಕ್ಕೆ ನೀರು ಹಾಕಬೇಡಿರಿ. ಹೀಗೆ ಒಂದು ವಾರ ಮಾಡಿರಿ. ನಂತರ ಆ ಎರಡು ಗಿಡಗಳನ್ನು ಪರಿಶೀಲಿಸಿ. ಏನು ಗಮನಿಸುವಿರೋ ಪಟ್ಟಿಯಲ್ಲಿ ಬರೆಯಿರಿ.

| ವಾರ | ಏನು ನಡೆದಿದೆ ? | |
|---|---|---|
| | 1ನೇ ಗಿಡ | 2ನೇ ಗಿಡ |
| ಸೋಮವಾರ | | |
| ಮಂಗಳವಾರ | | |
| ಬುಧವಾರ | | |
| ಗುರುವಾರ | | |
| ಶುಕ್ರವಾರ | | |
| ಶನಿವಾರ | | |
| ಆದಿವಾರ | | |



1ನೇ ಗಿಡ



2ನೇ ಗಿಡ



ನೀರು ಇಲ್ಲದಿದ್ದರೆ ಗಿಡಗಳು ಬಾಡಿಹೋಗುತ್ತವೆ. ಅದಕ್ಕಾಗಿಯೇ ನಮ್ಮ ಮನೆಗಳಲ್ಲಿ, ಪಾಠಶಾಲೆಗಳಲ್ಲಿ ಇರುವ ಗಿಡಗಳಿಗೆ ಪ್ರತಿದಿನ ನೀರು ಹಾಕ ಬೇಕು. ಆಗ ಗಿಡಗಳು ಚೆನ್ನಾಗಿ ಬೆಳೆಯುತ್ತವೆ. ಅಂದವಾಗಿ ಕಾಣಿಸುತ್ತವೆ.

ಸಲೀಂ ಪಾಠಶಾಲೆ ಸ್ವಚ್ಚತಾ ಕಮಿಟಿಯಲ್ಲಿ ಸದಸ್ಯನಾಗಿ ಇದ್ದಾನೆ. ಸ್ನೇಹಿತರೊಂದಿಗೆ ಸೇರಿ ಪಾಠಶಾಲೆಯಲ್ಲಿ ಗುಲಾಬಿ, ದಾಸವಾಳ, ಗಣಿಗಲೆ ದಂತಹ ಗಿಡಗಳನ್ನು ತಂದು ನೆಟ್ಟರು. ಅವುಗಳಿಗೆ ಪ್ರತಿದಿನ ನೀರು ಹಾಕಿದರು. ಕೆಲವು ದಿನಗಳಲ್ಲಿ ಆ ಗಿಡಗಳೆಲ್ಲಾ ಹೂಗಳು ಬಿಟ್ಟವು. ಪ್ರಾರ್ಥನೆ ಸಮಯದಲ್ಲಿ ಉಪಾಧ್ಯಾಯರು ಸಲೀಂ ಮಾಡಿದ ಕೆಲಸವನ್ನು ಮೆಚ್ಚಿಕೊಂಡರು. ಶಾಲೆಯಲ್ಲಿ ಮಕ್ಕಳೆಲ್ಲರೂ ಸಸ್ಯಗಳಿಗೆ ನೀರು ಹಾಕಬೇಕು ಎಂಬ ಬಯಕೆ(ಹಂಬಲ) ಹುಟ್ಟಿತು,

ಆದರೆ ನೀವು ಸಹ ಹೀಗೆ ಗಿಡಗಳಿಗೆ ನೀರು ಹಾಕುತ್ತಿದ್ದೀರೇ? ನಿಮ್ಮ ಮನೆಯಲ್ಲಿ ಇಲ್ಲವೇ ಶಾಲೆಯಲ್ಲಿ ಮರಗಳಿಗೆ, ಗಿಡಗಳಿಗೆ ನೀರು ಹಾಕಿರಿ. ನೀವು ನೀರು ಹಾಕಿ ಬೆಳೆಸುತ್ತಿರುವ ಸಸ್ಯಗಳು ಹೂಬಿಡುತ್ತಿದ್ದರೆ ನಿಮಗೆ ಹೇಗೆ ಅನಿಸುತ್ತದೆಯೋ ! ಹೇಳಿರಿ

SCERT TELANGANA







## ಪ್ರಾಣಿಗಳಿಗೂ ನೀರು ಅವಶ್ಯಕ

ಒಂದು ದಿನ ಮಧು, ಕಿಷನ್ ಮನೆಗೆ ಬಂದನು. ಕಿಷನ್ ಅವರ ಮನೆಯಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ನೀರಿನ ಪಾತ್ರೆಗಳು ಕಾಣಿಸಿದವು. ಕಿಷನ್ ಆ ಪಾತ್ರೆಗಳಲ್ಲಿ ನೀರು ಹಾಕಿದ ಕೂಡಲೇ ಕೋಳಿಗಳು ಬಂದು ನೀರು ಕುಡಿಯಲು ಆರಂಭಿಸಿದವು. ಕೋಳಿ ನೀರು ಕುಡಿಯುವ ವಿಧಾನ ನೋಡಿದ ಮಧುಗೆ ಬಹಳ ಸಂತೋಷವಾಯಿತು. ಇದರಿಂದ ನಿಮಗೆ ಏನು ತಿಳಿಯಿತು ? ನಮಗೂ,ಸಸ್ಯಗಳಿಗೂ ನೀರು ಅವಶ್ಯಕ ವಿರುವಂತೆಯೇ ಪ್ರಾಣಿಗಳಿಗೂ ಸಹ ನೀರು ಅವಶ್ಯಕ. ಪ್ರಾಣಿಗಳಿಗೂ ಸಹ ನೀರು ಅವಶ್ಯಕವೆಂದು ಹೇಳುವುದಕ್ಕೆ ಕೆಲವು ಉದಾಹರಣೆಗಳು ಹೇಳಿರಿ. ನಿಮ್ಮ ಸ್ನೇಹಿತರೊಂದಿಗೆ ಸೇರಿ ಅಲೋಚಿಸಿರಿ.

ನೀವು ಯಾವ ಯಾವ ಪ್ರಾಣಿಗಳು ನೀರು ಕುಡಿಯುವುದನ್ನು ನೋಡಿದ್ದೀರಿ?
ಪ್ರಾಣಿಗಳಿಗೆ ನೀರು ಕುಡಿಯುವುದಕ್ಕೆ ಅಲ್ಲದೆ ಬೇರೆ ಯಾವುದಕ್ಕೆ ಅವಶ್ಯಕ?

### ನಿಮಗೆ ಗೊತ್ತೇ?




ಒಂಟೆ ಒಂದು ಬಾರಿ ನೀರನ್ನು ಕುಡಿದರೆ ಬಹಳ ದಿನಗಳ ವರೆಗೆ ನೀರು ಕುಡಿಯದಂತೆ ಇರಬಲ್ಲದು. ನೀರು ಸಿಕ್ಕಾಗ ಚೆನ್ನಾಗಿ ಕುಡಿದು ನೀರನ್ನು ತನ್ನ ಶರೀರದಲ್ಲಿ ಸಂಗ್ರಹಿಸಿ ಕೊಳ್ಳುತ್ತದೆ.

ಗಿಡಗಳು ಬದುಕುವುದಕ್ಕೆ ನೀರು ಹೇಗೆ ಅವಶ್ಯಕವೋ ಪ್ರಾಣಿಗಳು ಬದುಕುವುದಕ್ಕಾಗಿ ಸಹ ನೀರು ಅಷ್ಟೆ ಅವಶ್ಯಕ.



## ನಾವು ಎಂತಹ ನೀರನ್ನು ಕುಡಿಯಬೇಕು?

ಮಧು, ಕಿಷನ್ ಪಾಠಶಾಲೆಯಲ್ಲಿ ಆಡಿಕೊಳ್ಳುತ್ತಿದ್ದಾರೆ. ಮಧುಗೆ ಬಾಯಾರಿಕೆಯಾಗಿದೆ. ತಕ್ಷಣವೇ ಓಡುತ್ತಾ ಹೋಗಿ ಗ್ಲಾಸನ್ನು ಗಡಿಗೆಯಲ್ಲಿ ಮುಳುಗಿಸಲು ಹೋದನು. ಕಿಷನ್ ಮಧೂ ಕೈ ಹಿಡಿದುಕೊಂಡು ಹಾಗೆ ನೀರಿನಲ್ಲಿ ಕೈಯನ್ನು ಮುಳುಗಿಸ ಬೇಡ ಎಂದನು. ಕಿಷನ್ ಮಧುವಿಗೆ ಹೀಗೇಕೆ ಹೇಳಿರುತ್ತಾನೆ. ಕೈಯಲ್ಲಿ ಗ್ಲಾಸನ್ನು ಹಿಡಿದು ಕೊಂಡು ನೇರವಾಗಿ ಗಡಿಗೆಯಲ್ಲಿ ಮುಳುಗಿಸಿದರೆ ಏನಾಗುತ್ತದೆಯೋ? ಅಲೋಚಿಸಿರಿ.



## ಮಾಡಿ ನೋಡಿರಿ. ಏನು ನಡೆದಿದೆಯೋ ಹೇಳಿರಿ.

ಕಿಷನ್ ಎರಡು ದೊಡ್ಡ ಗಾಜಿನ ಗ್ಲಾಸುಗಳು ತಂದನು. ಎರಡನ್ನು ನೀರಿನಿಂದ ತುಂಬಿದನು. ಒಂದು ಗ್ಲಾಸಿನಲ್ಲಿ ನೀರನಲ್ಲಿ ಮಧು ಕೈಯನ್ನು ಮುಳಗಿಸು ಎಂದನು. ಮಧು ಹಾಗೆಯೇ ಮಾಡಿದನು. ಏನಾಗುತ್ತದೆ? ನೀವು ಸಹ ಹೀಗೆಯೇ ಮಾಡಿ ನೋಡಿರಿ. ಮೊದಲ ಗ್ಲಾಸಿನಲ್ಲಿ ನಿಮ್ಮ ಕೈಯನ್ನು ಮುಳುಗಿಸಿರಿ. ಗ್ಲಾಸಿನಲ್ಲಿನ ನೀರಿನ ಬಣ್ಣ ಹೇಗೆ ಬದಲಾಗಿದೆ ? ಎರಡನೇ ಗ್ಲಾಸಿನಲ್ಲಿನ ನೀರು ಹೇಗೆ ಇದೆ? ಯಾವ ಗ್ಲಾಸಿನಲ್ಲಿನ ನೀರು ಮಲಿನವಾಗಿ ಬದಲಾಗಿದೆ ? ಈ ಮಲಿನವು ಎಲ್ಲಿಂದ ಬಂದಿದೆ ? ಇದರಿಂದ ನೀವೇನು ತಿಳಿದುಕೊಂಡಿದ್ದೀರಿ ?









SCERT TELANGANA

ನಾವು ಆಡಿಕೊಳ್ಳುವಾಗ, ಕೆಲಸಗಳು ಮಾಡುವಾಗ ನಮ್ಮ ಕೈಗಳಿಗೆ ಧೂಳು, ಮಣ್ಣು ಮಲಿನಗಳು ಅಂಟಿಕೊಳ್ಳುತ್ತವೆ. ಕೈಗಳನ್ನು ತೊಳೆಯದಂತೆ, ಕುಡಿಯುವ ನೀರಿನಲ್ಲಿ ಕೈಗಳನ್ನು ಇಟ್ಟರೆ ಆ ಮಲಿನವೆಲ್ಲಾ ನೀರಿನಲ್ಲಿ ಸೇರುತ್ತವೆ. ಅಂತಹ ನೀರು ಕುಡಿದರೆ ರೋಗಗಳು ಬರುತ್ತವೆ. ಆದ್ದರಿಂದ ದೂಳು ಇರದಂತಹ ಪರಿಶುಭ್ರವಾದ ನೀರು ಕುಡಿಯಬೇಕು.



ಬಾವಿಗಳು, ಕಟ್ಟೆಗಳು, ಕೆರೆಗಳು, ಕಾಲುವೆಗಳು ಮೊದಲಾದವುಗಳಲ್ಲಿ ನೀರು ಇರುತ್ತವೆಂದು ಗೊತ್ತಿದೆಯಲ್ಲವೇ? ಕೆಳಗಿನ ಕೆರೆಯ ಚಿತ್ರ ನೋಡಿರಿ.





ಕೆರೆಯಲ್ಲಿ ಯಾರ್‍ಯಾರು ಏನೇನು ಮಾಡುತ್ತಿದ್ದಾರೆ ?

ಅವರು ಮಾಡುತ್ತಿರುವ ಕೆಲಸಗಳಿಂದ ಕೆರೆಯಲ್ಲಿನ ನೀರು ಏನಾಗುತ್ತಿದೆ ?

ಈ ಕೆರೆಯಲ್ಲಿನ ನೀರು ಕುಡಿದರೆ ಏನಾಗುತ್ತದೆ?

ಕೆರೆಗಳಲ್ಲಿ, ಭಾವಿಗಳಲ್ಲಿ ಕಸ, ಕಡ್ಡಿ,ಧೂಳುಗಳೊಂದಿಗೆ ಬಟ್ಟೆಗಳು ಒಗೆಯುವುದು, ಪಾತ್ರೆಗಳು ತೊಳೆಯುವುದರಿಂದ ಮಲಿನಗಳು ಸೇರುತ್ತವೆ. ಅವುಗಳೊಂದಿಗೆ ನಮಗೆ ಹಾನಿ ಮಾಡುವ ಕ್ರಿಮಿಗಳು ಸಹ ನೀರಿನಲ್ಲಿ ಸೇರುತ್ತವೆ. ಇಂತಹ ನೀರನ್ನು " ಅಪರಿಶುಭ್ರವಾದ ನೀರು" ಅಥವಾ "ಕಲುಷಿತವಾದ ನೀರು" ಎನ್ನುತ್ತಾರೆ. ಇಂತಹ ನೀರು ಕುಡಿದರೆ ವಾಂತಿ, ಬೇಧಿ, ಕಾಮಾಲೆ, ಕಾಲರದಂತಹ ರೋಗಗಳು ಬರುತ್ತವೆ.

SCERT TELANGANA







## ಒಳ್ಳೆಯ ಅಭ್ಯಾಸಗಳು

ನಮಗೆ ಬರುವ ವ್ಯಾಧಿಗಳಲ್ಲಿ ಹೆಚ್ಚಾಗಿ ಕಲುಷಿತವಾದ ನೀರನ್ನು ಕುಡಿಯುವುದರಿಂದಲೇ ಬರುತ್ತವೆ. ಇದಕ್ಕೋಸ್ಕರ ನಾವು ಕೆಲವು ಜಾಗ್ರತೆಗಳು ತೆಗೆದುಕೊಳ್ಳಬೇಕು. ನಮಗೆ ಒಳ್ಳೆಯ ಅಭ್ಯಾಸಗಳು ಇರಬೇಕು ! ಇವು ಯಾವೆಂದು ಅಲೋಚಿಸಿರಿ.

ಗಡಿಗೆಯಲ್ಲಿನ ನೀರನ್ನು ಸೌಟಿನಿಂದ ಗ್ಲಾಸಿನಲ್ಲಿ ಹಾಕಿಕೊಂಡು ಕುಡಿಯಬೇಕು.

ಗ್ಲಾಸಿನಿಂದ ನೀರು ಕುಡಿಯುವಾಗ ಬಾಯಲ್ಲಿ ಕಚ್ಚಿ ಕುಡಿಯಬಾರದು. ಗ್ಲಾಸು ಎತ್ತಿಕುಡಿಯಬೇಕು.

ಕೆರೆಗಳಲ್ಲಿನ, ಬಾವಿಗಳಲ್ಲಿನ ನೀರನ್ನು ಕುಡಿಯಬಾರದು.

ಬೋರು, ಕೊಳಾಯಿ ಮೂಲಕ ಬರುವ ಸುರಕ್ಷಿತವಾದ ನೀರು ಮಾತ್ರವೇ ಕುಡಿಯಬೇಕು. ಸೋಸಿದ ನೀರು ಮಾತ್ರವೇ ಕುಡಿಯಬೇಕು.

ಒಂದು ಬಾರಿ ಬಳಸಿದ, ತೆಳುವಾದ ಪ್ಲಾಸ್ಟಿಕ್ ಸೀಸೆಯಲ್ಲಿನ ನೀರು ಕುಡಿಯಬಾರದು.

ಪ್ಲಾಸ್ಟಿಕ್ ಸೀಸೆಯಲ್ಲಿನ ಪ್ಲಾಸ್ಟಿಕ್‌ನೀರಿನಲ್ಲಿ ಕರಗಿದ ವಿಷ ಪದಾರ್ಥಗಳು ಸೇರುತ್ತವೆ.

ದಪ್ಪವಾದ ಪ್ಲಾಸ್ಟಿಕ್ ಸೀಸೆಯಲ್ಲೇ ನೀರು ತಂದುಕೊಳ್ಳಬೇಕು.



## ಶುಭ್ರವಾದ ನೀರು ಎಲ್ಲರಿಗೂ ಲಭ್ಯವಾಗುತ್ತವೆಯೇ?

ರಜನಿ ಅವರ ಮನೆಯಲ್ಲಿ ಕೊಳಾಯಿ ಇದೆ. ಕೊಳಾಯಿಯಿಂದ ಬಂದ ನೀರನ್ನು ಅವರು ಮಾತ್ರವೇ ಬಳಸಿಕೊಳ್ಳುತ್ತಾರೆ. ವೆಂಕಣ್ಣ ಅವರ ಮನೆಯಲ್ಲಿ ಕೊಳಾಯಿ ಇಲ್ಲ. ಅವರು ಬೀಧಿಯಲ್ಲಿರುವ ಕೊಳಾಯಿಯಿಂದ ನೀರು ತಂದು ಕೊಳ್ಳುತ್ತಾರೆ. ಆ ಬೀಧಿ ಕೊಳಾಯಿಯ ಹತ್ತಿರ ಹೇಗೆ ಇದೆಯೋ ಕೆಳಗಿನ ಚಿತ್ರ ನೋಡಿರಿ.



ಇಂತಹ ಪರಿಸರಗಳಲಿನ ನೀರು ತಂದು ಕುಡಿದರೆ ಏನಾಗುತ್ತದೆ?

ಬೀಧಿ ಕೊಳಾಯಿ ಹತ್ತಿರ ಶುಭ್ರವಾಗಿ ಇರಬೇಕೆಂದರೆ ನಾವು ಏನು ಮಾಡಬೇಕು?

ಸಾಧಾರಣವಾಗಿ ನೀರನ್ನು ಬಿಂದಿಗೆಯಲ್ಲಿ, ಗಡಿಗೆಯಲ್ಲಿ ತುಂಬಿ ಇಟ್ಟಿಕೊಳ್ಳುತ್ತಾರೆ. ಸ್ವಲ್ಪ ಜನ ಮನೆಗಳಲ್ಲಿ, ಹೂಜಿಗಳಲ್ಲಿ ಸಹ ನೀರನ್ನು ತುಂಬಿ ಇಟ್ಟುಕೊಳ್ಳುತ್ತಾರೆ. ಹೂಜಿಯಲ್ಲಿ ನೀರು ನೀನು ಯಾವಾಗಾದರೂ ಕುಡಿದಿದ್ದೀಯೇ? ಹೇಗೆ ಇರುತ್ತವೆ ? ಹೂಜಿಯಲ್ಲಿ ನೀರು ತಂಪಾಗಿ ಇರುತ್ತವೆ. ರಜನೀ ಅವರ ಮಾವನ ಮನೆಯಲ್ಲಿ ವಾಟರ್ ಬಬುಲ್‌ಲನ್ನು ನೋಡಿದಳು. ಹಾಗೆಯೇ ವಿದ್ಯುತ್‌ನಿಂದ ನೀರನ್ನು ಶುದ್ಧೀ ಮಾಡುವ ಪರಿಕರವನ್ನು ನೋಡಿದಳು.

SCERT TELANGANA






ಇದು ಏಕೆಂದು ಕೇಳಿದಳು. ಇದು ನೀರನ್ನು ಶುದ್ಧಿ ಮಾಡುತ್ತದೆ 'ಎಂದು ರಜನಿಗೆ ಅವಳ ಮಾವ ಹೇಳಿದನು. ಆದರೆ ನಿಮ್ಮ ಊರಿನಲ್ಲಿ ಸಹ ಹೀಗೆ ನೀರಿನ ಕ್ಯಾನು ಇಲ್ಲವೇ ನೀರಿನ ಬಬುಲ್ಸ್‌ನಿಂದ ನೀರು ತರಿಸಿಕೊಳ್ಳುತ್ತಿದ್ದೀರಾ? ಏಕೆ ತರಿಸಿಕೊಳ್ಳುತ್ತಿದ್ದೀರಿ ? ಇನ್ನು ಯಾರ ಮನೆಗಳಲ್ಲಿ ನೀರನ್ನು ಶುದ್ಧಿ ಮಾಡುವ ಯಂತ್ರಗಳು ಇವೆಯೋ ತಿಳಿದುಕೊಂಡು ಹೇಳಿರಿ.

ನೀರಿನಲ್ಲಿ ಕ್ಲೋರಿನ್ ಮಾತ್ರೆಗಳು ಹಾಕುವುದು. ಇಲ್ಲವೇ ಬ್ಲೀಚಿಂಗ್ ಪೌಡರ ಹಾಕಿದರೆ ನೀರಿನಲ್ಲಿನ ಕ್ರಿಮಿಗಳು ಸಾಯುತ್ತವೆ.



## ನೀರಿನ ಕೊರತೆ



ರಜನಿ ಅವರ ಮನೆಯಲ್ಲಿ ಸೇದುವಬಾವಿ ಇದೆ. ರಜನಿ ಅವರ ಅಮ್ಮ ಬೇಸಿಗೆಯಲ್ಲಿ ಬಕೆಟನ್ನು ಬಾವಿಯಲ್ಲಿ ಬಿಟ್ಟಿದ್ದಾಳೆ, ಅದರೆ ಬಕೆಟ್‌ಗೆ ನೀರು ತಾಕಲಿಲ್ಲ. ಹಗ್ಗದ ಉದ್ದ ಸರಿಹೊಂದಲಿಲ್ಲ. ಹಗ್ಗ ತೆಗೆದುಕೊಂಡು ಬರಲು ರಜನಿಗೆ ಹೇಳಿದಳು. ಹಗ್ಗ ಇದೆಯಲ್ಲವೇ! ಮತ್ತೆ ಏಕೆ? ಎಂದು ಕೇಳಿದಳು ರಜನಿ. ಬೇಸಿಗೆಕಾಲ ಅಲ್ಲವೇ! ಬಾವಿಯಲ್ಲಿ ನೀರು ಕೆಳಗೆ (ಆಳವಾಗಿ) ಹೋಗಿದೆ. ಬಕೆಟ್‌ಗೆ ತಾಕುವುದಿಲ್ಲ ಎಂದು ರಜನಿ ಅವರ ಅಮ್ಮ ಹೇಳಿದಳು.

ಹೀಗೆ ಬಾವಿಯಲ್ಲಿಯ ನೀರು ಕೆಳಗೆ ಏಕೆ ಹೋಗಿರುತ್ತವೆ?

ಯಾವ ಕಾಲದಲ್ಲಿ ಬಾವಿಯಲ್ಲಿ ನೀರು ಕಡಿಮೆಯಾಗುತ್ತವೆ. ಏಕೆ?

ಬೇಸಿಗೆ ಕಾಲದಲ್ಲಿ ಬಾವಿಗಳು, ಕೆರೆಗಳು ಒಣಗಿಹೋಗುತ್ತವೆ. ಕೊಳವೆ ಬಾವಿಗಳಲ್ಲಿಯೂ ಸಹ ನೀರು ಪಾತಾಳಕ್ಕೆ ಇಳಿದುಹೋಗುತ್ತವೆ. ಊರುಗಳಲ್ಲಿ ಜನರಿಗೆ ಅವಶ್ಯಕವಾದಷ್ಟು ನೀರು ಸಿಗುವುದಿಲ್ಲ. ಇಂತಹ ಪರಿಸ್ಥಿತಿಯನ್ನೇ 'ನೀರಿನ ಕೊರತೆ' ಎನ್ನುತ್ತಾರೆ. ಅಂತಹ ಗ್ರಾಮಗಳಲ್ಲಿ ಸರಕಾರವೇ ಟ್ಯಾಂಕರ್‌ಗಳ ಮೂಲಕ ನೀರನ್ನು ಪೂರೈಕೆ ಮಾಡುತ್ತದೆ. ಹೀಗೆ ನಿಮ್ಮ ಗ್ರಾಮದಲ್ಲಿ ಎಂದಾದರೂ ನಡೆದಿದೆಯಾ? ಟ್ಯಾಂಕರ್‌ನಲ್ಲಿ ನೀರನ್ನು ಎಂದಾದರು ತಂದಿದ್ದಾರಾ ? ಏಕೆ ತಂದಿರುತ್ತಾರೆ ? ಇನ್ನು ಯಾವ ಯಾವ ಸಂಧರ್ಭಗಳಲ್ಲಿ ಟ್ಯಾಂಕರುಗಳಲ್ಲಿ ನೀರನ್ನು ತರುತ್ತಾರೆ ?

SCERT TELANGANA







> ಬೇಸಿಗೆಯಲ್ಲಿ ನೀರು ಸಿಗದಿದ್ದರೆ ಯಾವ ಯಾವ ತೊಂದರೆಗಳು ಏರ್ಪಡುತ್ತವೆ?
> ಬೇಸಿಗೆಯಲ್ಲಿ ನೀರಿನ ಕೊರತೆ ತೀರ ಬೇಕಾದರೆ ಏನು ಮಾಡಬೇಕು?



## ನೀರನ್ನು ಉಳಿತಾಯ ಮಾಡುವುದು

ರಹೀಂ ಬೇಸಿಗೆ ರಜೆಯಲ್ಲಿ ಹೈದರಾಬಾದ್‌ಗೆ ಬಂದನು. ಅವರ ಚಿಕ್ಕಪ್ಪನ ಮನೆಯ ಅವರಣದಲ್ಲಿ ಇದ್ದ ದೊಡ್ಡ ಕುಣಿಯನ್ನು ನೋಡಿದನು. “ ಇದು ಏತಕ್ಕೆ? “ ಎಂದು ಕೇಳಿದನು ರಹೀಂ. ಇದು ಇಂಗುವ ಕುಣಿ. ಮಳೆಗಾಲದಲ್ಲಿ ಮಳೆನೀರನ್ನು, ಈ ಕುಣಿಗಳಿಗೆ ತಿರುಗಿಸಿದರೆ ಭೂಮಿಯಲ್ಲಿ ನೀರಿನ ಶೇಖರಣೆ ಹೆಚ್ಚುತ್ತದೆ. ನೀರು ಶೇಕರಣೆ ಬೆಳೆಸಿಕೊಳ್ಳುವುದು ಎಷ್ಟು ಮುಖ್ಯವೋ, ನೀರನ್ನು ಮಿತವಾಗಿ ಬಳಸುವುದು ಸಹ ಅಷ್ಟೇ ಮುಖ್ಯ ಎಂದು ರಹೀಮನ ಚಿಕ್ಕಪ್ಪ ಹೇಳಿದನು.

ನೀರನ್ನು ಮಿತವಾಗಿ ಬಳಸಬೇಕು. ಸಂರಕ್ಷಿಸಿಕೊಳ್ಳಬೇಕೆಂದು ತಿಳಿದುಕೊಂಡಿರುವಿರಲ್ಲವೇ ! ಹಾಗಾದರೆ ಕೆಳಗಿನ ಚಿತ್ರಗಳು ನೋಡಿರಿ. ಇವುಗಳನ್ನು ನೋಡಿ ನೀವು ಏನು ಗ್ರಹಿಸಿದಿರಿ.





> ಮೊದಲ ಚಿತ್ರದಲ್ಲಿ ನೀರು ಏನಾಗುತ್ತಿದೆ? ಹೀಗೆ ಏಕೆ ನಡೆಯುತ್ತಿದೆ?
> ಎರಡನೇ ಚಿತ್ರದಲ್ಲಿ ಏನು ನಡೆಯುತ್ತದೆ ? ಇನ್ನೂ ಹೀಗೆ ಯಾವ ಸಂದರ್ಭಗಳಲ್ಲಿ ನೀರು ವ್ಯರ್ಥವಾಗುತ್ತದೆ?
> ಮೂರನೇ ಚಿತ್ರ ನೋಡಿರಿ. ನೀರು ಹೇಗೆ ವ್ಯರ್ಥ ಆಗುತ್ತಿದೆ? ಇದರಿಂದ ಯಾರಿಗೆ ನಷ್ಟವಾಗುತ್ತದೆ?
> ಇಂತಹ ಸಂಧರ್ಭಗಳಲ್ಲಿ ನೀರು ವ್ಯರ್ಥವಾಗದಂತೆ ಇರುವುದಕ್ಕೆ ಏನು ಮಾಡಬೇಕು.



 ತೆಲಂಗಾಣ ಸರಕಾರದ ಉಚಿತ ವಿತರಣೆ 2020-21

SCERT TELANGANA

ನೀರು ನಮಗೆ ಬಹಳ ಮುಖ್ಯವಾದುದು. ಜೀವಿಸಲು ನೀರು ಅತ್ಯವಶ್ಯಕ. ಇಂತಹ ನೀರನ್ನು ವ್ಯರ್ಥ ಮಾಡಬಾರದು. ಮಿತವಾಗಿ ಬಳಸಬೇಕು. ಪರಿಶುಭ್ರವಾದ ನೀರನ್ನು ಕುಡಿಯಬೇಕು. ನೀರನ್ನು ಬಳಸುವ ಮುನ್ನ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

**ನೀರಿನ ಅಪವ್ಯಯವನ್ನು ತಡೆಯೋಣ –ನೀರನ್ನು ಮಿತವಾಗಿ ಬಳಸೋಣ–ಇದು ನಮ್ಮ ಕರ್ತವ್ಯ**

## ಮುಖ್ಯ ಪದಗಳು

1. ನೀರಿನ ಸಂಗ್ರಹಣೆ
2. ನೀರಿನ ಉಪಯೋಗಗಳು
3. ಪರಿಶುಭ್ರವಾದ ನೀರು
4. ಕಲುಷಿತವಾದ ನೀರು
5. ನೀರನ್ನು ವ್ಯರ್ಥಮಾಡುವುದು
6. ಇಂಗುವ ಕುಣಿ

## ನಾವು ಕಲಿತುಕೊಂಡಿರುವವು

- ಹಳ್ಳಗಳು, ಕಾಲುವೆಗಳು, ಬಾವಿಗಳು, ಕೆರೆಗಳು, ನದಿ ಮುಂತಾದ ನೀರಿನ ಸಂಪನ್ಮೂಲಗಳಿಂದ ನೀರು ಲಭಿಸುತ್ತದೆ.
- ಕುಡಿಯುವುದು, ಬಟ್ಟೆ ಒಗೆಯುವುದು, ಪಾತ್ರೆಗಳು ತೊಳೆಯುವುದು, ಸ್ನಾನ ಮಾಡುವುದು ಮುಂತಾದವುಗಳಿಗೆ ನೀರನ್ನು ಉಪಯೋಗಿಸುತ್ತಾರೆ.
- ಪ್ರಾಣಿಗಳು, ಸಸ್ಯಗಳು ಬದುಕಲು ನೀರು ಅವಶ್ಯಕ.
- ಸಾಧಾರಣವಾಗಿ ನೀರನ್ನು ಗಡಿಗೆ, ಬಕೆಟ್, ಬಿಂದಿಗೆ,ತೊಟ್ಟಿ,ಟ್ಯಾಂಕುಗಳಲ್ಲಿ ಸಂಗ್ರಹಿಸಿಡುತ್ತಾರೆ.
- ಕಲುಷಿತವಾದ ನೀರನ್ನು ಕುಡಿಯುವುದರಿಂದ ಅನೇಕ ರೋಗ (ವ್ಯಾಧಿ)ಗಳು ಬರುತ್ತವೆ.
- ನೀರನ್ನು ಮಿತವಾಗಿ ಬಳಸಬೇಕು. ಶುಭ್ರವಾದ ನೀರನ್ನು ಮಾತ್ರ ಕುಡಿಯಬೇಕು.
- ಪೈಪುಗಳಿಂದ , ಟ್ಯಾಂಕುಗಳಿಂದ, ಕೊಳಾಯಿಗಳಿಂದ ನೀರು ವ್ಯರ್ಥ ಆಗದಂತೆ ನೋಡಬೇಕು.

## ಇವು ಮಾಡಿರಿ



### ವಿಷಯಾವಗಾಹನೆ

1. ನೀರು ಇಲ್ಲದಿದ್ದರೆ ಏನಾಗುತ್ತದೆ?
2. ನೀರಿನ ಸಂಪನ್ಮೂಲಗಳಿಗೆ ಕೆಲವು ಉದಾಹರಣೆಗಳು ಹೇಳಿರಿ. ನಿಮ್ಮ ಪ್ರಾಂತ್ಯದಲ್ಲಿ ಇರುವ ನೀರಿನ ಸಂಪನ್ಮೂಲಗಳಾವವು?
3. ನಿಮ್ಮ ಮನೆಯಲ್ಲಿ ನೀರನ್ನು ಯಾವುದರಲ್ಲಿ ಸಂಗ್ರಹಿಸಿಡುತ್ತಿರಿ?
4. ನಿಮ್ಮ ಮನೆಯಲ್ಲಿ ಯಾವ ಯಾವ ಸಂದರ್ಭಗಳಲ್ಲಿ ನೀರು ವ್ಯರ್ಥವಾಗುತ್ತದೆ? ಇದನ್ನು ತಡೆಯಲು ನಿವೇನು ಮಾಡುವಿರಿ?
5. ನಿಮ್ಮ ಪರಿಸರದಲ್ಲಿ ನೀರು ಎಲ್ಲೆಲ್ಲಿ ವ್ಯರ್ಥ ಆಗುತ್ತಿದೆಯೋ ಉದಾಹರಣೆಗಳು ಕೊಡಿರಿ
6. ಕೆರೆನೀರು, ಕೊಳಾಯಿ ನೀರುಗಳಲ್ಲಿ ಯಾವುದು ಕುಡಿಯುವದಕ್ಕೆ ಯೋಗ್ಯ?ಏಕೆ?
7. ನೀರನ್ನು ನಾವು ಮಿತವಾಗಿ ಬಳಸಬೇಕಲ್ಲವೇ ! ಇದ್ದಕಾಗಿ ನೀವು ಮಾಡುವ ಕನಿಷ್ಠ 5 ಕ್ರಮಗಳನ್ನು ಬರೆಯಿರಿ.

SCERT TELANGANA





8. ನಾವೆಲ್ಲರೂ ಪರಿಶುಭ್ರವಾದ ನೀರು ಕುಡಿಯಬೇಕು? ಏಕೆಂದರೆ . . . . . . . . . . . . . . . . . . .

9. ಕೆಲವು ಪ್ರಾಂತ್ಯಗಳಲ್ಲಿ ಕುಡಿಯುವುದಕ್ಕೆ , ಇತರ ಅವಶ್ಯಕತೆಗಳಿಗೆ ಸಹ ನೀರಿನ ಟ್ಯಾಂಕರ್‌ಗಳಿಂದ ನೀರನ್ನು ಸರಬರಾಜು ಮಾಡುತ್ತಾರೆ. ಆ ಪ್ರಾಂತ್ಯದ ಜನರು ನೀರನ್ನು ಹೇಗೆ ಬಳಸಿಕೊಳ್ಳಬೇಕು ವ್ಯರ್ಥವಾಗದಂತೆ ಏನೇನು ಮಾಡಬೇಕು.



## ಚಿತ್ರಗಳನ್ನು ಬರೆಯಿರಿ. ಬಣ್ಣವನ್ನು ತುಂಬಿರಿ.

1 ನಿಮ್ಮ ಮನೆಯಲ್ಲಿ ನೀರನ್ನು ಯಾವುದರಲ್ಲಿ, ಸಂಗ್ರಹಿಸುತ್ತೀರಿ. ಅವುಗಳ ಚಿತ್ರವನ್ನು ಬರೆಯಿರಿ.




## ಸಮಾಚಾರ ಕೌಶಲ್ಯ –ಪ್ರಾಜೆಕ್ಟು ಕೆಲಸ

ಪ್ರತಿದಿನ ನೀರು ಕುಡಿಯುತ್ತೇವೆ ಅಲ್ಲವೇ! ಎಷ್ಟು ಬಾರಿ ಕುಡಿಯುತ್ತೇವೆ ಗೊತ್ತೇ? ತಿಳಿದುಕೊಳ್ಳಬೇಕೆಂದು ಇದೆಯೇ? ಆದರೆ ಹೀಗೆ ಮಾಡಿರಿ? ನೀವು ಬೆಳಿಗ್ಗೆಯಿಂದ ರಾತ್ರಿಮಲಗುವ ವರೆಗೆ ಎಷ್ಟು ಲೋಟ ನೀರು ಕುಡಿಯುವಿರೋ ಲೆಕ್ಕಿಸಿರಿ. ಅ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ನೀರು ಕುಡಿದ ಸಮಯ | ಎಷ್ಟು ಗ್ಲಾಸುಗಳು ನೀರು ಕುಡಿದಿದ್ದೀರಿ? |
|---|---|
| | |
| | |
| | |
| | |
| | |
| | |
| | |

SCERT TELANGANA



- ಒಟ್ಟು ಎಷ್ಟು ಗ್ಲಾಸು ನೀರನ್ನು ಕುಡಿದಿರುವೆ?
- ಯಾವ ಸಮಯದಲ್ಲಿ ಹೆಚ್ಚು ಸಲ ನೀರು ಕುಡಿದಿರುವೆ?
- ನಿನ್ನ ಹಾಗೆ ನಿಮ್ಮ ಸ್ನೇಹಿತರು ಸಹ ಬರೆದಿದ್ದಾರಲ್ಲವೇ! ಅವರೂ ಸಹ ಎಷ್ಟು ಗ್ಲಾಸುಗಳು ಕುಡಿದರೋ ತಿಳಿದುಕೊಳ್ಳಿರಿ ?
- ನಿನಗಿಂತ ಹೆಚ್ಚು ನೀರು ಕುಡಿದವರು ಯಾರು ?
- ನಿನಗಿಂತ ಕಡಿಮೆ ನೀರು ಕುಡಿದವರು ಯಾರು? ಎಲ್ಲರಿಗಿಂತ ಹೆಚ್ಚು ನೀರು ಯಾರು ಕುಡಿದಿದ್ದಾರೆ?
- ಎಲ್ಲರಿಗಿಂತ ಕಡಿಮೆ ನೀರು ಕುಡಿದವರು ಯಾರು?



## ಪ್ರಶಂಸೆ

1 ಲತ ಒಂದು ದಿನ ಆಡಿಕೊಳ್ಳಲು ತನ್ನ ಸ್ನೇಹಿತಳ ಮನೆಗೆ ಹೋಗುತ್ತಿದ್ದಾಳೆ. ದಾರಿಯಲ್ಲಿ ಸ್ವಲ್ಪ ಮಕ್ಕಳು ಕೈಪಂಪು ಹೊಡೆಯುತ್ತಾ ನೀರನ್ನು ಬಿಡುತ್ತಿದ್ದಾರೆ. ಅದು ನೋಡಿ ನೀರನ್ನು ವ್ಯರ್ಥ ಮಾಡಬೇಡಿರಿ ಎಂದು ಆ ಮಕ್ಕಳಿಗೆ ವಿವರಿಸಿದಳು. ಲತ ಏನು ಹೇಳಿರಬಹುದು? ನೀವಾದರೆ ಏನು ಮಾಡುತ್ತೀರಿ ? ಲತ ಮಾಡಿದ ಕೆಲಸ ಒಳ್ಳೆಯದೇ ? ಅಲ್ಲವೇ ? ಏಕೆ?



## ಪ್ರಶ್ನಿಸುವುದು

1 ಸೋಮು ನೀರಿನ ಉಳಿತಾಯದ ಬಗ್ಗೆ, ನೀರು ಪರಿಶುಭ್ರತೆ ಆಗುವುದರ ಬಗ್ಗೆ ತಿಳಿದುಕೊಳ್ಳ ಬೇಕೆಂದು ಕೊಂಡನು. ಇದಕ್ಕಾಗಿ ಅವರ ಟೀಚರ್ ಹತ್ತಿರ ಹೋದನು. ಸೋಮು ಅವರ ಟೀಚರ್‌ನ್ನು ಏನೇನು ಕೇಳಿರುತ್ತಾನೆ? ಟೀಚರ್ ಏನು ಹೇಳಿರುತ್ತಾರೆ?

2 ಜಂಗು ಒಂದು ಸಲ ಹೈದರಾಬಾದ್‌ಗೆ ಬಂದನು. ಅಲ್ಲಿ ಟ್ಯಾಂಕರ್‌ಗಳಲ್ಲಿ ನೀರು ತರುವುದನ್ನು ನೋಡಿದನು. ಜಂಗುಗೆ ಬಹಳ ಆಶ್ಚರ್ಯ ಎನಿಸಿತು ? ಟ್ಯಾಂಕರುಗಳಲ್ಲಿ ನೀರು ತರುವುದು ಏತಕ್ಕಾಗಿ ? ಅಲ್ಲಿಯೇ ಇದ್ದ ಹುಸೇನ್ ತಾತನನ್ನು ಕೇಳಿದನು. ಜಂಗು ಏನು ಕೇಳಿರುತ್ತಾರೆ? ನೀನಾದರೆ ಏನೇನು ಕೇಳುವೆ?



## ನಾನಿವು ಮಾಡಬಲ್ಲೆನೇ!



| | | |
|---|---|---|
| 1 | ಯಾವ ಯಾವ ಸಂಪನ್ಮೂಲಗಳಿಂದ ನಮಗೆ ನೀರು ಲಭಿಸುತ್ತದೆಯೋ ಹೇಳಬಲ್ಲೆನು. | ಹೌದು/ಅಲ್ಲ |
| 2 | ನೀರು ಹೇಗೆ ಅಪರಿಶುಭ್ರ ಅಗುತ್ತದೆಯೋ ಹೇಳಬಲ್ಲೆನು. | ಹೌದು/ಅಲ್ಲ |
| 3 | ನೀರನ್ನು ಮಿತವಾಗಿ ಹೇಗೆ, ಏಕೆ ಬಳಸಿಕೊಳ್ಳಬೇಕು ಹೇಳಬಲ್ಲೆನು. | ಹೌದು/ಅಲ್ಲ |
| 4 | ನಮ್ಮ ಪ್ರಾಂತದಲ್ಲಿ ನೀರಿನ ಸಂಪನ್ಮೂಲಗಳನ್ನು ಗುರ್ತಿಸುತ್ತೇನೆ. | ಹೌದು/ಅಲ್ಲ |
| 5 | ನೀರು ಅಪವ್ಯಯ, ಉಳಿತಾಯದ ಬಗ್ಗೆ ಪ್ರಶ್ನಿಸಬಲ್ಲೆನು. | ಹೌದು/ಅಲ್ಲ |

SCERT TELANGANA





ಯೂನಿಟ್ 4

# 16 . ಊರಿಗೆ ಹೋಗೋಣ

4




ಅಬ್ದುಲ್ಲಾ ಅವರ ಸಂಬಂಧಿಕರ ಮನೆಯಲ್ಲಿ ಮದುವೆಗೆ ತಂದೆ ತಾಯಿಯರೊಂದಿಗೆ ಸೇರಿ ಮುಂಬೈಗೆ ಹೊರಟನು. ಅವರೆಲ್ಲರೂ ಸೇರಿ ಮನೆಯಿಂದ ರೈಲ್ವೆ ಸ್ಟೇಷನ್‌ಗೆ  ನಲ್ಲಿ ಹೋದರು. ಪ್ಲಾಟ್‌ಫಾರಂ ಮೇಲೆ ಮುಂಬೈಯಿಗೆ ಹೋಗುವ  ಬಂದು ನಿಂತಿದೆ. ಅಬ್ದುಲ್ಲಾ, ಅವರ ತಂದೆ ತಾಯಿ ಮಂಬೈಯಿಗೆ ಹೋಗುವ  ನಲ್ಲಿ ಹತ್ತಿದರು. ರೈಲಿನಲ್ಲಿ ರಾತ್ರಿ ಎಲ್ಲಾ ಪ್ರಯಾಣ ಮಾಡಿ ಮುಂಜಾನೆ ಮುಂಬೈಯಿಗೆ ತಲುಪಿದರು. ರೈಲ್ವೆ ಸ್ಟೇಷನ್‌ಗೆ ಹತ್ತಿರದಲ್ಲಿರುವ ಸಂಬಂಧಿಕರ ಮನೆಗೆ  ಯಲ್ಲಿ ಹೋದರು. ಮುಂಜಾನೆ ಅಮೇರಿಕಾದಿಂದ ಮದುವೆಗೆ ಬರುತ್ತಿರುವ, ಅವರ ಮಾವನನ್ನು ಕಾಣಲು  ನಲ್ಲಿ ವಿಮಾನ ನಿಲ್ದಾಣಕ್ಕೆ ಹೋದರು. ಅಲ್ಲಿ  ವನ್ನು ನೋಡಿದರು.  ದಿಂದ ಇಳಿದ ಮಾವನನ್ನು ಕರೆದುಕೊಂಡು ಎಲ್ಲರೂ  ನಲ್ಲಿ ಮನೆಗೆ ತಲುಪಿದರು. ಸಾಯಂಕಾಲ  ನಲ್ಲಿ ಸಮುದ್ರ ಮಧ್ಯದಲ್ಲಿರುವ ಎಲಿಫೆಂಟಾ ಗುಹೆಗಳಿಗೆ ಹೋದರು. ಮರುದಿನ ಮದುವೆ ಚೆನ್ನಾಗಿ ನಡೆಯಿತು. ಮದುವೆ ಸಾಮಾನುಗಳನ್ನು  ನಲ್ಲಿ ಹಾಕಿಕೊಂಡು ಎಲ್ಲರೂ ತಿರುಗು ಪ್ರಯಾಣ ಮಾಡಿದರು.

ಪ್ರಯಾಣ ಎಂದರೇನು?
ಅಬ್ದುಲ್ಲಾ ಯಾವ ಯಾವ ವಾಹನಗಳಲ್ಲಿ ಪ್ರಯಾಣಿಸಿದನು?
ಯಾವ ಯಾವ ವಾಹನಗಳನ್ನು ನೋಡಿದನು?
ಮೇಲಿನ ವಾಹನಗಳಲ್ಲಿ ನೀವು ಯಾವುದನ್ನು ನೋಡಿದ್ದೀರಿ?
ಯಾವುದರಲ್ಲಿ ಪ್ರಯಾಣ ಮಾಡಿರುವಿರಿ?

SCERT TELANGANA









ಅಬ್ದುಲ್ಲಾ ಯಾವ ಯಾವ ವಾಹನಗಳು ನೋಡಿರುವನೋ, ಯಾವುದರಲ್ಲಿ ಪ್ರಯಾಣಿಸಿದನೋ ತಿಳಿದುಕೊಂಡಿದ್ದೀರಲ್ಲವೆ ! ವಾಹನಗಳೆನ್ನುವವು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತ್ಯಕ್ಕೆ ಹೋಗುವುದಕ್ಕಾಗಿ ಉಪಯೋಗವಾಗುತ್ತವೆ. ಇವುಗಳಲ್ಲಿ ಪ್ರಯಾಣಿಸಿ ನಾವು ಹೋಗಬೇಕೆಂದುಕೊಂಡ ಪ್ರಾಂತ್ಯಗಳಿಗೆ ಸೇರಬಹುದು

ಇಲ್ಲಿಯವರೆಗೆ ವಿವಿಧ ವಾಹನಗಳ ಬಗ್ಗೆ ತಿಳಿದುಕೊಂಡಿದ್ದೀರಲ್ಲವೇ !ಇವುಗಳಲ್ಲಿ ಕೆಲವು ನೀರಿನಲ್ಲಿ ಪ್ರಯಾಣಿಸುತ್ತವೆ,ಮತ್ತೆ ಕೆಲವು ಗಾಳಿಯಲ್ಲಿ ಪ್ರಯಾಣಿಸುತ್ತವೆ, ಇನ್ನೂ ಕೆಲವು ನೆಲದ ಮೇಲೆ ಪ್ರಯಾಣಿಸುತ್ತವೆ. ಕೆಳಗಿನ ಚಿತ್ರವನ್ನು ನೋಡಿರಿ ಯಾವವು ಎಲ್ಲೆಲ್ಲಿ ಪ್ರಯಾಣಿಸುತ್ತವೆಯೋ ಹೇಳಿರಿ.





ನೆಲದ ಮೇಲೆ, ನೀರಿನ ಮೇಲೆ, ಗಾಳಿಯಲ್ಲಿ ಪ್ರಯಾಣಿಸುವ ವಾಹನಗಳು ನಿಮಗೆ ಗೊತ್ತೇ ? ಅವುಗಳ ಹೆಸರನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ರಸ್ತೆಯ ಮೇಲೆ ಪ್ರಯಾಣಿಸುವವು | ನೀರಿನಲ್ಲಿ ಪ್ರಯಾಣಿಸುವವು | ಗಾಳಿಯಲ್ಲಿ ಪ್ರಯಾಣಿಸುವವು |
|---|---|---|
| | | |


ನಿಮ್ಮ ಗ್ರಾಮದಲ್ಲಿ ಯಾವ ವಿಧವಾದ ವಾಹನಗಳು ಇವೆ? ಯಾವುವು ಇವೆ?








ಕೆಳಗಿನ ಚಿತ್ರಗಳು ನೋಡಿರಿ, ಇವುಗಳಲ್ಲಿ ನಿಮ್ಮ ಊರಿನಲ್ಲಿ ಉಪಯೋಗಿಸುವವುಗಳಿಗೆ ಬಣ್ಣ ಹಾಕಿರಿ.



SCERT TELANGANA

ನಿಮ್ಮ ಗ್ರಾಮದಲ್ಲಿ ಯಾವುದನ್ನು ಪ್ರಯಾಣಕ್ಕೆ ಉಪಯೋಗಿಸುತ್ತಿರುವರೋ ಗುರ್ತಿಸಿರಿದ್ದೀರಲ್ಲವೇ ! ಇವು ಅಲ್ಲದೇ ಇನ್ನೂ ಯಾವ ಯಾವ ವಾಹನಗಳನ್ನು ನಿಮ್ಮ ಗ್ರಾಮದಲ್ಲಿ ಪ್ರಯಾಣಿಸುವುದಕ್ಕಾಗಿ ಉಪಯೋಗಿಸುತ್ತಾರೆ ?





ನೀವು ಇರುವ ಜಾಗದಿಂದ ಹತ್ತಿರ ಪ್ರಾಂತ್ಯಗಳಿಗೆ ಹೋಗುವುದಕ್ಕಾಗಿ ಯಾವುದನ್ನು ಉಪಯೋಗಿಸುತ್ತೀರಿ? ದೂರದಲ್ಲಿ ಇರುವ ಗ್ರಾಮಗಳಿಗೆ ಯಾವುದರಲ್ಲಿ ಹೋಗುತ್ತೀರಿ. ಬಹಳ ದೂರದಲ್ಲಿ ಇರುವ ಪ್ರಾಂತ್ಯಗಳಿಗೆ ಯಾವುದರಲ್ಲಿ ಹೋಗುವಿರೋ ಹೇಳಿರಿ. ಅವುಗಳನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಹತ್ತಿರ ಪ್ರಾಂತ್ಯಗಳಿಗೆ ಹೋಗುವುದಕ್ಕಾಗಿ | ದೂರ ಪ್ರಾಂತ್ಯಗಳಿಗೆ ಹೋಗುವುದಕ್ಕಾಗಿ | ಬಹಳ ದೂರ ಪ್ರಾಂತ್ಯಗಳಿಗೆ ಹೋಗುವುದಕ್ಕಾಗಿ |
|---|---|---|
| | | |

ಪ್ರಯಾಣಿಸುವ ದೂರ ಸಂದರ್ಭಕ್ಕೆ ಅನುಗುಣವಾಗಿ ವಿವಿಧ ಬಗೆಯ ವಾಹನಗಳನ್ನು ಉಪ 'ಯೋಗಿಸುತ್ತಾರೆ. ಹತ್ತಿರದಲ್ಲಿ ಇರುವ ಪ್ರದೇಶಕ್ಕೆ ನಡೆದು ಹೋಗುತ್ತಾರೆ. ಸೈಕಿಲ್, ಆಟೋ, ರಿಕ್ಷಾ, ಹಡಗು, ಕುದುರೆ ಬಂಡಿಗಳಂತಹ ವಾಹನಗಳ ಮೇಲೆ ಸಹ ಹೋಗುತ್ತಾರೆ. ದೂರವಿರುವ ಪ್ರಾಂತ್ಯಗಳಿಗೆ ಬಸ್ಸು, ರೈಲು, ಕಾರು, ಮೋಟಾರ್ ಸೈಕಿಲ್, ಜೀಪುಗಳಂತವುಗಳಲ್ಲಿ ಹೋಗುತ್ತಾರೆ. ಬಹಳ ದೂರ ಪ್ರಾಂತ್ಯಗಳಿಗೂ ವಿದೇಶಗಳಿಗೂ ವಿಮಾನಗಳಲ್ಲಿ, ಹಡಗುಗಳಲ್ಲಿ ಪ್ರಯಾಣಿಸುತ್ತಾರೆ.



ಸೂರಾರಂ ಎಂಬ ಊರು ಕಾಡಿನ ಹತ್ತಿರದಲ್ಲಿದೆ. ಆ ಊರಿನವರು ಆಗಾಗ ಕಾಡಿಗೆ ಹೋಗುತ್ತಿರುತ್ತಾರೆ. ಅಂಟು (ಗಮ್ಮು) ಜೇನು, ಅಂಟಾಳೆಕಾಯಿ ಮೊದಲಾದವುಗಳಿಗಾಗಿ ಕಾಡಿಗೆ ಹೋಗುತ್ತಾರೆ.ಆದರೆ ಕಾಡಿಗೆ ಹೋಗಲು ರಸ್ತೆ ಇಲ್ಲ.

ಇವರು ಕಾಡಿನಲ್ಲಿ ಹೋಗಲು ಯಾವುದರಲ್ಲಿ ಹೋಗುತ್ತಾರೋ ಆಲೋಚಿಸಿರಿ.

ಸೂರಾರಂ ಊರಿಗೆ ಬಸ್ಸುಗಳು ಸಹ ಬರುತ್ತವೆ. ಸೂರಾರಂನಿಂದ ಇನ್ನೂ ದೂರದಲ್ಲಿ ಇರುವ ಗ್ರಾಮಗಳಿಗೆ ರಸ್ತೆ ಸೌಕರ್ಯ ಇಲ್ಲದೇ ಇರುವುದರಿಂದ ಬಸ್ಸುಗಳು ಹೋಗುವುದಿಲ್ಲ, ಆದರೆ ಇಂತಹ ಗ್ರಾಮಗಳಿಗೆ ಹೇಗೆ ಹೋಗುತ್ತಾರೆ? ಶಿವರಾತ್ರಿಗೆ ಸೂರಾರಂ ಊರಿನವರೆಲ್ಲಾ ಮಲ್ಲನ್ನ ಜಾತ್ರೆಗೆ ಹೋಗಬೇಕೆಂದು ಯೋಚಿಸಿದರು. ಇದಕ್ಕಾಗಿ ಅವರು ಒಂದು ಪ್ರತ್ಯೇಕ ಬಸ್ಸನ್ನು ಮಾತನಾಡಿದರು. ಬಸ್ಸಿನಲ್ಲಿ ಎಲ್ಲರೂ ಶಿವರಾತ್ರಿಗೆ ಮಲ್ಲನ್ನ ಜಾತ್ರೆಗೆ ಕೊಮರವೆಲ್ಲಿಗೆ ಹೋಗಿ ಬಂದರು.



ಹೀಗೆ ಯಾವ ಯಾವ ಸಂದರ್ಭಗಳಲ್ಲಿ ಪ್ರತ್ರೇಕವಾಗಿ ಬಸ್ಸುಗಳನ್ನು ಮಾತನಾಡಿಕೊಂಡು ಹೋಗುತ್ತಾರೆ. ಒಂದು ವೇಳೆ ಆ ಊರಿನಲ್ಲಿ ಬಸ್ಸುಗಳು ಇಲ್ಲದಿದ್ದರೆ ಹೇಗೆ ಹೋಗುತ್ತಾರೆ ?

ಸೂರಾರಂ ಅಂತಹ ಗ್ರಾಮಗಳು ಇನ್ನೂ ಇವೆ. ಇಂತಹ ಗ್ರಾಮಗಳಲ್ಲಿ ಯಾವ ಯಾವ ಪ್ರಯಾಣ ಸಾಧನಗಳು ಇರುತ್ತವೆ? ಅದೇ ರೀತಿ ಕೆಲವು ಊರುಗಳಿಗೆ ಬಸ್ಸುಗಳು ಬರುವುದಿಲ್ಲ. ಅಂತಹ ಊರಿನವರು ಹೇಗೆ ಪ್ರಯಾಣಗಳು ಮಾಡುತ್ತಾರೆ?

ಕೆಳಗಿನ ಪ್ರಯಾಣ ಸಾಧನಗಳ ಹೆಸರುಗಳನ್ನು ಓದಿರಿ. ಅವುಗಳಲ್ಲಿ ಯಾವವು ಯಾವ ಯಾವ ಪ್ರಾಂತಗಳಲ್ಲಿ ಉಪಯೋಗಿಸುತ್ತಾರೋ ಆಲೋಚಿಸಿ ಬರೆಯಿರಿ.

| | | | | | |
|---|---|---|---|---|---|
| ಸೈಕಲ್ | ಎತ್ತಿನ ಬಂಡಿ | ಆಟೋ | ಸ್ಕೂಟರ್ | ಟ್ರಾಕ್ಟರ್ | ರಿಕ್ಷಾ |
| ಜೀಪು | ಬಸ್ಸು | ವ್ಯಾನ್ | ಲಾರಿ | ಬಸ್ಸು | ಹಡಗು |

SCERT TELANGANA








| ಕಾಡು ಪ್ರಾಂತ್ಯಗಳಲ್ಲಿ ಪ್ರಯಾಣಿಸುವುದಕ್ಕೆ ಉಪಯೋಗ ಪಡುವವು | ರಸ್ತೆ ಇಲ್ಲದ ಗ್ರಾಮಗಳಿಗೆ ಹೋಗುವುದಕ್ಕೆ ಉಪಯೋಗ ಪಡುವವು | ಬಸ್ಸು ಇಲ್ಲದ ಗ್ರಾಮಗಳಿಂದ ಇತರ ಗ್ರಾಮಗಳಿಗೆಹೋಗುವುದಕ್ಕೆ ಉಪಯೋಗ ಪಡುವವು | ಜಾತ್ರೆಗಳಿಗೆ, ಮದುವೆಗಳಿಗೆ ಹೋಗುವುದಕ್ಕೆ ಉಪಯೋಗ ಪಡುವವು |
|---|---|---|---|
| | | | |



ಪ್ರತಿ ಗ್ರಾಮದಲ್ಲಿರುವವರಿಗೆ ಪ್ರಯಾಣ ಮಾಡುವುದಕ್ಕಾಗಿ ವಿವಿಧ ವಾಹನಗಳು ಅವಶ್ಯಕವಾಗುತ್ತವೆ. ಬಹಳ ಗ್ರಾಮಗಳಿಗೆ ರಸ್ತೆ ಸೌಕರ್ಯ ಇದೆ. ಇಂತಹ ಗ್ರಾಮಗಳಿಗೆ ಬಸ್ಸುಗಳು ಬರುತ್ತವೆ. ಬಸ್ಸುಗಳಲ್ಲಿ ಇತರ ಗ್ರಾಮಗಳಿಗೆ ಹೋಗುತ್ತಾರೆ. ರಸ್ತೆ ಸೌಕರ್ಯ ಇಲ್ಲದ ಗ್ರಾಮಗಳಿಗೆ ಹೋಗುವುದಕ್ಕೆ ಎತ್ತಿನ ಬಂಡಿಗಳನ್ನು, ಸೈಕಲ್‌ಗಳನ್ನು, ಮೋಟರ್ ಸೈಕಲ್‌ಗಳನ್ನು, ಆಟೋಗಳನ್ನು, ಜೀಪುಗಳನ್ನು ಉಪಯೋಗಿಸುತ್ತಾರೆ.



SCERT TELANGANA



ಬಂಡಿಗಳನ್ನು ಎಳೆಯುವುದಕ್ಕೆ ಎತ್ತುಗಳನ್ನು ಉಪಯೋಗಿಸುತ್ತೇವೆ. ಕೆಲವು ಬಂಡಿಗಳನ್ನು ಎಳೆಯುವುದಕ್ಕೆ ಕುದುರೆಗಳನ್ನೂ ಸಹ ಕಟ್ಟುತ್ತಾರೆ. ಆನೆಗಳು, ಕತ್ತೆಗಳು, ಒಂಟೆಗಳನ್ನು ಸಹ ಪ್ರಯಾಣಗಳಿಗೆ ಉಪಯೋಗಿಸುತ್ತಾರೆ. ಕೆಳಗಿನ ಚಿತ್ರಗಳು ನೋಡಿರಿ, ಇವುಗಳನ್ನು ನೀವು ಯಾವಾಗಲಾದರೂ ನೋಡಿದ್ದೀರಾ?











ಇತ್ತೀಚಿನ ದಿನಗಳಲ್ಲಿ ಎತ್ತಿನ ಬಂಡಿಗಳು, ಕುದುರೆ ಬಂಡಿಗಳು ಬಳಸುವುದು ಕಡಿಮೆ ಯಾಗಿವೆಯಲ್ಲವೇ! ಏಕೆ ಆಲೋಚಿಸಿರಿ.

ಕೆಲವು ಗ್ರಾಮಗಳಲ್ಲಿ ಮದುವೆಗಳಿಗೆ, ಜಾತ್ರೆಗಳಿಗೆ ಹೋಗುವುದಕ್ಕೆ ಬಸ್ಸು, ವ್ಯಾನ್, ಲಾರಿ, ಟ್ರಾಕ್ಟರ್‌ಗಳಲ್ಲಿ ಹೋಗುತ್ತಿರುತ್ತಾರೆ. ಆದರೆ ಕೆಲವು ಗ್ರಾಮಗಳಲ್ಲಿ ಈಗಲೂ ಸಹ ಎತ್ತಿನ ಬಂಡಿಗಳ ಮೇಲೆಯೇ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗುತ್ತಿರುತ್ತಾರೆ.

ಹಾಗಾದರೆ ನಿಮ್ಮ ಗ್ರಾಮದಲ್ಲಿ ಜಾತ್ರೆಗಳು, ಮದುವೆ ಮುಂತಾದವುಗಳಿಗೆ ಯಾವುದರ ಮೇಲೆ ಹೋಗುತ್ತಾರೆ?

ಕೆಲವು ಜನರು ಅವರ ಗ್ರಾಮಗಳಲ್ಲಿ ಕೆಲಸಗಳು ಸಿಗದೇ ಬೇರೆ ಊರುಗಳಿಗೆ ವಲಸೆ ಹೋಗುತ್ತಿರುತ್ತಾರೆ. ಇಂತಹವರು ತಮಗೆ ಅವಸರವಾದ ಸಾಮಗ್ರಿಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆ, ಇದಕ್ಕಾಗಿ ಎತ್ತಿನಬಂಡಿ, ಟ್ರಾಕ್ಟರ್‌ಗಳು,ವ್ಯಾನ್‌ಗಳ ಮೇಲೆ ಹೋಗುತ್ತಿರುತ್ತಾರೆ. ಕೆಲವು ಪ್ರಾಂತ್ಯಗಳಲ್ಲಿ ಹಡಗುಗಳಲ್ಲಿ ಸಹ ಪ್ರಯಾಣಿಸುತ್ತಾರೆ.



SCERT TELANGANA







## ಹೀಗೆ ಪ್ರಯಾಣ ಮಾಡಬಹುದೇ?

ಕೆಳಗಿನ ಚಿತ್ರಗಳು ನೋಡಿರಿ. ಯಾವುದರಲ್ಲಿ ಪ್ರಯಾಣ ಮಾಡುತ್ತಿದ್ದಾರೆ? ಹೀಗೆ ಪ್ರಯಾಣ ಮಾಡುವುದರಿಂದ ಏನು ನಡೆಯಬಹುದು? ಆಲೋಚಿಸಿರಿ.















ಇವುಗಳಿಂದ ನೀವು ಏನು ತಿಳಿದಿದ್ದೀರೋ ಹೇಳಿರಿ. ಚಿತ್ರಗಳಲ್ಲಿ ಇರುವ ಹಾಗೆಯೇ ಪ್ರಯಾಣಿಸುವುದು ಅಪಾಯಕಾರಿ, ಇಂತಹ ಪ್ರಯಾಣಗಳು ಮಾಡಬಾರದು.






## ಇಂದು ನಾವು ನೋಡುತ್ತಿರುವ ವಾಹನಗಳು ಹಿಂದೆಯೂ ಇದ್ದವೇ?

ಇಂದು ಆಟೋಗಳು,ಸ್ಕೂಟರುಗಳು, ಸೈಕಲುಗಳು, ಬಸ್ಸುಗಳು, ರೈಲು, ವಿಮಾನಗಳು, ಹಡಗುಗಳು ಮೊದಲಾದವುಗಳನ್ನು ಪ್ರಯಾಣಿಸುವುದಕ್ಕಾಗಿ ಉಪಯೋಗಿಸುತ್ತಿದ್ದಾರೆ. ಇವು ಹಿಂದೆಯೂ ಸಹ ಇದ್ದವೇ? ಇವು ಇಲ್ಲದ ಕಾಲದಲ್ಲಿ ಹೇಗೆ ಪ್ರಯಾಣ ಮಾಡುತ್ತಿದ್ದರು ? ನೀವು ನಿಮ್ಮ ಗ್ರಾಮದಲ್ಲಿಯ ಹಿರಿಯರನ್ನು ಇಲ್ಲವೇ ಅಜ್ಜನನ್ನು ಇಲ್ಲವೇ ಮುದುಕರನ್ನು ಅಜ್ಜಿಯನ್ನು ಹೀಗೆ ಯಾರಿಗಾದರೂ ಕೇಳಿರಿ. ಅವರು ಚಿಕ್ಕವರಾಗಿದ್ದಾಗ ಅವರು ಎಲ್ಲಿಗಾದರೂ ಪ್ರಯಾಣಿಸುವುದಾದರೆ ಹೇಗೆ ಪ್ರಯಾಣಿಸುತ್ತಿದ್ದರು ? ತಿಳಿದುಕೊಂಡು ಹೇಳಿರಿ.



## ನೀವು ಹೀಗೆ ಮಾಡಬಲ್ಲಿರಾ ?



ಕೆಲವು ಖಾಲಿ ಬೆಂಕಿ ಪೆಟ್ಟಿಗೆಗಳು ತೆಗೆದುಕೊಳ್ಳಿರಿ ಬೆಂಕಿ ಪೆಟ್ಟಿಗೆಗಳನ್ನು ಒಂದರಿಂದ ಮತ್ತೊಂದನ್ನು ದಾರದಿಂದಾಗಲಿ, ವೈರಿನಿಂದಾಗಲಿ ಕಟ್ಟಿರಿ. ಪ್ರತಿ ಪೆಟ್ಟಿಗೆಗೆ ಇಂಜಕ್ಷನ್ ಸೀಸೆ ಮುಚ್ಚಳಕ್ಕೆ ಉಪಯೋಗಿಸುವ ರಬ್ಬರುಗಳನ್ನು ಚಕ್ರಗಳಾಗಿ ಜೋಡಿಸಿ. ಮೂಂದಿರುವ ಬೆಂಕಿ ಪೆಟ್ಟಿಗೆಗೆ ದಾರ ಕಟ್ಟಿ ಎಳೆಯುತ್ತಾ ಹೋಗಿರಿ. ಬೆಂಕಿ ಪೆಟ್ಟಿಗೆ ರೈಲಿನಿಂದ ಆಟಗಳು ಆಡಿಕೊಳ್ಳಿರಿ. ಬೆಂಕಿ ಪೆಟ್ಟಿಗೆಗಳಿಂದ ಅಲ್ಲದೇ ಇನ್ನೂ ಯಾವುದರಿಂದ ಹೀಗೆ ರೈಲು ತಯಾರಿಸಿಕೊಳ್ಳಬಹುದು? ಮಾಡಿ ನೋಡಿರಿ.

## ಮುಖ್ಯ ಪದಗಳು

1. ಪ್ರಯಾಣ 2. ಪ್ರಯಾಣ ಸಾಧನಗಳು 3. ವಾಹನಗಳು

4. ಗಾಳಿಯಲ್ಲಿ ಪ್ರಯಾಣಿಸುವವು5.ನೀರಿನ ಮೇಲೆ ಪ್ರಯಾಣಿಸುವವು 6. ನೆಲದ ಮೇಲೆ ಪ್ರಯಾಣಿಸುವವು

7. ಪ್ರಯಾಣಕ್ಕೆ ಪ್ರಾಣಿಗಳು 8. ಪ್ರಯಾಣಗಳಲ್ಲಿ ಪ್ರಮಾದಗಳು 9.ಹಿಂದಿನ ಪ್ರಯಾಣ ಸಾಧನಗಳು.

## ನಾವು ಕಲಿತುಕೊಂಡಿರುವವು

- ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಹೋಗುವುದಕ್ಕಾಗಿ ವಾಹನಗಳನ್ನು ಉಪಯೋಗಿಸುತ್ತಾರೆ.
- ಪ್ರಯಾಣಿಸುವುದಕ್ಕಾಗಿ ಬಸ್ಸು, ಆಟೋ, ರೈಲು, ವಿಮಾನ, ಹಡಗುಗಳಂತಹ ಸಾಧನಗಳನ್ನು ಉಪಯೋಗಿಸುತ್ತಾರೆ.
- ಎತ್ತಿನ ಬಂಡಿಗಳು, ಕುದುರೆ ಬಂಡಿಗಳನ್ನು ಸಹ ಪ್ರಯಾಣಕ್ಕೆ ಉಪಯೋಗಿಸುತ್ತಾರೆ. ಅದೇ ರೀತಿ ಬಂಡಿಗಳನ್ನು, ಕತ್ತೆಗಳನ್ನು, ಆನೆಗಳನ್ನು ಸಹ ಅಲ್ಲಲ್ಲಿ ಪ್ರಯಾಣಕ್ಕೆ ಬಳಸುತ್ತಿದ್ದಾರೆ. ಆದರೆ ಇವುಗಳ ಬಳಕೆ ಕಡಿಮೆಯಾಗಿದೆ.
- ಪ್ರಯಾಣಿಸುವ ದೂರ, ಸಂದರ್ಭಕ್ಕೆ ತಕ್ಕಂತೆ ವಿವಿಧ ರೀತಿಯ ವಾಹನಗಳನ್ನು ಉಪಯೋಗಿಸುತ್ತಾರೆ.
- ಅತಿಯಾಗಿ ತುಂಬಿದ ವಾಹನಗಳಲ್ಲಿ, ಹೆಚ್ಚು ಮಂದಿ ಹತ್ತಿದ ಆಟೋಗಳಲ್ಲಿ ಪ್ರಯಾಣಿಸುವುದು ಅಪಾಯಕರ. ಹಾಗೆಯೇ ಪ್ರೈವೇಟ್ (ಖಾಸಗಿ) ವಾಹನಗಳಾದ ಜೀಪುಗಳು, ಟ್ರಾಕ್ಟರುಗಳೂ, ಲಾರಿಗಳು ಮೊದಲಾದವುಗಳಲ್ಲಿ ಪ್ರಯಾಣ ಮಾಡಬಾರದು.

SCERT TELANGANA





## ಇವು ಮಾಡಿರಿ.



### ವಿಷಯಾವಗಾಹನೆ

1. ಪ್ರಯಾಣ ಎಂದರೇನು ? ನೀವು ಯಾವ ಯಾವ ವಾಹನಗಳಲ್ಲಿ ಪ್ರಯಾಣ ಮಾಡುವಿರಿ ?
2. ಕೆಳಗಿನ ವಾಹನಗಳ ಹೆಸರುಗಳನ್ನು ಓದಿರಿ. ಅವುಗಳನ್ನು ಪಟ್ಟಿಯಲ್ಲಿ ಬರೆಯಿರಿ.

ಲಾರಿ, ಬಸ್ಸು, ಆಟೋ, ರೈಲು, ಟ್ರಾಕ್ಟರ್, ವಿಮಾನ, ಹಡಗು, ಕತ್ತೆ, ಕುದುರೆ, ಎತ್ತಿನ ಬಂಡಿ, ಹೆಲಿಕಾಪ್ಟರ್, ಜೀಪು, ಕುದುರೆಬಂಡಿ, ಸೈಕಲ್, ರಿಕ್ಷಾ, ಒಂಟೆ, ಆನೆ, ಟ್ರಾಕ್ಟರ್.

| ನೆಲದ ಮೇಲೆ ಹೋಗುವವು | ನೀರಿನ ಮೇಲೆ ಹೋಗುವವು | ಗಾಳಿಯಲ್ಲಿ ಹೋಗುವವು |
|---|---|---|
| | | |

3. ಸೈಕಲ್‌ಗೂ, ಮೋಟಾರ್ ಸೈಕಲ್‌ಗೂ ಮಧ್ಯ ಇರುವ ಹೋಲಿಕೆ, ವ್ಯತ್ಯಾಸಗಳೇನು ?
4. ಯಾವ ಯಾವ ಪ್ರಾಣಿಗಳನ್ನು ಪ್ರಯಾಣ ಮಾಡುವದಕ್ಕೆ ಉಪಯೋಗಿಸುತ್ತಾರೆ ?
5. ಚಿತ್ರಗಳನ್ನು ನೋಡಿರಿ.





ಚಿತ್ರದಲ್ಲಿ ತೋರಿಸಿದ ರೀತಿಯಾಗಿ ಪ್ರಯಾಣಿಸುವುದು ಅಪಾಯಕಾರಿ. ಏತಕ್ಕಾಗಿ ಎಂದರೆ.


......................................................................................................

......................................................................................................

......................................................................................................

SCERT TELANGANA








### ಚಿತ್ರ ಬಿಡಿಸಿರಿ. ಬಣ್ಣ ಹಾಕಿರಿ.

1. ನಿಮಗೆ ಇಷ್ಟವಾದ ಎರಡು ವಾಹನಗಳ ಚಿತ್ರಗಳು ಬಿಡಿಸಿ, ಹೆಸರು ಬರೆಯಿರಿ.



### ಸಮಾಚಾರ ಕೌಶಲ್ಯ – ಪ್ರಾಜೆಕ್ಟ್ ಕೆಲಸ

1. ಭಾನುವಾರದ ದಿನದಂದು ಒಂದು ಗಂಟೆಯ ಹೊತ್ತು ನಿಮ್ಮ ಬೀದಿಯಲ್ಲಿ ತಿರುಗಿದ ವಾಹನಗಳನ್ನು ನೋಡಿರಿ. ಪಟ್ಟಿಯಲ್ಲಿ ಬರೆಯಿರಿ.

| ಸಂಚರಿಸಿದ ವಾಹನದ ಹೆಸರು | ಸಂಚರಿಸಿದ ವಾಹನಗಳ ಸಂಖ್ಯೆ |
|---|---|
| | |
| | |
| | |
| | |

◆ ಯಾವ ವಾಹನಗಳು ಹೆಚ್ಚಾಗಿ ಸಂಚರಿಸಿವೆ ? ಯಾವ ವಾಹನಗಳು ಕಡಿಮೆ ಸಂಚರಿಸಿವೆ ?

2 ಜೇಡಿ ಮಣ್ಣು, ಜೋಳದ ದಂಟು, ರಟ್ಟಿನ ತುಂಡುಗಳಿಂದ ಬಸ್ಸನ್ನು /ಬಂಡಿಯನ್ನು ತಯಾರು ಮಾಡಿರಿ. ಪ್ರದರ್ಶಿಸಿರಿ.



### ಪ್ರಶಂಸೆ

1. ಪ್ರಯಾಣಕ್ಕೆ ವಾಹನಗಳಲ್ಲದೆ, ಪ್ರಾಣಿಗಳು ಸಹ ಉಪಯೋಗವಾಗುತ್ತಿವೆ ಅಲ್ಲವೇ !

   ಅವುಗಳ ಬಗ್ಗೆ ನಾವು ಹೇಗೆ ಇರಬೇಕು ?

2. ನಿಮ್ಮ ತರಗತಿಯಲ್ಲಿ ಯಾರು ಸುಂದರವಾದ ಬಸ್ಸು /ಬಂಡಿಯ ಚಿತ್ರಗಳನ್ನು ತಯಾರು ಮಾಡಿರುವರು ? ಅವು ನಿಮಗೆ ಏತಕ್ಕಾಗಿ ಇಷ್ಟವಾಯಿತು ?



### ಪ್ರಶ್ನಿಸುವುದು

1. ಹಿಂದಿನ ಕಾಲದಲ್ಲಿ ಪ್ರಯಾಣ ಮಾಡುವದಕ್ಕೆ ಯಾವುವನ್ನು ಉಪಯೋಗಿಸುತ್ತಿದ್ದರೆಂದು ತಿಳಿದುಕೊಳ್ಳುವುದಕ್ಕಾಗಿ ಅಬ್ದುಲ್ಲಾ ತನ್ನ ಅಜ್ಜನ ಹತ್ತಿರ ಹೋದನು. ಅಬ್ದುಲ್ಲಾ ಅಜ್ಜನಿಗೆ ಏನೇನು ಪ್ರಶ್ನೆಗಳನ್ನು ಕೇಳಿರಬಹುದು ?



### ನಾನು ಇವನ್ನು ಮಾಡಬಲ್ಲೆನೇ?



| | | |
|---|---|---|
| 1 | ನಮ್ಮ ಪ್ರಾಂತ್ಯದಲ್ಲಿ ಯಾವ್ಯಾವ ವಾಹನಗಳು ಸಂಚರಿಸಿವೆ ಎಂದು ಹೇಳಬಲ್ಲೆನು. | ಹೌದು/ ಇಲ್ಲ. |
| 2 | ಪ್ರಯಾಣ ಸಾಧನಗಳ ಬಗ್ಗೆ ವಿವರಿಸುತ್ತೇನೆ. ಅವುಗಳನ್ನು ಪಟ್ಟಿಯಲ್ಲಿ ಬರೆಯುತ್ತೇನೆ. | ಹೌದು/ ಇಲ್ಲ. |
| 3 | ವಾಹನಗಳ ಚಿತ್ರಗಳನ್ನು ಬಿಡಿಸಬಲ್ಲೆನು | ಹೌದು/ ಇಲ್ಲ. |
| 4 | ಯಾವ ಯಾವ ಸಂಧರ್ಭಗಳಲ್ಲಿ ಯಾವ ಯಾವ ವಾಹನಗಳನ್ನು ಉಪಯೋಗಿಸುತ್ತಾರೆಂದು ಹೇಳಬಲ್ಲೆನು | ಹೌದು/ ಇಲ್ಲ. |
| 5 | ಪ್ರಯಾಣಕ್ಕೆ ಯಾವ್ಯಾವ ಪ್ರಾಣಿಗಳನ್ನು ಉಪಯೋಗಿಸುತ್ತಾರೆಂದು ವಿವರಿಸಬಲ್ಲೆನು. | ಹೌದು/ ಇಲ್ಲ. |
| 6 | ಪ್ರಯಾಣ ಸಾಧನಗಳ ಬಗ್ಗೆ ಪ್ರಶ್ನೆಗಳನ್ನು ಕೇಳಬಲ್ಲೆನು. | ಹೌದು/ ಇಲ್ಲ. |

SCERT TELANGANA



